ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



₹ 14

ಆಗಸ್ಟ್ 2017

PACKAGE TOURS 2017

Hotel Room Accom. & South Indian Veg. Food

Charodham Yatra : 19 Days
Aug 28 Sep 13 Oct 02

Haridwar, Kempty Falls, Yamunotri, Uttarkashi, Ganganani, Gangotri, Kedarnath, Triyugi (optional), Maana, Badrinath, Rishikesh, New Delhi

*Avail Rs. *20,000/- subsidy*

Thirth Yatra : 14 Days
Oct 02 Nov 06

Kashi, Chitrakoota, Allahabad, Naimisharanya, Ayodhya, Saranath, Gaya, Bodhgaya

Kolkata Darjeeling : 16 Days
Oct 23

Bhubaneshwar, Puri, Konark, Chilka Lake, Kolkata, Siliguri, Gangtok, Chengu Lake, Harbhajan Singh Mandir, Darjeeling, Tiger Hills

Dwarka Jyothirlinga : 24 Days
Nov 02

Pushkar, Ajmer, Nathadwar, Kankroli, Eklingji, Udaipur, Mt. Abu, Mathru Gaya, Dwarka, Bet Dwarka, Nagesham, Mul Dwarka, Porbandar, Veraval, Somnath, Dakor, Ahmedabad, Ujjain, Omkareshwar, Parli, Aurangabad, Ellora, Grishneshwar, Nasik, Triyambak, Shirdi, Shanisinganapur, Bhimashankar.

North East India : 16 Days
Nov 06

Guwahati, Kamakhya, Kaziranga, Shillong, Cherrapunjee, Dawki, Bomdilla, Sela Pass, Tawang, Dirung, Bhalukpong

Nepal : 07 Days
Sep 06

Kathmandu, Pokhara, Mukthinath(optional), Manokamana, Patan

Mini Andhra : 05 Days
Sep/Nov/Dec

Mantralaya, Srishaila, Mahanandi, Ahobilam (Nava Narasimha)



Shri Hansaa Travels


Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70
: hansaatravels@gmail.com : hansaatravels.com
080-26643276 / 26543891 / 9341215612 / 9341415612

ವಿವೇಕಪ್ರಭ

ಆಗಸ್ಟ್-2017


ಸಂಪುಟ 18 ಸಂಚಿಕೆ 08













ವಿಶೇಷ ಲೇಖನ

ಧಾರಾವಾಹಿ

ವ್ಯವಸ್ಥಾಪಕ ಸಂಪಾದಕರು
ಸ್ವಾಮಿ ಆತ್ಮಜ್ಞಾನಂದ

ಸಂಪಾದಕರು
ಸ್ವಾಮಿ ಜ್ಞಾನಯೋಗಾನಂದ

ನೆರವು:
ಆರ್. ಎಸ್. ಪೂರ್ಣಾನಂದ
ಡಾ. ಕೆ. ಎಲ್. ಪ್ರಸನ್ನಾಕ್ಷೀ
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ
ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ
ಮಯೂರ್ ಗ್ರಾಫಿಕ್ಸ್, ಬೆಂಗಳೂರು

ಮುಖಪುಟ:

ಜೈ ಕಿಸಾನ್..!

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– *ಸ್ವಾಮಿ ವಿವೇಕಾನಂದ*

E-mail: mysuru.vivekaprabha@rkmm.org
Website: www.vivekaprabha.net
ಫೋನ್ : 9481533505

ಚಂದಾ ವಿವರ

ಬಿಡಿ ಪ್ರತಿ : ₹ 14
ವಾರ್ಷಿಕ : ₹ 140
ಮೂರು ವರ್ಷ : ₹ 375
ಆಜೀವ (25 ವರ್ಷ) : ₹ 3,000
ಪೋಷಕರು : ₹ 5,000 ಅಥವಾ ಹೆಚ್ಚು.
ವಿದೇಶಗಳಿಗೆ : (ಏರ್‌ಮೇಲ್)
ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ) : $ 300
ಪೋಷಕರು : $ 600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಾರ್ಥನೆ

ಮನೀಷಾ ಪಂಚಕಮ್ - ೨



ಯಾ ತಿರ್ಯಙ್ನರದೇವತಾಭಿರಹಮಿತ್ಯಂತಃ ಸ್ಫುಟಾ ಗೃಹ್ಯತೇ
ಯದ್ಭಾಸಾ ಹೃದಯಾಕ್ಷದೇಹವಿಷಯಾ ಭಾಂತಿ ಸ್ವತೋಽಚೇತನಾಃ ।
ತಾಂ ಭಾಸ್ಯೈಃ ಪಿಹಿತಾರ್ಕಮಂಡಲನಿಭಾಂ ಸ್ಫೂರ್ತಿಂ ಸದಾ ಭಾವಯನ್
ಯೋಗೀ ನಿರ್ವೃತಮಾನಸೋ ಹಿ ಗುರುರಿತ್ಯೇಷಾ ಮನೀಷಾ ಮಮ ॥ ೪॥

ಯಾವ ಚೈತನ್ಯಪ್ರಕಾಶವನ್ನು ತಿರ್ಯಗ್ಜಂತುಗಳು, ಮನುಷ್ಯರು, ದೇವತೆಗಳು — ಎಲ್ಲರೂ 'ನಾನು' ಎಂದು ಸ್ಪಷ್ಟವಾಗಿ ಗ್ರಹಿಸುತ್ತಿರುವರೊ, ಯಾವುದರ ಪ್ರಕಾಶದಿಂದ ಮನಸ್ಸು ಇಂದ್ರಿಯಗಳು ದೇಹ ವಿಷಯ ವಸ್ತುಗಳು — ಇವು ತಾವು ಅಚೇತನವಾಗಿದ್ದರೂ ಬೆಳಗುತ್ತಿರುವುವೋ, ಪ್ರಕಾಶಿಸಲ್ಪಡುವ (ಮೋಡವೇ ಮುಂತಾದ) ವಸ್ತುಗಳಿಂದ ಮರೆಯಾಗಿರುವ ಸೂರ್ಯಮಂಡಲದಂತೆ ಇರುವ ಆ ಚೈತನ್ಯಪ್ರಕಾಶವನ್ನು ಸದಾ ಯೋಚಿಸುತ್ತಾ ಮನದಲ್ಲಿ ಆನಂದದಿಂದ ಇರುತ್ತಿರುವ ಜ್ಞಾನಯೋಗಿಯೇ ಗುರುವು ಎಂಬುದು ನನ್ನ ಮತವು.

ಯತ್ಸೌಖ್ಯಾಂಬುಧಿಲೇಶಲೇಶತ ಇಮೇ ಶಕ್ರಾದಯೋ ನಿರ್ವೃತಾಃ
ಯಚ್ಚಿತ್ತೇ ನಿತರಾಂ ಪ್ರಶಾಂತಕಲನೇ ಲಬ್ಧ್ವಾ ಮುನಿರ್ನಿರ್ವೃತಃ ।
ಯಸ್ಮಿನ್ನಿತ್ಯಸುಖಾಂಬುಧೌ ಗಲಿತಧೀರ್ಬ್ರಹ್ಮೈವ ನ ಬ್ರಹ್ಮವಿದ್
ಯಃ ಕಶ್ಚಿತ್ಸ ಸುರೇಂದ್ರವಂದಿತಪದೋ ನೂನಂ ಮನೀಷಾ ಮಮ ॥ ೫ ॥

ಯಾವ ಆನಂದದ ಅತ್ಯಲ್ಪ ಭಾಗದಿಂದ ಈ ಇಂದ್ರಾದಿ ದೇವತೆಗಳೂ ಸುಖಿಗಳಾಗಿರುವರೋ, ಸಂಪೂರ್ಣವಾಗಿ ಕಲ್ಪನೆಗಳೆಲ್ಲ ಅಡಗಿ ಹೋಗಿರುವ ಚಿತ್ತದಲ್ಲಿ ಯಾವುದನ್ನು ಪಡೆದುಕೊಂಡ ಮುನಿಯು ಸುಖಿಯಾಗಿರುವನೋ, ನಿತ್ಯವಾದ ಯಾವ ಆನಂದಸಾಗರದಲ್ಲಿ ಮನಸ್ಸನ್ನು ಲಯಗೊಳಿಸಿಕೊಂಡಿದ್ದರಿಂದ ಯಾವನು ಬ್ರಹ್ಮವಿದನಲ್ಲದೆ ಬ್ರಹ್ಮವೇ ಆಗಿರುವನೋ, ಅಂಥವನು ಯಾವನೇ ಆಗಿರಲಿ, ಅವನು ನಿಜವಾಗಿ ದೇವೇಂದ್ರನಿಗೂ ನಮಸ್ಕರಿಸಲು ಯೋಗ್ಯವಾದ ಪಾದಗಳುಳ್ಳವನು ಎಂಬುದು ನನ್ನ ಮತವು.

—ಶ್ರೀ ಶಂಕರಾಚಾರ್ಯ


ಸೂಕ್ತಿಪ್ರಭ

ರಷ್ಯನ್ ಸೂಕ್ತಿಗಳು



ಕೆಡುಕೆಂಬುದು ಮಾನವನ ಸಹಜಾವಸ್ಥೆ ಎಂದು ನಾನೆಂದಿಗೂ ನಂಬಲಾರೆ; ಅದು ನನಗೆ ಇಷ್ಟವೂ ಇಲ್ಲ.

-ಫ್ಯೊದೋರ್ ದೊಸ್ತೊವ್‌ಸ್ಕಿ



ಸರಳತೆ, ಒಳ್ಳೆಯತನ ಹಾಗೂ ಸತ್ಯಗಳಿಲ್ಲದಲ್ಲಿ ಯಾವ ಶ್ರೇಷ್ಠತೆಯೂ ಇರುವುದಿಲ್ಲ.

-ಲಿಯೋ ಟಾಲ್‌ಸ್ಟಾಯ್




ಎಲ್ಲ ಸೌಂದರ್ಯಕ್ಕೂ ಇನ್ನೆಲ್ಲೋ ಅದನ್ನು ನೋಡುವ ಒಂದು ಕಣ್ಣಿರಬೇಕು. ಎಲ್ಲ ಸತ್ಯಕ್ಕೂ ಅದನ್ನು ಕೇಳುವ ಕಿವಿ ಎಲ್ಲೋ ಇರಬೇಕು. ಎಲ್ಲ ಪ್ರೀತಿಗೂ ಅದನ್ನು ಸ್ವೀಕರಿಸುವ ಹೃದಯ ಎಲ್ಲೋ ಒಂದೆಡೆ ಇರಬೇಕು.

-ಇವಾನ್ ಪಾನಿನ್



ನಮ್ಮ ಜೀವನದೊಂದಿಗೆ ಸದಾ ಹೆಣೆಯಲಾದ ದುಃಖಗಳ ನಡುವೆ
ಎಲ್ಲೋ ಉಜ್ಜ್ವಲ ಬೆಳಕು ಮಿಂಚಿ ಮರೆಯಾಗುವುದು.


-ನಿಕೊಲ್ಯಾ ಗೊಗೊಲ್



'ಏನೇನು ಇವೆಯೋ ಅವೆಲ್ಲ ಏಕಿವೆ?' ಎಂದು ಪ್ರಶ್ನಿಸುವುದು ಎಷ್ಟೊಂದು ಅಸಹಜವೋ, ಅಂತೆಯೇ 'ಜೀವಂತವಾಗಿರುವವು ಏಕೆ ಸಾಯುತ್ತವೆ?' ಎಂದು ಪ್ರಶ್ನಿಸುವುದೂ ಅಷ್ಟೇ ಸಹಜ.

-ನಿಕೊಲ್ಯಾ ಫ್ಯೋದೊರೊವ್

Socio Spiritual Educational Films



For online video visit:
https://www.youtube.com/channel/UCWsAANFvbVOZQXovcS2v-yQ

For DVD contact H.T. Nagendra 9341219116, nagendra.ht@gmail.com



ಬೆಳಕ ಬೀರುವ ಹಾದಿ

ಭಾಗ ೩

ಹಿಂದಿನ ಎರಡು ಸಂಚಿಕೆಗಳಲ್ಲಿ ಧರ್ಮಗಳ ಉಗಮ ಹಾಗೂ ಬೆಳವಣಿಗೆ, ಅವುಗಳಿಗೆ ಮೂಲವಾದ ಅಲೌಕಿಕ ದಿವ್ಯಾನುಭವಗಳು — ಈ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಆಧ್ಯಾತ್ಮಿಕ ಅನುಭೂತಿ ಮಹಾಪುರುಷರ ಪಾಲಿಗಷ್ಟೇ ಸೀಮಿತವಾಗದೆ, ಅದು ಜನಸಾಮಾನ್ಯರೂ ಸೇರಿದಂತೆ ಇಡೀ ಮನುಕುಲವನ್ನೇ ಮುನ್ನಡೆಸಬಲ್ಲ ಬೆಳಕಿನ ಮಾರ್ಗವಾಗಿ ಹೇಗೆ ವಿಸ್ತರಿಸಿತು ಎಂಬ ಅಂಶ ಕೂಡ ಅತ್ಯಂತ ಕುತೂಹಲಕಾರಿಯಾದ ಸಂಗತಿಯಾಗಿದೆ.

ಅಭಿವ್ಯಕ್ತಿಯ ತುಡಿತ

ದಿವ್ಯಾನುಭವವನ್ನು ಪಡೆದು ಭಗವದ್ದರ್ಶನವನ್ನು ಹೊಂದಿದ ಮಹಾತ್ಮರಲ್ಲೆಲ್ಲ ಎರಡು ಬಗೆಯ ಪ್ರವೃತ್ತಿಯನ್ನು ನಾವು ಗಮನಿಸಬಹುದು: ೧) ತಮ್ಮ ಅನುಭವ, ಅದರ ಪ್ರಭಾವವನ್ನು ಅಡಗಿಸುವ, ಇತರರಿಂದ ಗುಪ್ತವಾಗಿಡುವ ಪ್ರಯತ್ನ. ೨) ಇತರರಿಗೂ ತನ್ನ ಅನುಭವಗಳನ್ನು ಹೇಳುವ, ಆ ಮೂಲಕ ಅವರನ್ನು ದಿವ್ಯ ಮಾರ್ಗದಲ್ಲಿ ಮುನ್ನಡೆಸಲು ಪ್ರೇರೇಪಿಸುವ ಪ್ರಯತ್ನ. ಇವುಗಳಲ್ಲಿ ಮೊದಲನೆಯದು ಪ್ರಧಾನವಾಗಿ ಸ್ವ-ರಕ್ಷಣೆಗಾಗಿ. ಯೋಗಿಗಳು, ಸಂತರು ಗುಪ್ತವಾಗಿ ಇರುತ್ತಿದ್ದರೆ, ಅದರರ್ಥ ತಮ್ಮ ಅನುಭವ, ಜ್ಞಾನಗಳನ್ನು ಇತರರಿಗೆ ತಿಳಿಸಬಾರದೆಂದಲ್ಲ; ಆದರೆ ಅಜ್ಞಾನಿಗಳು ಹಾಗೂ ದಿವ್ಯಾನುಭವವೆಂದರೆ ಏನೆಂದೇ ಅರ್ಥವಾಗದವರು ಸಂತರು ಹಾಗೂ ಯೋಗಿಗಳನ್ನು ಲೇವಡಿ ಮಾಡುತ್ತಾರೆ, ಅವರಿಗೆ ತೊಂದರೆ ಕೊಡುತ್ತಾರೆ. ಈ ಕಾರಣದಿಂದ ಅವರಿಂದ ದೂರವಿರಬಯಸುತ್ತಾರೆ. ಇಂಥ ಗುಪ್ತ ಯೋಗಿಗಳು ಎಲ್ಲ ಕಾಲದಲ್ಲೂ ಇರುತ್ತಿದ್ದರು, ಈಗಲೂ ಇರಬಹುದು. ಆದರೆ ಇನ್ನೊಂದು ಬಗೆಯ ಸಂತರಿದ್ದಾರೆ — ಅವರು ಯಾವ ರೀತಿಯ ಭಯಕ್ಕೂ ಒಳಗಾಗದೆ, ಸ್ವಚ್ಛಂದವಾಗಿ ತಮ್ಮ ದಿವ್ಯಾನಂದದಲ್ಲೇ ತೇಲಾಡುವವರು. ಅವರು ಎರಡನೆಯ ಪ್ರವೃತ್ತಿಯನ್ನು ಹೊಂದಿರುವವರು: ಪಂಡಿತ, ಪಾಮರರೆನ್ನದೆ ಎಲ್ಲರಿಗೂ ತಮ್ಮ ದಿವ್ಯ ದರ್ಶನವನ್ನು ಕುರಿತು ಹೇಳುವವರು; ಅವರಲ್ಲಿ ಯೋಗ್ಯರು ಅಥವಾ ಅರ್ಹರು ಕಂಡುಬಂದರೆ, ತಮ್ಮ ಆಧ್ಯಾತ್ಮಿಕ ಅನುಭವಗಳನ್ನೆಲ್ಲ ತಿಳಿಸಿ ಹೇಳುವವರು. ಮುಂದೆ ಈ ಅನುಭವಗಳೇ ದಾಖಲಿಸಲ್ಪಡುತ್ತವೆ; ಕಾಲಾನುಕ್ರಮದಲ್ಲಿ ಅವೇ ಶ್ರೇಷ್ಠ ಆಧ್ಯಾತ್ಮಿಕ ಗ್ರಂಥಗಳಾಗುತ್ತವೆ. ವೇದ, ಉಪನಿಷತ್ತು, ಗೀತೆ, ಬೈಬಲ್, ಧಮ್ಮಪದಗಳೆಲ್ಲ ಹೀಗೆಯೇ ದಾಖಲಿಸಲ್ಪಟ್ಟ ದಿವ್ಯಗ್ರಂಥಗಳಾಗಿವೆ. ಸಾಧನೆಯ ಮಾರ್ಗಗಳೆಲ್ಲ ಇವುಗಳನ್ನು ಆಧಾರವಾಗಿಟ್ಟುಕೊಂಡೇ ಹೊರಡುತ್ತವೆ. ಮುಂದೆ ಇವೇ ಪ್ರಧಾನ ಧರ್ಮಗಳಾಗಿ ರೂಪುಗೊಳ್ಳುತ್ತವೆ.

ಒಬ್ಬೊಬ್ಬ ಸಂತನ ಅನುಭವಗಳನ್ನೂ ಅವರ ಶಿಷ್ಯಂದಿರು ಇದೇ ರೀತಿ ಬರೆದಿಡುವುದು ಜಗತ್ತಿನ ಎಲ್ಲೆಡೆ ಕಂಡುಬಂದಿದೆ. '**ಶ್ರೀರಾಮಕೃಷ್ಣ ವಚನವೇದ**'ವು ಈ ಬಗೆಯ ಗ್ರಂಥಗಳಲ್ಲಿ ಕಿರೀಟಪ್ರಾಯದ್ದಾಗಿದೆ. ಮಹಾಪುರುಷನೊಬ್ಬನ ಅಭಿವ್ಯಕ್ತಿಯ ತುಡಿತ ಎಷ್ಟು ಪ್ರಬಲವಾದದ್ದು ಎಂಬುದನ್ನು ಈ ಕೃತಿಯ ಉದ್ದಕ್ಕೂ ಕಾಣಬಹುದಾಗಿದೆ. ಭಕ್ತಿಮಾರ್ಗದ ಸಾಧು-ಸಂತರ ಹಾಡುಗಳಲ್ಲೂ, ಶಿವಶರಣರ ವಚನಗಳಲ್ಲೂ, 'ಶ್ರೀ ರಮಣ ಮಹರ್ಷಿಗಳೊಡನೆ ಮಾತುಕತೆ' ಮುಂತಾದ ಕೃತಿಗಳಲ್ಲೂ ಈ ಪ್ರವೃತ್ತಿ ದಟ್ಟವಾಗಿರುವುದನ್ನು ಕಾಣಬಹುದು. ಇಂಥ ಪ್ರವೃತ್ತಿಯನ್ನು ವೈಯಕ್ತಿಕ ತುಡಿತವಾಗಿ ಕಾಣದೆ, ದಿವ್ಯತೆಯು ಸಕಲ ಮಾನವಕೋಟಿಯ ಹೃದಯಗಳಲ್ಲಿ ವ್ಯಾಪಕಗೊಳ್ಳಲು ಹವಣಿಸುತ್ತಿರುವ ದೈವೀಶಕ್ತಿಯ ದಿವ್ಯಪ್ರವೃತ್ತಿಯೆಂದೇ ಪರಿಗಣಿಸಬೇಕು. ಜಾತಿ, ಮತ, ಪಂಥ, ಲಿಂಗಭೇದ, ವರ್ಣಭೇದಗಳಿಲ್ಲದೆ ಈ ಶಕ್ತಿ ಎಲ್ಲೆಡೆ ಮುನ್ನುಗ್ಗುತ್ತಿದೆ. ಧರ್ಮವು ಕಟ್ಟುಪಾಡುಗಳ, ಮತಾಂಧತೆಯ ಸೀಮಿತ ಪಂಥಗಳ ನಡುವೆ ಸಿಲುಕಿ ಉಸಿರುಗಟ್ಟುವಂತೆ ಆದಾಗಲೆಲ್ಲ ಈ ಶಕ್ತಿಯೇ ಅಂತಹ ಎಲ್ಲ ಬಂಧಗಳನ್ನೂ ಕಡಿದು ಹಾಕುವುದು; ಅದು ಎಲ್ಲರೊಂದಿಗೆ ಮುನ್ನುಗ್ಗಿ, ವಿಶಾಲವಾರಿಧಿಯಲ್ಲಿ ಒಂದಾಗುವಂತೆ ಮಾಡುವುದು.

ಹೃದಯದಿಂದ ಹೃದಯಕ್ಕೆ

ಧಾರ್ಮಿಕ ಗ್ರಂಥಗಳು ಆಧ್ಯಾತ್ಮಿಕ ಮಾರ್ಗಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ, ನಿಜ. ಆದರೆ ವಾಸ್ತವವಾಗಿ

ಆಧ್ಯಾತ್ಮಿಕತೆ ವ್ಯಾಪಕಗೊಳ್ಳುವುದು ಗ್ರಂಥಗಳಿಂದಲ್ಲ, ವ್ಯಕ್ತಿಯಿಂದ ವ್ಯಕ್ತಿಗೆ ದಾಟಿಸಲ್ಪಡುವ ಮೂಲಕ. ದಿವ್ಯಾನುಭವ, ಸಾಕ್ಷಾತ್ಕಾರ ಹೊಂದಿದ ವ್ಯಕ್ತಿಯ ಸುತ್ತ ಸಮಾನ ಆಧ್ಯಾತ್ಮಿಕ ಪ್ರವೃತ್ತಿಯನ್ನು ಹೊಂದಿದ ವ್ಯಕ್ತಿಗಳ ವಲಯವೊಂದು ರೂಪುಗೊಳ್ಳುತ್ತದೆ. ಆ ವಲಯವೇ ಅವನ ಪ್ರಥಮ ಶಿಷ್ಯವರ್ಗ. ತಮ್ಮ ಗುರುವಿನ ನೇರ ಶಿಷ್ಯರಾದ ಅವರು ಆ ಗುರುವಿನ ಅಸಾಧಾರಣ ಪ್ರಭಾವಲಯಕ್ಕೆ ಒಳಗಾಗಿ, ತಾವೂ ಆಧ್ಯಾತ್ಮಿಕವಾಗಿ ಮುಂದುವರಿಯುತ್ತಾರೆ. ತಮ್ಮ ಗುರುವಿನ ಆದರ್ಶ, ಉಪದೇಶಗಳನ್ನು ಎಲ್ಲೆಡೆ ಹರಡುವ ಉತ್ಸಾಹ ಅವರಲ್ಲಿ ಅಧಿಕವಾಗಿರುತ್ತದೆ. ಅವರೂ ತಮ್ಮ ಶಿಷ್ಯಂದಿರ ಮೂಲಕ ಈ ಆಧ್ಯಾತ್ಮಿಕ ಪರಂಪರೆ ಮುಂದುವರಿಯುವಂತೆ ಮಾಡುತ್ತಾರೆ. ಗುರು-ಶಿಷ್ಯ ಪರಂಪರೆಯ ಈ ತಲೆಮಾರು ಗಳಲ್ಲಿ ತಮ್ಮ ಆದಿಗುರುವಿನ ಆದರ್ಶ ಬದಲಾಗದೆ ಮುಂದುವರಿಯು ವಂತೆ ಮಾಡಲು ಧಾರ್ಮಿಕ ಗ್ರಂಥಗಳು ಸಹಾಯ ಮಾಡುತ್ತವೆ. ಆತನ ಉಪದೇಶಗಳು ಅಲ್ಲಿ ದಾಖಲಾಗಿರುವುದರಿಂದ, ನೇರ ಅವುಗಳಿಂದ ಸ್ಫೂರ್ತಿ ಪಡೆಯುವುದೂ ಸಾಧ್ಯವಾಗುತ್ತದೆ. ಆದರೆ ಗ್ರಂಥದ ಮೌಲಿಕತೆ ಹಾಗೂ ಶ್ರೇಷ್ಠತೆಗೆ ಶಕ್ತಿ ಬರುವುದು ಆ ಪರಂ ಪರೆಯ ಜೀವಂತ ಸಾಧು-ಸಂತರಿಂದ ಎಂಬುದು ಬಹಳ ಮುಖ್ಯವಾದ ಸಂಗತಿ. 'ಹಣತೆಯಿಂದ ಹಣತೆ ಹಚ್ಚಿದಂತೆ' — ಇದು ಇಂತಹ ಗುರು-ಶಿಷ್ಯ ಪರಂಪರೆಗೆ ನೀಡಿರುವ ಸುಂದರ ವಾದ ಉಪಮೆ. ಹೀಗೆ ಆಧ್ಯಾತ್ಮಿಕತೆ, ದಿವ್ಯತೆ ಜೀವಂತವಾಗಿಲ್ಲದ ಧರ್ಮಗಳು ಕ್ರಮೇಣ ಕ್ಷೀಣಿಸುತ್ತವೆ; ಪ್ರೀತಿ, ಸತ್ಯ, ತ್ಯಾಗ, ವೈರಾಗ್ಯ, ಶಾಂತಿ, ಸಾಮರಸ್ಯಗಳು ಮರೆಯಾಗಿ, ಕೇವಲ ಮತಾಂ ಧತೆ, ಅಜ್ಞಾನ, ದ್ವೇಷ, ಕ್ರೌರ್ಯಗಳು ಧರ್ಮದ ಹೆಸರಿನಲ್ಲಿ ಮೆರೆದಾಡುತ್ತವೆ. ಧರ್ಮದ ನಿಜವಾದ ತಿರುಳು ಸತ್ತು ಹೋಗು ತ್ತದೆ.

ಭಾರತ: ದಿವ್ಯಮಾರ್ಗಗಳ ತವರೂರು

ಬಹುಶಃ ಪ್ರಪಂಚದ ಬೇರೆ ದೇಶದಲ್ಲೆಲ್ಲೂ ಕಂಡುಬರದಷ್ಟು ವ್ಯಾಪಕವಾದ, ಸಮಗ್ರವಾದ ಹಾಗೂ ಸಮೃದ್ಧವಾದ ಧಾರ್ಮಿಕ - ಆಧ್ಯಾತ್ಮಿಕ ಪ್ರಯೋಗಗಳು ಭಾರತದಲ್ಲಿ ನಡೆದಿವೆ. ಅನೇಕ ಸಹಸ್ರ ವರ್ಷಗಳ ಇತಿಹಾಸದಲ್ಲಿ ಅದೆಷ್ಟೋ ಆಧ್ಯಾತ್ಮಿಕ ಮಾರ್ಗ ಗಳು ಇಲ್ಲಿ ರೂಪುಗೊಂಡಿವೆ, ಎಷ್ಟೋ ಮಂದಿ ಆಧ್ಯಾತ್ಮಿಕ ಮಹಾ ವ್ಯಕ್ತಿಗಳು ಇಲ್ಲಿ ಉದಿಸಿ ಬಂದಿದ್ದಾರೆ. ಅದಕ್ಕನುಗುಣವಾಗಿ ಜಗ ತ್ತಿನ ಪ್ರಧಾನ ಧರ್ಮಗಳೆಲ್ಲ ಇಲ್ಲೇ ಹುಟ್ಟಿವೆ. ವೈದಿಕ, ಬೌದ್ಧ, ಜೈನ, ಸಿಖ್ ಮೊದಲಾದ ಪ್ರಮುಖ ಧರ್ಮಗಳೊಂದಿಗೆ, ಹಿಂದೂ ಧರ್ಮದಲ್ಲೇ ಶೈವ, ವೈಷ್ಣವ, ಶಾಕ್ತ, ಗಾಣಾಪತ್ಯ, ಸೌರ, ರಾಮಾ ಯತ ಮೊದಲಾದ ಮತಗಳೂ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ತತ್ತ್ವಗಳಿಗೆ ಅನುಗುಣವಾಗಿ ಅನೇಕ ಒಳಪಂಗಡಗಳೂ, ತಂತ್ರ, ಶ್ರೀವಿದ್ಯಾ ಮೊದಲಾದ ಉಪಾಸನಾಮಾರ್ಗಗಳೂ, ದಶನಾಮಿ ಮೊದಲಾದ ಸಂನ್ಯಾಸ ಪರಂಪರೆಗಳೂ ರೂಪುಗೊಂಡಿವೆ. ಈ ಎಲ್ಲ ವೈವಿಧ್ಯಗಳ ನಡುವೆ ಸಾಕಷ್ಟು ಕೊಡು-ಕೊಳ್ಳುವಿಕೆಗಳಾಗಿವೆ; ಬಿಕ್ಕಟ್ಟು-ಸಂಘರ್ಷಗಳೇನಿದ್ದರೂ ಆಯಾ ಮತಗಳ ನಿಷ್ಠೆಯನ್ನು ಅವಲಂಬಿಸಿವೆ. ಭಾರತದ ಧಾರ್ಮಿಕ ಪಂಗಡಗಳೆಂದೂ ಅಸ ಹನೆಯ, ಮತಾಂಧತೆಯ ಕುಲುಮೆಯಾಗಲಿಲ್ಲ. ಪ್ರತಿಯೊಬ್ಬ ನಿಗೂ ಪ್ರತಿಯೊಂದು ಪಂಥಕ್ಕೂ ತಮ್ಮದೇ ಆದ ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಇಲ್ಲಿ ನೀಡಲಾಗಿದೆ. ಧರ್ಮ ಇಲ್ಲಿ ನಿಂತ ನೀರಾಗಲಿಲ್ಲ; ಒಂದೇ ಪ್ರದೇಶದಲ್ಲಿ ಕೊಳೆ-ಕೊಚ್ಚೆ, ರೋಗಾಣುಗಳಿಂದ ತುಂಬಿದ ಭಯಾನಕ ಪ್ರದೇಶವಾಗ ಲಿಲ್ಲ. ಅನೇಕ ಸಂತರು, ಅವತಾರ ಪುರುಷರು ಇಲ್ಲಿ ಹಲವು ನದೀ ಪ್ರವಾಹಗಳಂತೆ ಬಂದರು. ಹಲವು ಉಪನದಿಗಳು, ಸಹಸ್ರಾರು ತೊರೆಗಳು ಅವುಗಳನ್ನು ಬಂದು ಸೇರಿದವು. ಎಲ್ಲವೂ ಒಂದೇ ಮಹಾಸಾಗರದತ್ತ ಸಾಗುವ ಒಂದು ದಿವ್ಯ ಗಮನವೆಂಬುದನ್ನು ಇಲ್ಲಿನ ಮಹಾತ್ಮರಾರೂ ಮರೆಯಲಿಲ್ಲ. ಇದೇ ಇಲ್ಲಿನ ಧಾರ್ಮಿಕ ವೈಶಾಲ್ಯಕ್ಕೆ, ವಿಶಾಲ ಹೃದಯಕ್ಕೆ ಕಾರಣವಾಯಿತು. ನಡುವೆ ಐತಿಹಾಸಿಕವಾಗಿ ಕೆಲವೊಂದು ಏರುಪೇರುಗಳಿದ್ದವು; ಸಾಮಾಜಿಕ, ಆರ್ಥಿಕ, ರಾಜಕೀಯ ತಲ್ಲಣಗಳಿಂದ ನಮ್ಮ ದೇಶ ಕುಗ್ಗಿ ಹೋಯಿತು. ಆದರೆ ಎಂದೂ ಇಲ್ಲಿನ ಧಾರ್ಮಿಕ, ಆಧ್ಯಾತ್ಮಿಕ ಪರಂಪರೆ ಬತ್ತಿಹೋಗಲಿಲ್ಲ. ಅದು ವಿಸ್ತರಿಸುತ್ತಲೇ ಹೋಯಿತು.

ಸಾಕ್ಷಾತ್ಕಾರದ ಹಾದಿ

ವ್ಯಕ್ತಿಯೊಬ್ಬನು ಸಾಮಾನ್ಯರಂತೆ ಜನಿಸಿ, ಅದೇ ಕಣ್ಣು, ಕಿವಿ, ಮೂಗು, ಇಂದ್ರಿಯಗಳನ್ನು ಹೊತ್ತು, ಅದೇ ರೀತಿ ನಾನಾ ಬಯಕೆ ಗಳನ್ನು ಹೊತ್ತು ಬೆಳೆಯುತ್ತ, ಇದ್ದಕ್ಕಿದ್ದಂತೆ ಅದೆಲ್ಲಿಂದಲೋ ವೈರಾಗ್ಯದ ಗಾಳಿ ಬೀಸಿ ಬಂದಾಗ ತ್ಯಾಗಜೀವನವನ್ನರಸಿ ಹೋಗು ತ್ತಾನಲ್ಲ, ಅದೇಕೆ? ಎಲ್ಲ ಸರಿಯಾಗಿದೆ, ಎಲ್ಲರಂತೆ ಬದುಕುತ್ತಿದ್ದ ಒಬ್ಬ ವ್ಯಕ್ತಿ ಏನೋ ಒಂದು ಅಲ್ಪ ನೆಪದಿಂದ ಎಲ್ಲವನ್ನು ಬಿಟ್ಟು ದೂರಹೋಗಿ ಸಂನ್ಯಾಸಿಯಾದ, ಏಕೆ? ನಮ್ಮಲ್ಲಿ ಇಂಥ ಪ್ರಶ್ನೆ ಗಳು ಏಳುತ್ತವೆ; ನಮ್ಮ ನಡುವೆ ಇಂಥ ಘಟನೆಗಳು ಎಷ್ಟೋ ನಡೆಯುತ್ತವೆ. ವ್ಯಕ್ತಿಯೊಬ್ಬನ ಜೀವನ ಬದಲಾಗುವುದೂ ಅಷ್ಟೇ ಸಹಜವಾಗಿದೆ. ಎಲ್ಲರಂತೆ ಸಹಜವಾದ ಜೀವನ ನಡೆಸದೆ, ಆಧ್ಯಾ ತ್ಮಿಕ ಜೀವನದತ್ತ ತುಡಿಯುವ ವ್ಯಕ್ತಿಯನ್ನು ಸಮಾಜ ವಿಚಿತ್ರ ವೆಂಬಂತೆ ನೋಡುವುದು; ಆದರೆ ಅದೇ ಸಮಾಜ ಮುಂದೊಂದು ದಿನ ಅವನನ್ನು ದೇವರೆಂದೇ ಪೂಜಿಸುವುದು. ಇದಕ್ಕೆ ಕಾರಣ ವೊಂದೇ — ಅವನು ಹಿಡಿದಿರುವುದು ಸಾಮಾನ್ಯರ ಹಾದಿಯಲ್ಲ, ಸಾಕ್ಷಾತ್ಕಾರದ ಹಾದಿ.

ಆಧ್ಯಾತ್ಮಿಕ ಪ್ರೇರಣೆ ಯಾರಿಗೆ, ಯಾವಾಗ, ಯಾವ ರೂಪ ದಲ್ಲಿ ಬಂದುಬಿಡುವುದು ಎಂದು ಖಚಿತವಾಗಿ ಹೇಳಲಾಗದು. ಇದು ಇಂದು ನಿನ್ನೆಯ ಕಥೆಯಲ್ಲ; ನಮ್ಮ ಪ್ರಾಚೀನ ಇತಿಹಾಸವೆಲ್ಲ ಇಂತಹ ತ್ಯಾಗ, ವೈರಾಗ್ಯಗಳ ಕಥೆಗಳಿಂದ ತುಂಬಿದೆ. ತಂದೆ ವ್ಯಾಸ ರನ್ನೇ ಮೀರಿಸಿ ನಿರ್ಲಿಪ್ತತೆ, ವೈರಾಗ್ಯ, ಜ್ಞಾನಗಳನ್ನು ಹೊಂದಿದ ಶುಕಮುನಿಯಾಗಲಿ, ಭಗವಂತನ ನಾಮವನ್ನು ಕೇಳಿದಕೂಡಲೇ ತಪಸ್ಸು ಮಾಡುವ ತವಕ ಹುಟ್ಟುತ್ತಿದ್ದ ಧ್ರುವನಾಗಲಿ, ಹರಿನಾಮ ವಲ್ಲದೆ ಬೇರೇನನ್ನೂ ನಂಬದ ಬಾಲಕ ಪ್ರಹ್ಲಾದನಾಗಲಿ ಕೇವಲ ಪುರಾಣದಲ್ಲಿ ಬರುವ ಕಥಾಪಾತ್ರಗಳಾಗಿ ಉಳಿಯಲಿಲ್ಲ; ಪ್ರತಿ ಯೊಂದು ಕಾಲಘಟ್ಟದಲ್ಲೂ, ಒಂದೊಂದು ಪ್ರಾಂತದಲ್ಲೂ ಅದೇ ರೀತಿಯ ಮಹಾತ್ಮರು ಉದಿಸಿ ಬಂದರು. ಜನಮನದ ನರನಾಡಿ

ಗಳಲ್ಲಿ ಇಂಥ ಕಥೆಗಳ ದಿವ್ಯಪ್ರಭಾವ ಇಂದಿನವರೆಗೂ ಹರಿದು ಕೊಂಡು ಬಂದಿದೆ. ಇದರೊಂದಿಗೆ ಐತಿಹಾಸಿಕ ವ್ಯಕ್ತಿಗಳಾದ ಬುದ್ಧ, ಮಹಾವೀರ, ಶಂಕರ, ಮೀರಾಬಾಯಿ, ಚೈತನ್ಯರ ಅದ್ಭುತ ಜೀವನಗಳಿವೆ. ಇನ್ನೂ ಎಷ್ಟೆಷ್ಟೋ ಸಂತರ, ಭಕ್ತರ ಜೀವನಚರಿತ್ರೆ ಗಳು ನಮಗೆ ಕಲಿಸಿಕೊಡುವುದು ತ್ಯಾಗ, ವೈರಾಗ್ಯ, ಭಕ್ತಿ, ಪ್ರೇಮ ಗಳನ್ನು; ಎಲ್ಲ ಸಾಧನೆಗಳ ಧ್ಯೇಯವಾದ ಭಗವಂತನ ಅಸ್ತಿತ್ವ ವನ್ನು; ಕಣ್ಣಿಗೆ ಕಾಣುವ ಜಗತ್ತಿನ ಸುಖದುಃಖಗಳಾಚೆಗೆ ದೂರ ವ್ಯಾಪಿಸಿರುವ ಶಾಶ್ವತ ಆನಂದದ ನೆಲೆಯನ್ನು. ಹೀಗೆ ಒಂದು ವರ್ತುಲ ಇಲ್ಲಿ ಪೂರ್ಣವಾಗುತ್ತದೆ: ಮಹಾತ್ಮರ ದಿವ್ಯಾನುಭವ; ಅದರಿಂದ ಸಮಾಜದ ಮೇಲೆ ಪ್ರೇರಣೆ; ಸಾಮಾನ್ಯರಿಗೆ ಧರ್ಮ ಮಾರ್ಗ, ಉಪದೇಶ; ಅಂಥ ಸಮಾಜದಿಂದ ಮತ್ತೆ ಮಹಾತ್ಮರ, ಸಾಧು-ಸಂತರ ಆವಿರ್ಭಾವ.

ತೀರ ಪ್ರಾಚೀನ ಕಾಲದಿಂದಲೇ ಭಾರತದ ಮೇಲೆ ನಡೆದ ಪರಕೀಯರ ಆಕ್ರಮಣಗಳಾಗಲಿ, ರಾಜಕೀಯ, ಸಾಮಾಜಿಕ ಅಸಮತೋಲನಗಳಾಗಲಿ, ನಮ್ಮ ಮೇಲೆ ವ್ಯವಸ್ಥಿತವಾಗಿ ನಡೆದ ಸಾಂಸ್ಕೃತಿಕ ದಬ್ಬಾಳಿಕೆಯಾಗಲಿ ಈ ಆಧ್ಯಾತ್ಮಿಕ ಪ್ರವಾಹದ ಗತಿ ಯನ್ನು ತಡೆಯಲಾಗಲಿಲ್ಲ. ಮಹಾತ್ಮರು ಇಲ್ಲಿ ಉದಯಿಸಿ ಬಂದಷ್ಟು ಬೇರೆಲ್ಲೂ ಬರಲಿಲ್ಲ. ಧರ್ಮಮಾರ್ಗಗಳು ಇಲ್ಲಿ ನಂತೆ ಜೀವಂತವಾಗಿ ಎಲ್ಲೂ ಕಂಡುಬರಲಿಲ್ಲ. ಸಮಾಜದಲ್ಲೂ ಇಲ್ಲಿ ನಂತೆ ಧಾರ್ಮಿಕಪ್ರವೃತ್ತಿ ಬೇರೆ ಕಡೆ ಜೀವನದ ಆಳಕ್ಕೆ ಇಳಿಯ ಲಿಲ್ಲ. ಈಚಿನ ದಿನಗಳಲ್ಲಿ ಸುದ್ದಿಮಾಧ್ಯಮಗಳು, ಅಂತರ್ಜಾಲ, ಆಧುನಿಕ ಯಂತ್ರೋಪಕರಣಗಳು ಹಾಗೂ ಜಾಗತೀಕರಣದ ಪ್ರಭಾವಗಳು ನಮ್ಮ ಸಾಂಸ್ಕೃತಿಕ, ಧಾರ್ಮಿಕ ಅಡಿಪಾಯವನ್ನೇ ಅಲುಗಾಡಿಸುವಂತೆ ಕಾಣುತ್ತಿದೆಯೆಂದು ಹಲವೆಡೆ ಆತಂಕದ ಧ್ವನಿ ಕೇಳಿಬರುತ್ತಿದೆ. ಆದರೆ ಇದು ನಿಜವಲ್ಲ. ಸಹಸ್ರಾರು ವರ್ಷ ಗಳ ಇತಿಹಾಸದಲ್ಲಿ ಇದಕ್ಕಿಂತ ನೂರಪಾಲು ಹೆಚ್ಚಿನ ಅಪಾಯಗಳು ಹಲವು ಬಾರಿ ಬಂದೊದಗಿದ್ದವು; ಒಂದಲ್ಲ ಒಂದು ರೀತಿ ನಮ್ಮ ಸಂಸ್ಕೃತಿ, ಧರ್ಮ ಅವನ್ನೆಲ್ಲ ಪಾರಾಗಿ ಬಂದಿವೆ. ಹಲವು ಬಾರಿ ದೈವೀಶಕ್ತಿಯ ಬಲದಿಂದಲೇ ನಾವು ಪಾರಾಗಿದ್ದೇವೆ ಎನ್ನುವುದೂ ನಿಜ. ಅವುಗಳಿಗೆ ಹೋಲಿಸಿದರೆ, ಈಗಿನ 'ಭಯಾನಕ ಆಧುನೀ ಕರಣ' ತೀರ ಅಲ್ಪವಾದದ್ದು, ಕ್ಷಣಿಕವಾದದ್ದು. ಮತ್ತೆ ಧಾರ್ಮಿಕ, ಸಾಂಸ್ಕೃತಿಕ ಸೆಲೆ ನೂರುಪಾಲು ಶಕ್ತಿಯಿಂದೊಡಗೂಡಿ ಹೊರ ಹೊಮ್ಮುವ ಎಲ್ಲ ಲಕ್ಷಣಗಳೂ ಕಾಣಿಸುತ್ತಿವೆ.

ಜೀವನ ಮತ್ತು ತತ್ತ್ವ

ಈ ಎಲ್ಲ ಆಧ್ಯಾತ್ಮಿಕ ಪ್ರಭಾವಗಳು ಜನಸಾಮಾನ್ಯರ ದೈನಂದಿನ ಜೀವನವನ್ನು ಗಾಢವಾಗಿ ತಟ್ಟಿವೆ. ಪ್ರಾತಃಕಾಲದಿಂದ ಆರಂಭಿಸಿ, ರಾತ್ರಿಹೊತ್ತು ನಿದ್ರಿಸುವವರೆಗೂ ಭಗವಂತನನ್ನು ಸ್ಮರಿಸುವ ಹಲವು ಸಂದರ್ಭಗಳು ನಮ್ಮ ಜೀವನದ ದಿನಚರಿಯಾಗಿಬಿಟ್ಟಿವೆ. ಎದ್ದ ಕೂಡಲೇ 'ಪ್ರಭಾತೇ ಕರದರ್ಶನಂ' ಮಾಡುವ ಪದ್ಧತಿ, ಸ್ನಾನ ಮಾಡಿ ತುಳಸೀಕಟ್ಟೆಗೆ ನೀರೆರೆಯುತ್ತ ಸ್ತೋತ್ರಗಳನ್ನು ಹೇಳುವ ಮಹಿಳೆಯರು, ಮನೆಯ ಅಂಗಳ ಗುಡಿಸಿ, ಸಾರಿಸಿ ರಂಗೋಲಿ ಹಾಕುವ ಹಳ್ಳಿಯ ಜನಜೀವನ, ಗದ್ದೆಯಲ್ಲಿ ಎತ್ತುಕಟ್ಟಿ ಉಳುವಾಗ ಉತ್ತಮ ಬೆಳೆ ನೀಡೆಂದು ದೇವರನ್ನು ಬೇಡುವ ರೈತ — ಇಲ್ಲೆಲ್ಲ ದೈವೀಪ್ರೇರಣೆ ಕಂಡುಬರುವುದಿಲ್ಲವೆ? ಹೊತ್ತುಹೊತ್ತಿಗೂ 'ಶಿವಾ' ಎನ್ನುವವರೂ, 'ಅಯ್ಯೋ ದೇವರೇ' ಎನ್ನುವವರೂ. ಆಯಾಸ ವಾದಾಗ ಮೈಯೊರಗಿಸಿ 'ರಾಮ, ಕೃಷ್ಣ' ಎನ್ನುವವರೂ, ಭಗ ವಂತನ ನಾಮಸ್ಮರಣೆ ಮಾಡಿದಂತಲ್ಲವೆ?

ಸಕಾಲದಲ್ಲೇ ಮನದಲ್ಲಿ ಮೂಡಿಬರುವ ಪ್ರಶ್ನೆ: ಹೌದು, ಅಂಥ ಮನೆಗಳು ಈಗೆಲ್ಲಿವೆ? ಹಳ್ಳಿಹಳ್ಳಿಗೂ ಕೇಬಲ್ ಟಿ.ವಿ, ಸ್ಮಾರ್ಟ್‌ಫೋನ್, ಸಿನಿಮಾ ಥಿಯೇಟರ್ ಲಗ್ಗೆಯಿಟ್ಟಿವೆ; ಬೀದಿ ಬೀದಿಯಲ್ಲೂ ಹೆಂಡದಂಗಡಿ ರಾರಾಜಿಸುತ್ತಿವೆ. ರಾಜಕೀಯದ ಕೊಳೆ, ಕೊಚ್ಚೆ ಮನೆಮನೆಗಳನ್ನೇ ಕಲುಷಿತಗೊಳಿಸಿವೆ. ಇದೇ ಇಂದಿನ ಭಾರತ; ಇಲ್ಲೆಲ್ಲ ಧರ್ಮ-ಸಂಸ್ಕೃತಿಯಲ್ಲಿ ಹುಡುಕಿದರೆ ಅದೆಲ್ಲಿ ಸಿಗುವುದು?

ನಿಜ, ಜಗತ್ತು ಬದಲಾಗುತ್ತಿದೆ. ನಮ್ಮದಲ್ಲದ ಬದುಕನ್ನು ನಾವು ಆವಾಹಿಸುವಂತೆ ಕಂಡುಬರುತ್ತಿದೆ. ಆದರೆ ಇದು ಬರೀ ಮೇಲ್ನೋಟಕ್ಕೆ ಅಷ್ಟೇ. ಅಮೆರಿಕಾ ಕಂಪನಿಯೊಂದರಲ್ಲಿ ದುಡಿ ಯುವ, ಲಕ್ಷಾಂತರ ಸಂಪಾದಿಸುತ್ತ ಸಂಪೂರ್ಣ ಪಾಶ್ಚಾತ್ಯ ಜೀವನ ಶೈಲಿಯನ್ನೇ ಅನುಸರಿಸುವ, ಆಧುನಿಕ ವೈಭವದ ಜೀವನದಲ್ಲಿ ಮುಳುಗಿರುವ ವ್ಯಕ್ತಿಗೂ ಒಮ್ಮೊಮ್ಮೆ ಒಳಗಿನ ಧ್ವನಿ ಕಾಡುತ್ತದೆ; 'ಇದು ನನ್ನ ಜೀವನವೆ? ನನ್ನ ಭಾರತೀಯ ಜೀವನ ಇನ್ನಲ್ಲೋ ಕಳೆದುಹೋಯಿತಲ್ಲ!'— ಇದು ಕೇವಲ ಆರಂಭವಷ್ಟೇ. ಮತ್ತೆ ತನ್ನ ನಿಜವಾದ ತಾಯಿಬೇರನ್ನು ಕಂಡುಕೊಂಡಲ್ಲದೆ ಈ 'ಒಳಗಿನ ಧ್ವನಿ ' ವಿರಮಿಸುವುದಿಲ್ಲ. ನಮ್ಮ ಧಾರ್ಮಿಕ, ಸಾಂಸ್ಕೃತಿಕ ಮೌಲ್ಯ ಗಳ ಶಕ್ತಿ ಈ ಬಗೆಯದು. ವ್ಯಾವಹಾರಿಕ ಬದುಕಿನ ಏರುಪೇರು ಗಳಿಂದ ಸ್ವಲ್ಪವೂ ಬದಲಾಗದ, ನಮ್ಮ ಸಮಾಜದ ಜೀವನಾಡಿ ಯಾಗಿರುವ ಆಧ್ಯಾತ್ಮಿಕ ಪ್ರವೃತ್ತಿ ವ್ಯಾಪಕವಾಗುತ್ತಾ ಹೋಗು ತ್ತದೆ; ಹೀಗೆ ವ್ಯಾಪಿಸುವುದೇ ಅದರ ಸ್ವಭಾವ.

ಅರಿವಿಲ್ಲದೆ ಹಲವು ಜಾಗತಿಕ ಬದಲಾವಣೆಗಳ ತೆಕ್ಕೆಯಲ್ಲಿ ಮುಳುಗೇಳುವವರ ಬದುಕು, ಅದಕ್ಕೆ ಅನುಸಾರವಾಗಿ ಏಳು-ಬೀಳುಗಳನ್ನು ಕಾಣುವುದು ಅನಿವಾರ್ಯ. ಅಂತೆಯೇ, ಆಧು ನಿಕ ಸಂದರ್ಭದಲ್ಲಿ ಸಂಪತ್ತು, ವೈಭವ, ತಂತ್ರಜ್ಞಾನಗಳ ಬೆನ್ನುಹತ್ತಿ ಹೋಗುವ ನಮ್ಮ ಜನ ಪರಂಪರೆಯ ಮೌಲ್ಯಗಳನ್ನು ಕಡೆಗಣಿಸಿ ದಾಗಲೂ ಇಂಥ ಅನಾಹುತಗಳಾಗುತ್ತವೆ. ಈಗಲೇ ಅದರ ಪರಿ ಣಾಮ ನಗರಜೀವನದಲ್ಲಿ ಆಗುತ್ತಿರುವುದನ್ನು ನಾವು ಗಮನಿಸು ತ್ತೇವೆ. ಆದರೆ ಇಂಥ ಬದಲಾಗುವ ಸಮಯದಲ್ಲೇ ಒಂದು ಧ್ವನಿ ನಿರಂತರ ಉಲಿಯುತ್ತಿದೆ: ''ಇಲ್ಲ, ನಮ್ಮ ಜೀವನ ಇದಲ್ಲ. ಸನಾ ತನ ತತ್ತ್ವ, ಧರ್ಮಗಳತ್ತ ಮರಳುವುದೇ ನಮ್ಮ ಧರ್ಮ.'' ಪ್ರಜ್ಞಾಪೂರ್ವಕವಾಗಿ ಈ ಧ್ವನಿಗೆ ಓಗೊಟ್ಟವರು ಎಂಥ ಆಧುನಿ ಕತೆಯಲ್ಲಿರಲಿ, ಪ್ರಪಂಚದ ಯಾವ ಮೂಲೆಯಲ್ಲೇ ಇರಲಿ, ನಮ್ಮ ತಾಯಿಬೇರನ್ನು ಎಂದಿಗೂ ಮರೆಯುವುದಿಲ್ಲ. ಎಲ್ಲ ಏಳು, ಬೀಳುಗಳ ನಡುವೆ ನಮ್ಮ ಸಾಂಸ್ಕೃತಿಕ ಜೀವನವನ್ನು ಇನ್ನಷ್ಟು ಬಲ ಪಡಿಸುವ ಮಂದಿ ಇವರು.

(ಮುಂದಿನ ಸಂಚಿಕೆಗೆ)

ಭಗವಚ್ಚಿಂತನೆ



ನೀವು ಯಾರ ಚಿಂತನೆ ಮಾಡುತ್ತೀರೋ ಅವರ ಸತ್ತ್ವ ನಿಮಗೆ ಬಂದುಬಿಡುತ್ತದೆ. ಹಗಲು ಇರುಳು ಭಗವಂತನ ಚಿಂತನೆ ಮಾಡುತ್ತಿದ್ದರೆ ಭಗವಂತನ ಸತ್ತ್ವ ನಿಮಗೆ ಬಂದುಬಿಡುತ್ತದೆ. ಉಪ್ಪಿನ ಗೊಂಬೆ ಸಮುದ್ರ ಅಳೆಯಲು ಹೋಗಿ ಅದೂ ಸಮುದ್ರವೇ ಆಗಿಬಿಟ್ಟಿತು. ಗ್ರಂಥಗಳ ಅಥವಾ ಶಾಸ್ತ್ರಗಳ ಉದ್ದೇಶವೇನು? ಭಗವಂತನ ಸಾಕ್ಷಾತ್ಕಾರ ದೊರಕಿಸಿ ಕೊಡುವುದು.

ಸಂಸಾರಾಸಕ್ತ ಬದ್ಧಜೀವರು ಸಾಯುವ ಸಮಯದಲ್ಲಿ ಸಾಂಸಾರಿಕ ಮಾತುಕತೆಗಳನ್ನೇ ಆಡುತ್ತಾರೆ. ತೋರಿಕೆಗಾಗಿ ಜಪಮಾಲೆ ತಿರುಗಿಸಿದರೆ, ಗಂಗಾಸ್ನಾನ ಮಾಡಿದರೆ, ತೀರ್ಥಯಾತ್ರೆ ಮಾಡಿದರೆ ಏನು ತಾನೆ ದೊರಕೀತು? ಅಂತರ್ಯದಲ್ಲಿ ಸಂಸಾರಾಸಕ್ತಿ ಇದ್ದರೆ ಸಾಯುವಾಗ ಅದು ಹೊರಕ್ಕೆ ಕಾಣಿಸಿಕೊಂಡುಬಿಡುತ್ತದೆ. ಆಗ ಬರೀ ಅಬದ್ಧವನ್ನೇ ಬೊಗಳುವರು. ಬಹುಶಃ ಮತಿಭ್ರಮಣೆಯಿಂದ ಚೀತ್ಕಾರ ಮಾಡಬಹುದು; 'ಅರಿಸಿನ, ಒಗ್ಗರಣೆ! ಕರಿಬೇವಿನ ಸೊಪ್ಪು!' ಎಂದು. ಅರಗಿಣಿ ಯಾವ ತೊಂದರೆಗೂ ಈಡಾಗದಿರುವಾಗ, 'ರಾಧಾ, ಕೃಷ್ಣ' ಎಂದು ಹೇಳುತ್ತದೆ; ಆದರೆ ಅದನ್ನು ಬೆಕ್ಕು ಹಿಡಿಯಿತೆಂದರೆ ಅದರ ಸ್ವಂತ ಕೂಗು ಹೊರಗೆ ಬರುತ್ತದೆ. ಆಗ 'ಕ್ಯಾ! ಕ್ಯಾ!' ಎಂದು ಕಿರಿಚಿಕೊಳ್ಳುತ್ತದೆ. ಸಾಯುವ ಸಮಯದಲ್ಲಿ ಏನೇನು ಭಾವನೆಗಳು ಬರುವವೊ, ಅವುಗಳಂತೆಯೇ ಮುಂದಿನ ಜನ್ಮದಲ್ಲಿ ಫಲ ದೊರಕುವುದು ಎಂಬುದಾಗಿ ಗೀತೆಯಲ್ಲಿ ಹೇಳಿದೆ. ಭರತರಾಜ, 'ಜಿಂಕೆ! ಜಿಂಕೆ!' ಎಂದು ಕೂಗಿಕೊಳ್ಳುತ್ತಲೆ ದೇಹತ್ಯಾಗ ಮಾಡಿದ. ಅದಕ್ಕಾಗಿ ಮುಂದಿನ ಜನ್ಮದಲ್ಲಿ ಆತನಿಗೆ ಜಿಂಕೆಯ ಜನ್ಮ ದೊರೆಯಿತು. ಭಗವಂತನ ಚಿಂತನೆ ಮಾಡುತ್ತ ದೇಹತ್ಯಾಗ ಮಾಡಿದರೆ ಭಗವಂತನ ಸಾಕ್ಷಾತ್ಕಾರ ದೊರಕುತ್ತದೆ. ಮತ್ತೆ ಈ ಸಂಸಾರಕ್ಕೆ ಬರಬೇಕಾಗಿಲ್ಲ.

ಮನುಷ್ಯನಿಗೆ ಭಗವಂತನಲ್ಲಿ ವಿಶ್ವಾಸವಿಲ್ಲ; ಅದಕ್ಕಾಗಿಯೆ ಆತ ಅಷ್ಟೊಂದು ದುಃಖವನ್ನು ಅನುಭವಿಸುವುದು. ಜನ ಹೇಳುತ್ತಾರೆ, 'ಗಂಗಾಸ್ನಾನದ ಸಮಯದಲ್ಲಿ ಜನರ ಪಾಪಗಳೆಲ್ಲ ಅವರವರನ್ನು ಬಿಟ್ಟು ಗಂಗೆಯ ತೀರದಲ್ಲಿರುವ ಗಿಡಗಳ ಮೇಲೆ ಕುಳಿತುಕೊಂಡಿರುತ್ತವೆ. ಸ್ನಾನ ಮುಗಿಸಿ ದಡಕ್ಕೆ ಬರುವುದೇ ತಡ ಒಡನೆಯೆ ಅವು ನೆಗೆದು ಅವರವರ ಹೆಗಲನ್ನು ಹತ್ತಿಬಿಡುತ್ತವೆ' ಎಂದು. ದೇಹತ್ಯಾಗದ ಸಮಯದಲ್ಲಿ ಭಗವಂತನ ಚಿಂತನೆ ಬರಬೇಕಾದರೆ, ಬದುಕಿರುವಾಗಲೆ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಿದ್ಧತೆ — ಅಭ್ಯಾಸಯೋಗ, ಭಗವಚ್ಚಿಂತನೆಯ ಅಭ್ಯಾಸವನ್ನು ಮಾಡಿದ್ದರೆ ಜೀವನದ ಕೊನೆಯ ದಿನವೂ ಆತನ ಭಾವನೆ ಮನಸ್ಸಿನಲ್ಲಿ ಏಳುತ್ತದೆ.


ಮನುಷ್ಯ ಭಗವಚ್ಚಿಂತನೆಯನ್ನೇನೋ ಮಾಡುತ್ತಾನೆ, ಆದರೆ ಆತನ ಇರುವಿಕೆಯಲ್ಲಿ ಆತನಿಗೆ ವಿಶ್ವಾಸವಿಲ್ಲ; ಮತ್ತೆ ಮತ್ತೆ ಭಗವಂತನನ್ನು ಮರೆಯುತ್ತಾನೆ, ಮತ್ತೆ ಸಂಸಾರದಲ್ಲಿ ಆಸಕ್ತನಾಗುತ್ತಾನೆ. ಇದು ಆನೆಗೆ ಮೈ ತೊಳೆದ ಹಾಗೆ; ಅದು ಮತ್ತೆ ಧೂಳು ಮತ್ತು ಬೂದಿಯನ್ನು ಮೈಗೆ ಮೆತ್ತಿಕೊಂಡುಬಿಡುತ್ತದೆ. 'ಮನಸ್ಸೆಂಬುದು ಒಂದು ಮದಿಸಿದ ಆನೆ.' ಆದರೆ ಆನೆಗೆ ಮೈ ತೊಳೆದ ಒಡನೆಯೆ ಅದನ್ನು ತೆಗೆದುಕೊಂಡು ಲಾಯದಲ್ಲಿ ಕಟ್ಟಿಹಾಕಿದರೆ ಅದು ಮತ್ತೆ ಧೂಳು ಮತ್ತು ಬೂದಿಯನ್ನು ಮೈಗೆ ಬಳಿದುಕೊಳ್ಳಲಾರದು. ಮನುಷ್ಯ ಮೃತ್ಯುಶಯ್ಯೆಯಲ್ಲಿ ಭಗವಂತನ ಚಿಂತನೆ ಮಾಡಿದರೆ ಆತನ ಮನಸ್ಸು ಶುದ್ಧವಾಗುತ್ತದೆ. ಬಳಿಕ ಆ ಮನಸ್ಸಿಗೆ ಮತ್ತೆ ಕಾಮ ಕಾಂಚನದಲ್ಲಿ ಆಸಕ್ತವಾಗಲು ಅವಕಾಶ ದೊರೆಯದು.

ಯಾರಿಗೆ ಭಗವದ್ಭಾವನೆಯ ಉದ್ದೀಪನೆಯಾಗುತ್ತದೆ? ವಿಷಯಾತ್ಮಿಕ ಬುದ್ಧಿಯನ್ನು ತ್ಯಜಿಸಿರತಕ್ಕವರಿಗೆ. ಯಾರ ವಿಷಯರಸ ಬತ್ತಿಹೋಗಿರುವುದೊ ಅವರಿಗೆ ಒಂದು ಸ್ವಲ್ಪದರಿಂದಲೆ ಭಗವದ್ಭಾವನೆಯ ಉದ್ದೀಪನೆಯಾಗಿಬಿಡುತ್ತದೆ. ಬೆಂಕಿಕಡ್ಡಿ ಒದ್ದೆಯಾಗಿದ್ದರೆ ಒಂದು ಸಾವಿರ ಸಲ ಗೀಚಿದರೂ ಅದು ಹತ್ತದು. ಆದರೆ ಒಣಗಿದರೆ ಒಂದು ಸ್ವಲ್ಪ ಗೀಚಿದರೇ ಸಾಕು 'ಧಗ್' ಎಂದು ಹತ್ತಿಕೊಂಡು ಬಿಡುತ್ತದೆ.

ಕೆಲಕೆಲವರು ಭಾವಿಸುತ್ತಾರೆ, 'ಇವರು ಕೇವಲ ಭಗವಚ್ಚಿಂತನೆ ಮಾಡುತ್ತಾರೆ; ಹುಚ್ಚರು ಇವರು. ಇವರಿಗೆ ತಲೆ ಕೆಟ್ಟುಹೋಗಿದೆ. ನಾವೆಷ್ಟು ಬುದ್ಧಿವಂತರು! ನಾವು ಹೇಗೆ ಸುಖೋಪಭೋಗ — ಹಣ, ಹೆಸರು, ಕೀರ್ತಿ, ಇಂದ್ರಿಯಸುಖ ಪಡುತ್ತಿದ್ದೇವೆ!' ಅಂತ. ಕಾಗೆಯೂ ಭಾವಿಸುತ್ತದೆ, ತಾನೂ ಬಹಳ ಬುದ್ಧಿಶಾಲಿ ಹಕ್ಕಿ ಅಂತ. ಆದರೆ ಅದು ಬೆಳಗ್ಗೆ ಏಳುವುದೇ ತಡ, ಒಡನೆಯೆ ಹೋಗಿ ಪರರ ಹೇಸಿಗೆ ತಿಂದೇ ಸಾಯುತ್ತದೆ. ನೋಡಿಲ್ಲವೆ ಕಾಗೆ ಎಷ್ಟೊಂದು ಬಿಂಕದಿಂದ ನಡೆಯುತ್ತದೆ ಎನ್ನುವುದನ್ನು? ಬಹಳ ಬುದ್ಧಿಶಾಲಿ ಹಕ್ಕಿಯೇ!

ಸಂಸಾರದಲ್ಲಿ ಇದ್ದು ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾದರೆ ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಂಡಿರಬೇಕು. ಇನ್ನೊಂದು ಕೈಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿರಬೇಕು, ಯಾವಾಗ ಕೆಲಸಕಾರ್ಯಗಳಿಂದ ಬಿಡುಗಡೆ ಹೊಂದುವೆಯೊ ಆಗ ಎರಡು ಕೈಗಳಿಂದಲೂ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಳ್ಳಬೇಕು. ನಿರ್ಜನ ಪ್ರದೇಶದಲ್ಲಿ ವಾಸಮಾಡಬೇಕು, ಕೇವಲ ಆತನ ಚಿಂತನೆ ಮತ್ತು ಸೇವೆಯಲ್ಲಿಯೆ ನಿರತನಾಗಿರಬೇಕು.

ಶ್ರೀರಾಮಕೃಷ್ಣ ವಚನವೇದದಿಂದ



ಧ್ಯಾನ ಜೀವನ

ಸ್ವಾಮಿ ಆತ್ಮಸ್ಥಾನಂದ

ಇತ್ತೀಚೆಗೆ ನಮ್ಮನ್ನಗಲಿದ ಮಹಾಚೇತನ, ರಾಮಕೃಷ್ಣ ಮಹಾಸಂಘದ ೧೫ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು 'ಪ್ರಬುದ್ಧ ಭಾರತ' ಮಾಸಪತ್ರಿಕೆಯ ೨೦೦೭ರ ಜನವರಿ ಸಂಚಿಕೆಯಲ್ಲಿ ಬರೆದ ' The Contemplative Life' ಎಂಬ ಲೇಖನದ ಅನುವಾದ ಇಲ್ಲಿದೆ. ಪೂಜ್ಯ ಸ್ವಾಮೀಜಿಯವರ ಜೀವನದ ಕೆಲವು ಅಪೂರ್ವ ಘಟನೆಗಳೂ ಇಲ್ಲಿ ಚಿತ್ರಿಸಲ್ಪಟ್ಟಿವೆ.

ಪ್ರತಿಯೊಬ್ಬರ ಜೀವನದಲ್ಲೂ ಸಾಧನೆ-ಭಜನೆಗಳು — ಅಂದರೆ ಪ್ರಾರ್ಥನೆ-ಜಪ-ಧ್ಯಾನಗಳಿಂದ ಕೂಡಿರುವ ಆಧ್ಯಾತ್ಮಿಕ ಸಾಧನೆಗಳು ಅತ್ಯಂತ ಪ್ರಮುಖ ಪಾತ್ರ ವಹಿಸಬೇಕು. ದೈನಂದಿನ ಜೀವನದಲ್ಲಿ ಎದುರಿಸುವ ಹಲವು ಅಡೆತಡೆಗಳ ನಡುವೆ ನಮ್ಮನ್ನು ಶಾಂತಿಯ ಕಡೆಗೆ ಕರೆದೊಯ್ಯುವ ನಿಜವಾದ ಒಂದು ಮಾರ್ಗ ಇದಾಗಿದೆ. ನಿತ್ಯಜೀವನದ ಗದ್ದಲ, ಅವಸರಗಳ ನಡುವೆ ಆಂತರಿಕ ಜೀವನ ಅಥವಾ ಆಧ್ಯಾತ್ಮಿಕ ಸಾಧನೆಯನ್ನು ನಡೆಸುವುದು ತುಂಬಾ ಕಷ್ಟವೆನ್ನುವುದು ಒಂದು ಸಾಮಾನ್ಯ ಸಮಸ್ಯೆಯಾಗಿದೆ. ''ಭಕ್ತರು ಒಂದು ಕೈಯಿಂದ ಭಗವಂತನ ಪಾದಗಳನ್ನು ಬಲವಾಗಿ ಹಿಡಿದುಕೊಳ್ಳಬೇಕು, ಇನ್ನೊಂದು ಕೈಯಿಂದ ದೈನಂದಿನ ಜೀವನದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು'' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

ಧ್ಯಾನಜೀವನಕ್ಕೆ ಎರಡು ಪ್ರಧಾನ ಅಡೆತಡೆಗಳಿವೆ: ೧) ವೈಯಕ್ತಿಕವಾದ ಆಂತರಿಕ ದೌರ್ಬಲ್ಯ. ಇದನ್ನು ದಾಟಿ ಹೋಗಲು ನಮಗೆ ದೃಢ ನಿಶ್ಚಯವಿರಬೇಕು. ೨) ಬಾಹ್ಯ ಅಡಚಣೆಗಳು. ಗುರಿ ಸೇರಲು ಇವು ತಡೆಯೊಡ್ಡುತ್ತವೆ ಎಂದರಿತು, ಇವುಗಳಿಂದ ದೂರವಿರಬೇಕು.

ಧ್ಯಾನಜೀವನವನ್ನು ಯಶಸ್ವಿಯಾಗಿ ನಡೆಸಲು ನಮಗೆ ವ್ಯಾಕುಲತೆಯಿರಬೇಕು, ನಿಯಮಿತವಾದ ದಿನಚರಿ ಇರಬೇಕು. ಶಾಸ್ತ್ರಗಳ ಅಧ್ಯಯನ, ಸತ್ಸಂಗ, ಶಾಂತವಾದ ಜೀವನ — ಇವುಗಳಿಂದ ನಮ್ಮ ಆಂತರಿಕ ಜೀವನ ವೃದ್ಧಿ ಹೊಂದುತ್ತದೆ. ರಾಮಕೃಷ್ಣ ಸಂಘದ ಶ್ರೇಷ್ಠ ಸಾಧುಗಳೆಲ್ಲ ಸಾಕಷ್ಟು ಗದ್ದಲದ ಸನ್ನಿವೇಶಗಳಲ್ಲೂ ಧ್ಯಾನಪರವಾದ ಜೀವನವನ್ನು ನಡೆಸಿದ್ದನ್ನು ನಾನು ಸ್ಪಷ್ಟವಾಗಿ ನೋಡಿದ್ದೇನೆ. ತಮಗೆ ನೀಡಲಾದ ಜವಾಬ್ದಾರಿಗಳು ಎಂಥದಾಗಿದ್ದರೂ, ಅವುಗಳನ್ನು ಭಗವಂತನ ಸೇವೆಯೆಂದು ನಿರ್ವಹಿಸುತ್ತ ಅವರು ತಮ್ಮ ಜೀವನ ನಡೆಸಿದ್ದಾರೆ. ನಮ್ಮ ಮಹಾಸಂಘದ ಶ್ರೇಷ್ಠ ಸಾಧುಗಳಾದ ಸ್ವಾಮಿ ವಿರಜಾನಂದ, ಸ್ವಾಮಿ ಅಚಲಾನಂದ, ಸ್ವಾಮಿ ಶಾಂತಾನಂದ, ಸ್ವಾಮಿ ಜಗದಾನಂದ, ಸ್ವಾಮಿ ಮಾಧವಾನಂದ, ಸ್ವಾಮಿ ನಿರ್ವೇದಾನಂದ ಹಾಗೂ ಸ್ವಾಮಿ ಗದಾಧರಾನಂದರೇ ಮೊದಲಾದವರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿ, ಅವರೊಂದಿಗೆ ಒಡನಾಡುವ ಸೌಭಾಗ್ಯ ನನಗೆ ಒದಗಿಬಂದಿತ್ತು. ಅವರದು ಅದ್ಭುತ ಜೀವನ. ಅವರ ಮುಖದಲ್ಲಿ ಯಾವಾಗಲೂ ಒಂದು ದಿವ್ಯ ಪ್ರಭಾವಳಿ ಕಾಣಿಸುತ್ತಿತ್ತು. ಅವರೊಂದಿಗೆ ಒಡನಾಡುವುದೆಂದರೆ ಅದು ಸ್ಫೂರ್ತಿದಾಯಕವಾದ ಕ್ಷಣ; ಹಾಗೂ ಸಾಧನೆ ಎಷ್ಟೊಂದು ಅಮೂಲ್ಯ ಎಂಬುದನ್ನು ತಿಳಿಸುವ ಸಂದರ್ಭ.

ಎಲ್ಲ ದೈವೀಪುರುಷರ ಒಂದು ವಿಶೇಷ ಗುಣವೆಂದರೆ, ಅವರಲ್ಲಿರುತ್ತಿದ್ದ ಅಸೀಮ ಪ್ರೀತಿ. ಅವರು ಏನನ್ನೂ ಕೇಳಲಾರರು. ಅವರ ಪ್ರೀತಿಗೆ ಬದಲಾಗಿ ನೀನು ಸಂನ್ಯಾಸಿಯಾಗಬೇಕು ಎಂದೋ, ಅಥವಾ ಇನ್ನೇನಾದರೂ ಕೊಡಬೇಕು ಎಂದೋ ಅವರು ಕೇಳುವುದಿಲ್ಲ. ಸುಮ್ಮನೆ ಅವರು ಪ್ರೀತಿಸುವರು. ಇದು ನಿಜಕ್ಕೂ ಅದ್ಭುತವಾದ ಸಂಗತಿ. ನಾನು ಬೇಲೂರು ಮಠಕ್ಕೆ ಹೋದಾಗಲೆಲ್ಲ ಇದು ನಿಜವೆಂಬುದನ್ನು ಕಂಡುಕೊಂಡಿದ್ದೇನೆ.

ಆದರೆ ನನ್ನ ಮೇಲೆ ಮೊದಲ ಬಾರಿಗೆ ಗಾಢ ಪ್ರಭಾವವನ್ನು ಬೀರಿದವರೆಂದರೆ ಸ್ವಾಮಿ ಗದಾಧರಾನಂದರು.

ಆಗ ನಾನು ಗುವಹಾಟಿಯ ಕಾಟನ್ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ಓದುತ್ತಿದ್ದೆ. ಬೇಸಿಗೆ ರಜೆಯಲ್ಲಿ ದಿನಾಜ್‌ಪುರ (ಈಗ ಬಾಂಗ್ಲಾದೇಶದಲ್ಲಿದೆ)ದಲ್ಲಿರುವ ನನ್ನ ಮನೆಗೆ ಹೋದಾಗ ನನಗೆ ಮಲೇರಿಯಾ ಜ್ವರ ಬಂದು, ಅದು ಗಂಭೀರ ಸ್ವರೂಪ ತಾಳಿತು. ನನ್ನ ತಂದೆ ಬಹಳ ದೊಡ್ಡ ಸಂಸ್ಕೃತ ಪಂಡಿತರು; ಅವರು ಭಾಗವತದಲ್ಲಿ ವಿಶೇಷ ಪರಿಣತರಾಗಿದ್ದರು. ಅವರು ಹತ್ತಿರದ ಶಾಲೆಯೊಂದರಲ್ಲಿ ಪ್ರವಚನ ಮಾಡಲು ಹೋಗಿದ್ದರು. ಆಗ ಸ್ವಾಮಿ ಗದಾಧರಾನಂದರು ದಿನಾಜ್‌ಪುರ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದರು. ಶಾಲೆಯ ಕಾರ್ಯಕ್ರಮದಲ್ಲಿ ಅವರು ನನ್ನ ತಂದೆಯವರನ್ನು ಭೇಟಿಯಾದರು. ಆಗ ನನ್ನ ತಂದೆ ತುಂಬಾ ಚಿಂತೆ ಮಾಡುತ್ತಿದ್ದಂತೆ ಕಂಡುಬಂದರು. ಅದಕ್ಕೆ ಕಾರಣವೇನೆಂದು ಸ್ವಾಮೀಜಿ ಕೇಳಿದರು. ಆಗ ನನ್ನ ತಂದೆ ನನಗಾದ ಕಾಯಿಲೆಯ ಬಗ್ಗೆ ತಿಳಿಸಿದರು. ಆಗ ಅವರು ತಂದೆಯವರ ಬಳಿ, ನನ್ನನ್ನು ನೋಡಲು ಮನೆಗೆ ಬರಬಹುದೇ ಎಂದು ಕೇಳಿದರು. ತಂದೆ ಅವರನ್ನು ಆದರದಿಂದ ಸ್ವಾಗತಿಸಿದರು.

ಸ್ವಾಮೀಜಿ ನನ್ನ ತಲೆ ಮೇಲೆ ಹಾಗೂ ಎದೆಯ ಮೇಲೆ ಕೈಯಿಟ್ಟರು — ಆಗ ನನ್ನ ಎಲ್ಲ ಕಾಯಿಲೆಯೂ ಮಾಯವಾಯಿತು! ನನಗೂ ಉಳಿದವರಿಗೂ ಇದೊಂದು ಆಶ್ಚರ್ಯಕರ ಘಟನೆಯೆನಿಸಿತು. ಅವರು ನನ್ನೊಂದಿಗೆ ಎಷ್ಟೊಂದು ಪ್ರೀತಿ, ಮಮತೆಗಳಿಂದ ಮಾತನಾಡಿದರೆಂದರೆ, ಆ ಕೂಡಲೇ ನಾನು ಅವರತ್ತ ಆಕರ್ಷಿತನಾದೆ. ನಾನು ಗುಣಮುಖನಾದ ಮೇಲೆ, ಆ ಸ್ವಾಮೀಜಿ ಯಾರೆಂದು ತಂದೆಯವರನ್ನು ಕೇಳಿದೆ. ಅವರು ಸಮೀಪದಲ್ಲಿರುವ ರಾಮಕೃಷ್ಣ ಆಶ್ರಮದ ಅಧ್ಯಕ್ಷರೆಂದು ತಿಳಿದಾಗ, ಒಂದು ದಿನ ನಾನು ನನ್ನ ಕೆಲವು ಸ್ನೇಹಿತರೊಂದಿಗೆ ಅವರನ್ನು ಭೇಟಿಯಾಗಲು ಹೋದೆ.

ಸ್ವಾಮಿ ಗದಾಧರಾನಂದರಿಗೆ ನಮ್ಮನ್ನು ನೋಡಿ ತುಂಬಾ ಸಂತೋಷವಾಯಿತು. ಅವರು ನಮ್ಮನ್ನು ಮಂದಿರಕ್ಕೆ ಕರೆದುಕೊಂಡು ಹೋಗಿ, ನಮಗೆ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ, ಸ್ವಾಮಿ ವಿವೇಕಾನಂದರನ್ನು ಕುರಿತು ತಿಳಿಸಿಕೊಟ್ಟರು. ಅವರು ನಮಗೆ ಪ್ರಸಾದಕೊಟ್ಟು, ಮತ್ತೊಮ್ಮೆ ಬರಲು ಹೇಳಿದರು. ಹೀಗೆ ನಾನು ಆಶ್ರಮಕ್ಕೆ ಆಗಾಗ ಹೋಗಲಾರಂಭಿಸಿದೆ. ಸ್ವಾಮೀಜಿ ನನಗೆ ಸ್ವಾಮಿ ವಿವೇಕಾನಂದರ **'ಕೊಲೊಂಬೋ ಇಂದ ಆಲ್ಮೋರಕೆ'** ಮೊದಲಾದ ಪುಸ್ತಕಗಳನ್ನು ಓದಲು ಕೊಟ್ಟರು. ನಾನು ಅವುಗಳನ್ನು ಓದಲಾರಂಭಿಸಿದೆ. ನಾನು ಪೂಜೆ ಇತ್ಯಾದಿ ಸಂಪ್ರದಾಯಗಳಿರುವ ಬ್ರಾಹ್ಮಣ ಮನೆತನದಿಂದ ಬಂದವನೆಂದು ತಿಳಿದಾಗ ನನಗೆ ಆಶ್ರಮದಲ್ಲಿ ಆರತಿ ಮಾಡುವಂತೆ ಹೇಳಿದರು; ಅನಂತರ ನಾನು ಪೂಜೆಯನ್ನೂ ಮಾಡತೊಡಗಿದೆ. ಆಗಿನ್ನೂ ನನಗೆ ಮಂತ್ರದೀಕ್ಷೆಯಾಗಿರಲಿಲ್ಲ. ಆರತಿ ಮಾಡಿದ ಮೇಲೆ ಸ್ವಲ್ಪ ಹೊತ್ತು ಧ್ಯಾನ ಮಾಡಿ ಮನೆಗೆ ಮರಳುವಂತೆ ಸ್ವಾಮೀಜಿ ನನಗೆ ಹೇಳುತ್ತಿದ್ದರು. ಇದು ನನ್ನ ಮೇಲೆ ಗಾಢವಾದ ಪ್ರಭಾವ ಬೀರಿತ್ತು.

ಬೆಳಿಗ್ಗೆ ಮಂಗಳಾರತಿಯಾದ ಮೇಲೆ ನಾನು ಕಾಂಚನ ನದಿಯ ತೀರದಲ್ಲಿ ನಡೆದಾಡುತ್ತಿದ್ದೆ. ಸ್ವಾಮೀಜಿ ಕೆಲವೊಮ್ಮೆ ನನಗೆ, ತಮ್ಮೊಂದಿಗೆ ಬರುವ ಮನಸ್ಸಿದೆಯೇ ಎಂದು ಕೇಳುತ್ತಿದ್ದರು: ''ನಡೆಯುತ್ತಿರುವಾಗ ನೀನು ಏನು ಆಲೋಚಿಸುತ್ತಿದ್ದೀಯಾ? ಯಾವಾಗಲೂ ಅವನನ್ನೇ ಅಂದರೆ ಭಗವಂತನನ್ನೇ ಚಿಂತಿಸು. **'ಹೋ ಜಾಯೇ ತೇರೇ ನಾಮ್ ವಾಸಾ, ಹೋ ಜಾಯೇ ತೇರೇ ನಾಮ್ ವಾಸಾ'** ಅಂದರೆ, 'ನಿನ್ನ ನಾಮವೇ ನನಗೆ ಆಶ್ರಯವಾಗಲಿ; ನಿನ್ನ ನಾಮವೇ ನನಗೆ ಆಶ್ರಯವಾಗಲಿ.' ನೀನು ಸುತ್ತಮುತ್ತ ನಡೆದಾಡುವಾಗಲೆಲ್ಲ ಹೀಗೆ ಮಾನಸಿಕವಾಗಿ ಚಿಂತಿಸಬೇಕು'' ಎನ್ನುತ್ತಿದ್ದರು. ಅವರು ನದೀತೀರದಲ್ಲಿ ಒಂದು ಉತ್ತಮವಾದ ಸ್ಥಳವನ್ನು ಹುಡುಕಿ, ಅಲ್ಲೇ ಕಣ್ಣುಮುಚ್ಚಿ ಕುಳಿತು ಧ್ಯಾನ ಮಾಡಲಾರಂಭಿಸುತ್ತಿದ್ದರು. ನಾನೇನು ಮಾಡಲಿ? ಧ್ಯಾನ ಎಂದರೇನೆಂದೇ ಗೊತ್ತಿಲ್ಲದ ನಾನು ಅವರನ್ನೇ ಅನುಕರಿಸುತ್ತಿದ್ದೆ. ಹೀಗೆ ಅನುಕರಿಸುತ್ತಿದ್ದಂತೆ, ನನ್ನೊಳಗೇ ಏನೋ ಆಗುತ್ತಿದ್ದುದನ್ನು ನಾನು ಗಮನಿಸಿದೆ.

ಆಶ್ರಮದಲ್ಲೇ ಯಾವಾಗಲಾದರೊಮ್ಮೆ ತಂಗಲು ನನಗವರು ಅನುಮತಿ ನೀಡಿದ್ದರು. ಅಲ್ಲಿ ಹೆಚ್ಚು ಕೋಣೆಗಳಿರಲಿಲ್ಲ; ಆದ್ದರಿಂದ ನಾನು ಅವರ ಕೋಣೆಯಲ್ಲೇ ಇರುತ್ತಿದ್ದೆ. ಅಲ್ಲಿ ನಾನು ಅದ್ಭುತವಾದುದನ್ನು ನೋಡಿದೆ. ಮಧ್ಯರಾತ್ರಿ ಅಥವಾ ಬೇರೆ ಹೊತ್ತಿನಲ್ಲಿ ನಿದ್ದೆಯಿಂದೆದ್ದು ನೋಡಿದಾಗ, ಸ್ವಾಮೀಜಿ ಕುಳಿತು ಧ್ಯಾನ ಮಾಡುತ್ತಿದ್ದರು. ನನಗೆ ಆಶ್ಚರ್ಯವಾಗುತ್ತಿತ್ತು. ಸತ್ಸಂಗ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನಿಲ್ಲಿ ಗಮನಿಸಬೇಕು.

ಸ್ವಾಮಿ ಗದಾಧರನಂದರು ಒಬ್ಬ ಸಂತನಿಗಿಂತ ಯಾವ ರೀತಿಯಲ್ಲೂ ಕಡಿಮೆಯವರಲ್ಲ. ಅವರು ಯಾರನ್ನೇ ಆಗಲಿ, ದ್ವೇಷಿಸುತ್ತಿರಲಿಲ್ಲ. ಯಾರಿಗೆ ಅಗತ್ಯವಿದೆಯೋ ಅವರಿಗೆಲ್ಲ ಸೇವೆ ಮಾಡಲು ಅವರು ಯಾವಾಗಲೂ ಸಿದ್ಧರಾಗಿದ್ದರು. ಅವರು ಹೂಗಳನ್ನು ಕೊಯ್ಯುವ ಬಗೆ, ಹೂಮಾಲೆ ತಯಾರಿಸುವ ವಿಧಾನ, ಆರತಿಗೆ ಅಣಿ ಮಾಡುತ್ತಿದ್ದ ಕ್ರಮ ಇವೆಲ್ಲ ನನ್ನ ಮೇಲೆ ಬಹಳ ಪ್ರಭಾವ ಬೀರಿತ್ತು. ಅವರನ್ನು ಅನುಸರಿಸುತ್ತಾ, ಅವರಿಗೆ ಯಾವ ರೀತಿ ಸಹಾಯ ಮಾಡಬಹುದೋ ಅದನ್ನೆಲ್ಲ ನಾನು ಮಾಡುತ್ತಿದ್ದೆ.

ಮೊದಲೇ ಹೇಳಿದಂತೆ, ಸ್ವಾಮಿ ಗದಾಧರಾನಂದರನ್ನು ಭೇಟಿ ಮಾಡುವ ಮೊದಲೇ ನಾನು ಮನೆಯಲ್ಲಿ ಪೂಜೆ ಮಾಡುತ್ತಿದ್ದೆ. ನಮ್ಮದು ಸಾಂಪ್ರದಾಯಿಕ ಮನೆತನ, ನಮ್ಮಲ್ಲಿ ದೇವರ ಪೂಜೆ ಮಾಡುವ ಪದ್ಧತಿಯಿತ್ತು. ಹಾಸ್ಟೆಲ್‌ನಲ್ಲಿ ಇದ್ದಾಗಲೂ ನಾನು ಪ್ರತಿದಿನ ತಪ್ಪದೆ ಸಂಧ್ಯಾವಂದನೆ ಮಾಡುತ್ತಿದ್ದೆ. ಅದೇನಿದ್ದರೂ ಸಂಪ್ರದಾಯ. ಆಶ್ರಮದಲ್ಲಿ ನಾನು ಕಲಿತದ್ದೆಲ್ಲವೂ ಅದಕ್ಕಿಂತ

ಭಿನ್ನವಾಗಿತ್ತು. ಆಶ್ರಮದ ಪರಿಸರವೆಲ್ಲ ಆಧ್ಯಾತ್ಮಿಕ ತರಂಗಗಳಿಂದ ಅನುರಣಿತವಾಗಿತ್ತು. ಆದರೆ ನನ್ನ ಮನೆ ಅಥವಾ ಕುಟುಂಬದಲ್ಲಿ ಏನಿದ್ದರೂ ಅವೆಲ್ಲ ಸಾಂಪ್ರದಾಯಿಕ ಜೀವನ ಹಾಗೂ ಧಾರ್ಮಿಕ ಆಚರಣೆಗಳು, ಅದರಲ್ಲಿ ಅಷ್ಟೇನೂ ಜೀವಂತಿಕೆಯಿರಲಿಲ್ಲ.

ಸಂನ್ಯಾಸ ಜೀವನವನ್ನು ಸ್ವೀಕರಿಸಲು ನನಗೆ ಪ್ರಬಲವಾದ ಪ್ರೇರಣೆ ನೀಡಿದ ಇನ್ನೊಬ್ಬರೆಂದರೆ ಸ್ವಾಮಿ ಅಚಲಾನಂದರು. ಅವರು **'ಕೇದಾರ ಬಾಬಾ'** ಎಂದೇ ಪ್ರಸಿದ್ಧರಾದವರು. ತುಂಬ ತಪಸ್ವಿ ಜೀವನ ನಡೆಸಿದ ಸಂನ್ಯಾಸಿಗಳು ಅವರು. ನಾನು ಮೊದಲ ಬಾರಿಗೆ ಅವರನ್ನು ಬೇಲೂರು ಮಠದಲ್ಲಿ ನೋಡಿದಾಗ ಅವರು ಒಂದು ಕೌಪೀನವನ್ನು ಮಾತ್ರ ಧರಿಸಿಕೊಂಡು ಓಡಾಡುತ್ತಿದ್ದರು. ಎಷ್ಟೊಂದು ನಿಯತವಾದ ಪ್ರಾರ್ಥನೆ, ಜಪ, ಧ್ಯಾನ ಅವರದು! ಅವರ ಆರೋಗ್ಯ ಸಂಪೂರ್ಣವಾಗಿ ಕೆಟ್ಟುಹೋದಾಗಲೂ, ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಅವರ ವಿಶ್ರಾಂತಿ ಹಾಗೂ ಇತರ ವೈಯಕ್ತಿಕ ಕೆಲಸಗಳಿಗೆ ತಗಲುತ್ತಿದ್ದುದು ಹೆಚ್ಚೆಂದರೆ ಆರರಿಂದ ಎಂಟು ಗಂಟೆ ಮಾತ್ರ.

ನಾನು ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದೆ. ಅವರು ಬೇಲೂರು ಮಠಕ್ಕೆ ಪ್ರತಿವರ್ಷವೂ ಬಂದು ಎರಡು-ಮೂರು ತಿಂಗಳು ಇದ್ದು ಹೋಗುತ್ತಿದ್ದರು. ಶ್ರೀಮಾತೆಯವರು ವಾಸವಾಗಿದ್ದ ಲೆಗೆಟ್ ನಿವಾಸದಲ್ಲಿ ಅವರು ಇರುತ್ತಿದ್ದರು. ಅವರು ಬಂದಾಗಲೆಲ್ಲ ನಾನು ಅವರ ಬಳಿಗೆ ಹೋಗಿ, ಅವರ ಕೋಣೆಯನ್ನು ಸ್ವಚ್ಛಗೊಳಿಸುತ್ತಿದ್ದೆ, ಒಂದಿಷ್ಟು ಸೇವೆಯನ್ನೂ ಮಾಡುತ್ತಿದ್ದೆ. ಪ್ರತಿದಿನವೂ ಅವರು ನನಗೆ 'ಕಥಾಮೃತ' ('ಶ್ರೀರಾಮಕೃಷ್ಣ ವಚನವೇದ'ದ ಬಂಗಾಳಿ ಮೂಲ) ಓದಲು ಹೇಳುತ್ತಿದ್ದರು. ಅಂತೆಯೇ ''ನೀನು ಎಷ್ಟು ಜಪ ಮಾಡಿದೆ?'' ಎಂದು ಕೇಳುತ್ತಿದ್ದರು.

ಒಂದು ಸಲ ಬೇಲೂರು ಮಠದಲ್ಲಿ ಭಂಡಾರ (ವಿಶೇಷ ಭೋಜನ) ಇತ್ತು. ಮರುದಿನ ಕೇದಾರ ಬಾಬಾ ನಮ್ಮನ್ನು ಕೇಳಿದರು, ನಾವು ಎಷ್ಟು ರಸಗುಲ್ಲಾ ತಿಂದವೆಂದು. 'ಎರಡು ತಿಂದೆ' ಎಂಬುದಾಗಿ ನಾನು ಹೇಳಿದಾಗ ಅವರು ಉದ್ಗಾರವೆತ್ತಿದರು: ''ಏನು? ಎರಡು ರಸಗುಲ್ಲಾ! ಅದೂ ರಾತ್ರಿ ಹೊತ್ತು! ಈಗ ನೀನು ಸಾಧುವಾಗಬಯಸುತ್ತೀಯಾ, ಸ್ವಾಮೀಜಿಯವರ ಅನುಯಾಯಿ ಆಗಬೇಕೆಂದಿದ್ದೀಯಾ? ಅಸಾಧ್ಯ! ಶುದ್ಧ ಜೀವನ ನಡೆಸಬೇಕೆಂದಿರುವವರು ರಾತ್ರಿ ಕಡಿಮೆ ಆಹಾರ ತೆಗೆದುಕೊಳ್ಳಬೇಕು. ಅಲ್ಲದೆ, ಸಿಹಿತಿಂಡಿ ಬಗ್ಗೆ ಜಾಗರೂಕರಾಗಿರಬೇಕು'' ಎಂದರು. ಅವರ ಪ್ರೇರಣೆ ಅಸಾಧಾರಣವಾಗಿತ್ತು.

ನಾನು ಕಲ್ಕತ್ತಾ ಸ್ಟೂಡೆಂಟ್ಸ್ ಹೋಮ್‌ನಲ್ಲಿದ್ದುಕೊಂಡು ಪದವಿಗಾಗಿ ಓದುತ್ತಿದ್ದೆ. ಆಗ ನಾನು ಸ್ವಾಮಿ ನಿರ್ವೇದಾನಂದರ ನಿಕಟ ಸಂಪರ್ಕಕ್ಕೆ ಒಳಗಾದೆ. ಅವರು ವಿದ್ಯಾರ್ಥಿಗಳಿಗೆ ಬ್ರಹ್ಮಚರ್ಯ ಹಾಗೂ ಆಧ್ಯಾತ್ಮಿಕ ಜೀವನವನ್ನು ನಡೆಸಲು ವಿಶೇಷವಾಗಿ ಒತ್ತು ನೀಡಿ ಹೇಳುತ್ತಿದ್ದರು.

ಸ್ವಾಮಿ ಶಾಂತಾನಂದರು ಇನ್ನೊಬ್ಬ ಶ್ರೇಷ್ಠ, ಧ್ಯಾನಪರ ಸಂನ್ಯಾಸಿಗಳು. ಶಾಂತಸ್ವಭಾವದ, ಮಿತಭಾಷಿಗಳಾದ ವ್ಯಕ್ತಿ ಅವರು. ಯಾವಾಗಲೂ ಜಪ ಮಾಡುತ್ತಿದ್ದರು. ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಸುಮಾರು ಹದಿನೆಂಟರಿಂದ ಇಪ್ಪತ್ತು ಗಂಟೆ ಕಾಲವಾದರೂ ಅವರು ಜಪ ಮಾಡುತ್ತಿದ್ದರು. ತುಂಬ ಮಧುರ ಸ್ವಭಾವದ, ಕರುಣಾರ್ದ್ರ ಹೃದಯದ ವ್ಯಕ್ತಿಗಳಾಗಿದ್ದರು ಸ್ವಾಮಿ ಶಾಂತಾನಂದರು. ಕ್ಷಯರೋಗ ಹಿಡಿದು ಮಲಗಿದ್ದಾಗಲೂ ಅವರ ದಿನಚರಿಯಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ. ''ದೀರ್ಘಕಾಲ ಆಧ್ಯಾತ್ಮಿಕ ಸಾಧನೆಗಳನ್ನು ಮಾಡುತ್ತಾ ನೀವು ಆಯಾಸ ಮಾಡಿಕೊಳ್ಳಬೇಡಿ'' ಎಂದು ಅವರನ್ನು ಕೇಳಿಕೊಂಡಾಗ ಅವರು, ''ನನಗೆ ಹಾಗೆ ಮಾಡದೆ ಬೇರೆ ರೀತಿ ಇರಲು ಸಾಧ್ಯವೇ ಇಲ್ಲ'' ಎಂದರು. ಅವರು ಎಂದೂ ತಮ್ಮ ದುಃಖದುಮ್ಮಾನಗಳನ್ನು ಹೊರಗೆ ಪ್ರಕಟಪಡಿಸುತ್ತಿರಲಿಲ್ಲ.

ಅಂತೆಯೇ ಸ್ವಾಮಿ ಮಾಧವಾನಂದರಿದ್ದರು. ಅವರು ಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದರೂ ಕೂಡ, ಯಾವಾಗಲೂ ಚಟುವಟಿಕೆಯಿಂದಿರುತ್ತಿದ್ದರು. ಅವರ ಜೀವನ ಶಿಸ್ತುಬದ್ಧವಾಗಿತ್ತು. ಆದರ್ಶಗಳ ವಿಷಯ ಬಂದಾಗ ಅವರು ಕಟ್ಟುನಿಟ್ಟಿನವರು. ಯಾವಾಗ ಹೃದಯ ವೈಶಾಲ್ಯ ತೋರಿಸಬೇಕು ಎಂಬುದೂ ಅವರಿಗೆ ತಿಳಿದಿತ್ತು. ಯಾರು ಹೀಗೆ ಧ್ಯಾನ ಜೀವನವನ್ನು ನಿಯಮಿತವಾಗಿ ಮಾಡುತ್ತಾರೋ ಅವರು ಚೆನ್ನಾಗಿ ಕೆಲಸ ಮಾಡಬಲ್ಲರು, ಇದರಲ್ಲಿ ಯಾವುದೇ ಸಂದೇಹವಿಲ್ಲ. ಅವರ ಕೆಲಸಗಳು ಯಾವುದೇ ರೀತಿ ಅಸ್ತವ್ಯಸ್ತವಾಗಿರುವುದಿಲ್ಲ. ಮಾಡುವ ಕೆಲಸವನ್ನು ಅವರು ಪೂರ್ಣ ಶ್ರದ್ಧೆಯಿಂದ, ಭಗವಂತನ ಸೇವೆಯೆಂದೇ ಮಾಡುತ್ತಾರೆ.

ಇದು ಇನ್ನೊಂದು ರೀತಿಯಲ್ಲಿ ಕೆಲಸ ಮಾಡದೆ? ಚೆನ್ನಾಗಿ ಕೆಲಸ ಮಾಡುವವರ ಜೀವನವೂ ಉತ್ತಮಗೊಳ್ಳುವುದೆ? ನಿಜ, ಕೆಲಸದಿಂದ ಮಾತ್ರವೇ ಏನೂ ಆಗುವುದಿಲ್ಲ. ಕೆಲಸದ ಹಿಂದಿರುವ ಮನೋಭಾವ ಎಂಥದು ಎನ್ನುವುದು ಮುಖ್ಯ. ಮಾಡುವ ಕೆಲಸವೆಲ್ಲ ಭಗವಂತನ ಸೇವೆಯೆಂದೇ ಮಾಡಿದರೆ, ಆ ಕೆಲಸ ಆಧ್ಯಾತ್ಮಿಕವಾಗಿಯೂ ಫಲಕಾರಿಯಗುವುದು. ಇಲ್ಲದೆ ಹೋದರೆ, ಉಳಿದವರೆಲ್ಲರೂ ಕೆಲಸಮಾಡುತ್ತಾರಲ್ಲ , ಅದೇ ರೀತಿಯಾಗುವುದು ಅಷ್ಟೆ. ಅವರು ಮಾಡುವ ಕೆಲಸಕ್ಕೂ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಯೊಬ್ಬ ಮಾಡುವ ಕೆಲಸಕ್ಕೂ ವ್ಯತ್ಯಾಸವಿದೆ. ಒಬ್ಬ ರೋಗಿಯನ್ನು ಹಲವು ಡಾಕ್ಟರರು ಪರೀಕ್ಷೆ ಮಾಡಬಹುದು. ಆದರೆ ಅವರ ಚಿಕಿತ್ಸೆಗೂ, ಒಬ್ಬ ಸಂನ್ಯಾಸಿ ರೋಗಿಯ ಆರೈಕೆ ಮಾಡುವುದಕ್ಕೂ ತುಂಬ ವ್ಯತ್ಯಾಸವಿದೆ. ಸಂನ್ಯಾಸಿಯ ಕೆಲಸ ನಾರಾಯಣನ, ಭಗವಂತನ ಸೇವೆ. ಇತರರು ರೋಗಿಯನ್ನು ದೇವರೆಂದು ಭಾವಿಸಬೇಕೆಂದಿಲ್ಲ. ''ಅವನು ರೋಗಿ, ಅವನಿಗೆ ಚಿಕಿತ್ಸೆ ಮಾಡುತ್ತೇನೆ. ನನ್ನ ಶುಲ್ಕ ತೆಗೆದುಕೊಳ್ಳುತ್ತೇನೆ'' – ಇದು ವೈದ್ಯಕೀಯ ವೃತ್ತಿ ನಡೆಸುವ ಡಾಕ್ಟರ್‌ನ ಮನೋಭಾವ.

ಹೆಚ್ಚು ಜವಾಬ್ದಾರಿಯ ಕೆಲಸದ ಭಾರವನ್ನು ಹೊತ್ತವರು ಈ ಬಗೆಯ ಮನೋಭಾವವನ್ನು ಹೊಂದಿದ್ದು, ಎಲ್ಲವೂ ಭಗವಂತನ ಸೇವೆಯೆಂಬ ಸರಳ ಭಾವದಿಂದ ಕೆಲಸ ಮಾಡಿದರೆ ಅವರ ಧ್ಯಾನ ಜೀವನ ಉತ್ತಮಗೊಳ್ಳುವುದೆ? ಹೌದು! ಈ ಬಗ್ಗೆ ಯಾವುದೇ ಸಂಶಯವಿಲ್ಲ. ಪರಿಹಾರಕಾರ್ಯ, ಆಸ್ಪತ್ರೆಯ ಕೆಲಸ, ಶಾಲೆಯ ಕೆಲಸ, ಅಡುಗೆ ಮನೆಯ ಕೆಲಸ — ಅದೇನೇ ಆಗಿರಲಿ, ಎಲ್ಲವೂ ಭಗವಂತನ ಸೇವೆ. ಈ ಬಗೆಯ ಮನೋಭಾವ ನಮ್ಮಲ್ಲಿರಬೇಕು. ಆಗ ನಮ್ಮ ಆಂತರಿಕ ಜೀವನ ತಾನಾಗಿಯೇ ಉತ್ತಮಗೊಳ್ಳುವುದು. ಇದು ನನ್ನ ವೈಯಕ್ತಿಕ ಅನುಭವಕ್ಕೆ ಬಂದ ವಿಷಯ. ಆಸ್ಪತ್ರೆಯ ಕೆಲಸದಿಂದ ನನಗೆ ತುಂಬಾ ಆನಂದ ದೊರಕಿದೆ. ಬರ್ಮಾದ (ಮ್ಯಾನ್ಮಾರ್) ರಂಗೂನ್‌ನಲ್ಲಿದ್ದ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ನಾನು ಕೆಲಸಮಾಡುತ್ತಿದ್ದೆ. ಅದು ತುಂಬಾ ಗಜಿಬಿಜಿಯಾಗಿದ್ದ ಆಸ್ಪತ್ರೆ. ರಾಂಚಿಯಲ್ಲಿರುವ ಟಿ.ಬಿ. ಸ್ಯಾನಟೋರಿಯಮ್‌ನ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಆರಂಭದಿಂದಲೂ ನಾನು ಕೆಲಸ ಮಾಡಿದೆ. ಆಹಾ, ಅದೆಂಥ ಆನಂದ! ಭಕ್ತಿಪೂರ್ವಕವಾಗಿ ಕೆಲಸ ಮಾಡುವಾಗ, ಅನಿರೀಕ್ಷಿತವಾಗಿ ಎಲ್ಲಿಂದಲೋ ಸಹಾಯ ಬಂದೊದಗುವುದು. ಅಲ್ಲಿ ನಾವು ಕಠಿಣ ಶ್ರಮವಹಿಸಿ ದುಡಿಯಬೇಕಾಯಿತು. ಆಗ ನನ್ನ ಮನಸ್ಸಿನಲ್ಲಿದ್ದ ಭಾವನೆಯೆಂದರೆ, ಮಂದಿರದಲ್ಲಿ ಯಾವ ಭಗವಂತನ ಪಾದಕಮಲಗಳಿಗೆ ಹೂವನ್ನು ಅರ್ಪಿಸುತ್ತೇನೋ, ಇದೂ ಆ ಭಗವಂತನ ಸೇವೆಯೇ ಆಗಿದೆ ಎಂದಾಗಿತ್ತು. ಭಗವಂತ ಈ ರೂಪದಲ್ಲಿ, ಈ ರೀತಿಯಲ್ಲಿ ಬಂದರೆ, ನಾನು ಈ ರೀತಿ ಸೇವೆ ಮಾಡಬೇಕಾಗುವುದು. ಪ್ರತಿದಿನವೂ ಕಾಲದ ಪರಿವೆಯಿಲ್ಲದೆ ನಾನು ಜಪ, ಧ್ಯಾನಗಳನ್ನು ಕೂಡ ಮಾಡುತ್ತಿದ್ದೆ. ಇದೇ ನಾವು ಹಿಡಿದುಕೊಳ್ಳಬೇಕಾದ ಆಶ್ರಯ. ಎಲ್ಲರಿಗೂ ಇದು ಅನಿವಾರ್ಯ ಎಂದಾಗಬೇಕು. ಈ ಬಗ್ಗೆ ಯಾವ ಸಂಶಯವೂ ಬೇಡ.

ಕೆಲಸಗಳ ನಡುವೆಯೂ ನಾನು ಬಿಡುವು ಮಾಡಿಕೊಂಡ ಸಂದರ್ಭಗಳಿವೆ. ಆ ಸಂದರ್ಭಗಳಲ್ಲಿ ನಾನು ಆಧ್ಯಾತ್ಮಿಕ ಸಾಧನೆ, ಶಾಸ್ತ್ರಾಧ್ಯಯನ ಮಾಡುತ್ತ ಸಮಯ ಕಳೆದೆ. ನಾನು ಸ್ವಾಮಿ ಜಗದಾನಂದರ ಬಳಿಗೆ ಹೋಗಿ ವೇದಾಂತ ಗ್ರಂಥಗಳ ಅಧ್ಯಯನ ಮಾಡುತ್ತಿದ್ದೆ. ಸ್ವಾಮಿ ಜಗದಾನಂದರು ವೇದಾಂತ ತತ್ತ್ವಗಳ ಜೀವಂತ ರೂಪವೇ ಮೈದಾಳಿದಂತಿದ್ದರು. ಅವರು ಮಹಾಸಮಾಧಿ ಹೊಂದಿದ ಸಂದರ್ಭವನ್ನು ನಾನೀಗ ವಿವರಿಸುತ್ತೇನೆ. ಅದರಿಂದ ಅವರ ವ್ಯಕ್ತಿತ್ವವೆಂಥದು ಎಂಬುದು ಅರಿವಾಗುವುದು. ಅವರಿಗೆ ಹೃದಯಾಘಾತವಾಗಿತ್ತು. ಉಸಿರಾಡಲೂ ಕಷ್ಟಪಡುತ್ತಿದ್ದರು. ಚಿಕಿತ್ಸೆಗಾಗಿ ಅವರನ್ನು ವೃಂದಾವನ ಸೇವಾಶ್ರಮಕ್ಕೆ ಕರೆತಂದಿದ್ದೆವು. ಅವರು ಹೆಚ್ಚುಕಾಲ ಉಳಿಯಲಾರರೆಂದೂ, ಈ ಬಗ್ಗೆ ಯಾವುದೇ ಭರವಸೆಯಿಲ್ಲವೆಂದೂ ವೈದ್ಯರೆಲ್ಲ ಹೇಳಿದರು. ಅವರ ಕಾಲುಗಳು ಶೀತದಿಂದ ಮರಗಟ್ಟಿದ್ದವು. ಅವರ ಕಾಲುಗಳಿಗೆ ಮದ್ಯ ಸುರಿದು ಮಸಾಜ್ ಮಾಡಬೇಕೆಂದು ಡಾಕ್ಟರರು ಹೇಳಿದರು. ನಾನು ಹಾಗೆ ಮಾಡುತ್ತಿದ್ದಾಗ ಅವರು ಇದ್ದಕ್ಕಿದ್ದಂತೆ ನನ್ನತ್ತ ನೋಡಿ, ತಮ್ಮ ಸಿಲ್ಹೆಟ್ (ಬಾಂಗ್ಲಾದೇಶದ ಒಂದು ಸ್ಥಳ) ಭಾಷೆಯಲ್ಲಿ ಹೇಳಿದರು, ''ಕಿತಾ ಕೊರೊ? ಕಿತಾ ಕೊರೊ?'' ಅಂದರೆ, ''ನೀನೇನು ಮಾಡುತ್ತಿದ್ದೀಯಾ? ನೀನೇನು ಮಾಡುತ್ತಿದ್ದೀಯಾ?'' ಅಂತ. ''ನಿಮ್ಮ ಕಾಲುಗಳು ಮರಗಟ್ಟಿಹೋಗಿವೆ. ಆದ್ದರಿಂದ ನಾನು ಒಂದಿಷ್ಟು ಮಸಾಜ್ ಮಾಡುತ್ತಿದ್ದೇನೆ''– ನಾನೆಂದೆ. ''ಒಂದಿಷ್ಟು ಮಸಾಜ್ ಮಾಡುತ್ತಿದ್ದೀಯಾ'' ಎಂದು ಉದ್ಗರಿಸಿದ ಅವರೆಂದರು, ''ಸಚ್ಚಿದೇಕಂ ಬ್ರಹ್ಮ! ಬ್ರಹ್ಮನೇ ಅನಂತ ಜ್ಞಾನ ಹಾಗೂ ಅಸ್ತಿತ್ವ ! ನಿನಗೆ ಇದು ಅರ್ಥವಾಯಿತೇ ಇಲ್ಲವೆ? ಸರ್ವಂ ಖಲ್ವಿದಂ ಬ್ರಹ್ಮ — ಇದೆಲ್ಲವೂ ಬ್ರಹ್ಮವೇ. ಇದನ್ನು ತಿಳಿದುಕೊಂಡು, ಇದನ್ನೇ ಗಟ್ಟಿಯಾಗಿ ಹಿಡಿದುಕೋ.'' ಹೀಗೆ ಹೇಳಿದವರೇ, ತೀರಿಕೊಂಡರು!

ಕೆಲಸದ ಹಾಗೂ ಶಾಂತವಾದ ಧ್ಯಾನದ, ಶಾಸ್ತ್ರಾಧ್ಯಯನದ ಆನಂದ ಇವೆಲ್ಲವೂ ಸಮಾನವೆ? ಹೌದು, ಅವೆಲ್ಲವೂ ಸಮಾನ. ಇವೆರಡೂ ಸಮನ್ವಯದಿಂದ ಕೂಡಿದ ಆಧ್ಯಾತ್ಮಿಕ ಬೆಳವಣಿಗೆಗೆ ಆವಶ್ಯಕ.

ರಾಮಕೃಷ್ಣ ಮಹಾಸಂಘದ ಹತ್ತನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ವಿರಜಾನಂದರ ಸೇವೆ ಮಾಡುವ ಅವಕಾಶವೂ ನನಗೆ ಒದಗಿ ಬಂತು. ಅವರದೂ ಕ್ರಮಬದ್ಧವಾದ, ನಿಯಮಿತವಾದ ಜೀವನ. ಅವರು ಕಠಿಣ ಶ್ರಮವಹಿಸಿ ದುಡಿಯುತ್ತಿದ್ದರು ಕೂಡ. ಅವರೇನು ಮಾಡಿದರೂ ಅದನ್ನು ಸಂಪೂರ್ಣವಾಗಿ, ಸಮಗ್ರವಾಗಿ ಮಾಡುತ್ತಿದ್ದರು. ಅದೇ ರೀತಿ ಇತರರಿಂದಲೂ ಚೆನ್ನಾಗಿ ಕೆಲಸ ಮಾಡಿಸುತ್ತಿದ್ದರು. ಅವರಿಗೆ ಒಳ್ಳೆಯ ಕೆಲವೊಮ್ಮೆ ಗಾಢವಾದ ಧ್ಯಾನದ ಮನಃಸ್ಥಿತಿ ಬಂದುಬಿಡುತ್ತಿತ್ತು. ಅವರಿಗೆ ಒಳ್ಳೆಯ ಹಾಸ್ಯ ಪ್ರವೃತ್ತಿ ಕೂಡ ಇತ್ತು. ಕೆಲವೊಮ್ಮೆ ಅವರು ಕೆಲವು ತಿಂಡಿ, ಸಿಹಿತಿಂಡಿಗಳನ್ನೂ ತಯಾರು ಮಾಡಿ ಸಾಧುಗಳಿಗೆ ಕಳುಹಿಸಿ ಕೊಡುತ್ತಿದ್ದರು. ಅವುಗಳನ್ನು ಮೊದಲೇ ಎಣಿಸಿ ಕಳುಹಿಸಿಕೊಡುತ್ತಿದ್ದರು, ಹೀಗಾಗಿ ಯಾರಿಗೂ ಒಂದಕ್ಕಿಂತ ಹೆಚ್ಚು ಸಿಗುತ್ತಿರಲಿಲ್ಲ! ಅವರ ಬಳಿ ಇನ್ನೂ ಹೆಚ್ಚು ತಿಂಡಿ, ಸಿಹಿತಿಂಡಿ ಇರುತ್ತಿದ್ದವು. ಅವು ಹಳಸಿಹೋಗುತ್ತಿದೆ ಎಂದು ನಮಗೆ ಗೊತ್ತಿತ್ತು. ನಾವು ಏನು ಯೋಚಿಸುತ್ತಿದ್ದೇವೆ ಎಂಬುದನ್ನರಿತು ಅವರು ಲೇವಡಿ ಮಾಡುವಂತೆ, ''ಹಳಸಿದವು, ಹಳಸಿದವು!'' ಎನ್ನುತ್ತಿದ್ದರು. ಅವರು ಮತ್ತೇನೋ ಉಪಾಯ ಮಾಡಿ ಆ ತಿಂಡಿ, ಸಿಹಿತಿಂಡಿಗಳನ್ನು ನಮಗೆ ಕಳುಹಿಸಿಕೊಡುತ್ತಿದ್ದರು. ನೋಡಿದರೆ ಅವು ಎಷ್ಟೊಂದು ಚೆನ್ನಾಗಿರುತ್ತಿದ್ದವು! ಅಮೇಲೆ ಅವರು ಕೇಳುತ್ತಿದ್ದರು, ''ಈಗ ಅವರೇನು ಮಾಡುತ್ತಿದ್ದಾರೆ, ಅವರೇನು ಮಾಡುತ್ತಿದ್ದಾರೆ?''

ಕೊನೆಯ ಗಳಿಗೆಯಲ್ಲೂ ಈ ಹಾಸ್ಯ ಪ್ರವೃತ್ತಿ ಅವರಲ್ಲಿತ್ತು. ವೈದ್ಯರು ಕೈಚೆಲ್ಲಿ, ಎಲ್ಲ ನಿರೀಕ್ಷೆಯನ್ನೂ ಬಿಟ್ಟುಬಿಟ್ಟಿದ್ದರು. ಅವರ ಕೋಣೆಯಲ್ಲಿ ಅನೇಕ ಮಂದಿ ಸಾಧುಗಳು ಸೇರಿದ್ದರು. ಸಾಧುಗಳೆಲ್ಲ ''**ಹರಿ ಓಂ ರಾಮಕೃಷ್ಣ**'' ಎಂದು (ಸಾಮಾನ್ಯವಾಗಿ ದೇಹ ಬಿಟ್ಟ ಮೇಲೆ ಈ ರೀತಿ ಭಜನೆ ಮಾಡುತ್ತಾರೆ) ಹಾಡುತ್ತಿದ್ದುದನ್ನು

ಕೇಳಿ ಅವರು ಚಟಾಕಿ ಹಾರಿಸಿದರು, ''ಎಖೋನ್ ನಾ, ಎಖೋನ್ ನಾ, ದೇರಿ ಆಛೇ'' ''ಈಗಲ್ಲ , ಈಗಲ್ಲ ; ಇನ್ನೂ ತಡವಿದೆ.'' ನಿಜವಾಗಿಯೂ ಕೊನೆಯ ಗಳಿಗೆ ಬಂದಾಗ ಅದು ನೋಡತಕ್ಕ ದೃಶ್ಯವೇ ಆಗಿತ್ತು. ಅವರ ಮುಖದಲ್ಲಿ ಬೆಳಕು, ಮೈಯಲ್ಲಿ ರೋಮಾಂಚನ, ಕಣ್ಣಿನ ತುದಿಯಿಂದ ಬಾಷ್ಪಬಿಂದುಗಳು ಉರುಳಿದವು — ಶಾಸ್ತ್ರಗಳಲ್ಲಿ ಹೇಳಿರುವ ಪ್ರಕಾರ ದಿವ್ಯ ಆನಂದದ ಎಲ್ಲ ಚಿಹ್ನೆಗಳೂ ಅಲ್ಲಿ ಕಂಡುಬಂದವು.

ಗೃಹಸ್ಥರೂ ಕೂಡ ಇದೇ ರೀತಿಯ ಸ್ಫೂರ್ತಿದಾಯಕ ಜೀವನವನ್ನು ನಡೆಸಬಹುದೆ? ಹೌದು, ನಡೆಸಬಹುದು. ಇಲ್ಲೊಂದು ಘಟನೆಯನ್ನು ನೆನಪಿಸಿಕೊಳ್ಳುತ್ತೇನೆ. ಇದೂ ಕೊನೆಯ ಕ್ಷಣಗಳೇ: ಒಬ್ಬ ಭಕ್ತನ ಮರಣ ಇನ್ನೇನು ಸಮೀಪಿಸಿದೆ ಎಂದು ನನಗೆ ಯಾರೋ ತಿಳಿಸಿದರು. ನಾನು ಅವನನ್ನು ನೋಡಲು ಹೋದೆ. ಅವನ ಪತ್ನಿ ಅವನ ಕಾಲುಗಳಿಗೆ ಮಸಾಜ್ ಮಾಡುತ್ತಿದ್ದಳು. ಭಕ್ತ ತಲೆಯೆತ್ತಿ ನನ್ನತ್ತ ನೋಡಿ ಹೇಳಿದ, ''ನನಗೆ ಆಶೀರ್ವಾದ ಮಾಡಿ. ಅದರಿಂದ ನಾನು ಗುರಿ ತಲುಪುವೆ. ಶ್ರೀರಾಮಕೃಷ್ಣರ ಪಾದಗಳಲ್ಲಿ ಒಂದಾಗುವೆ.'' ಸ್ವಲ್ಪ ಹೊತ್ತು ಅವನು ಸುಮ್ಮನಿದ್ದ. ಅನಂತರ ತನ್ನ ಪತ್ನಿಯ ಕಡೆಗೆ ನೋಡಿ ಹೇಳಿದ, ''ಈಗ ಸಮಯ ಬಂದೇಬಿಟ್ಟಿತು. ಚರಣಾಮೃತ(ತೀರ್ಥ)ವನ್ನು ನನ್ನ ಬಾಯಿಗೆ ಹಾಕು.'' ತೀರ್ಥವನ್ನು ಸೇವಿಸಿ ಅವನು ಉಚ್ಚರಿಸಿದ, ''ರಾಮಕೃಷ್ಣ, ರಾಮಕೃಷ್ಣ.'' ಅಲ್ಲೇ ಅವನು ಕೊನೆಯುಸಿರೆಳೆದ.

ಹೀಗೆ ಸಂನ್ಯಾಸ ಜೀವನ, ಗೃಹಸ್ಥ ಜೀವನ ಇವೆರಡೂ ಆಧ್ಯಾತ್ಮಿಕ ಜೀವನದ ಬೆಳವಣಿಗೆಗೆ ಯೋಗ್ಯವಾದ ಮಾರ್ಗಗಳಾಗಿವೆ. ಆದರೆ ಈ ಮೂಲಕ ಸರಿಯಾದ ದಾರಿಯನ್ನೇ ತುಳಿಯಬೇಕು. ಕೇವಲ ಕಾವಿ ಬಟ್ಟೆಯನ್ನು ಧರಿಸುವ ಮೂಲಕ ಕೊನೆಗೊಳ್ಳುವ ಸಂನ್ಯಾಸ ಜೀವನದಲ್ಲಿ ಏನೇನೂ ಇಲ್ಲ. ನಿಮ್ಮ ಬಳಿ ಮಂತ್ರವಿದೆ, ಆ ಮಂತ್ರವನ್ನು ನಿಮ್ಮ ಜೀವನದಲ್ಲಿ ನಿಜವಾಗಿಯೂ ಸಾಕ್ಷಾತ್ಕಾರಿಸಿಕೊಳ್ಳಬೇಕು. ಆಗ ಮಾತ್ರವೇ ನಿಮ್ಮ ಸಂನ್ಯಾಸಕ್ಕೆ ಬೆಲೆಯಿದೆ.

ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ವಿಜ್ಞಾನಾನಂದರಿಂದ ಮಂತ್ರದೀಕ್ಷೆ ಪಡೆದ ಸಂದರ್ಭವನ್ನು ನೆನೆಯುತ್ತ ನಾನು ಈ ಬರಹವನ್ನು ಕೊನೆಗೊಳಿಸುತ್ತೇನೆ. ದೇವರ ಮಂತ್ರವನ್ನು ಉಚ್ಚರಿಸುತ್ತ ನಮಗೆ ದೀಕ್ಷೆ ನೀಡುವಾಗ ಅವರು ಉನ್ಮತ್ತರಾಗಿದ್ದಂತೆ ಕಂಡುಬಂದರು. ಇಡೀ ಸನ್ನಿವೇಶವೇ ಅವರ್ಣನೀಯವೆಂಬಂತೆ ಕಂಡುಬಂದಿತ್ತು. ಧ್ಯಾನ ಜೀವನವನ್ನು ನಡೆಸುವವರು ಅರಸುವ ದಿವ್ಯೋನ್ಮಾದವೇ ಅದು. ಅಂಥ ದಿವ್ಯೋನ್ಮಾದದ ಒಂದು ಸಣ್ಣ ಕಣವೇ ದೊರೆತರೂ, ಒಬ್ಬ ವ್ಯಕ್ತಿ ಪರಿಪೂರ್ಣತೆಯನ್ನು ಹೊಂದುವನು.

ಗುಜರಾತಿನಲ್ಲಿ ಸೇವಾಕಾರ್ಯ



ಗುಜರಾತಿನ ರಾಜ್‌ಕೋಟ್ ಆಶ್ರಮದ ಅಧ್ಯಕ್ಷರಾಗಿ ನಿಯುಕ್ತರಾದ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅಲ್ಲಿನ ಪೂರ್ಣಬೆಳವಣಿಗೆಗೆ ಶ್ರಮವಹಿಸಿ ದುಡಿದರು. ಆ ಪ್ರದೇಶದ ಜನತೆ ಅವರೊಂದಿಗೆ ಎಷ್ಟೊಂದು ಆತ್ಮೀಯ ಬಾಂಧವ್ಯವನ್ನು ಇಟ್ಟುಕೊಂಡಿದ್ದರು ಎಂದರೆ, ಮುಂದಿನ ವರ್ಷಗಳಲ್ಲಿ ಅವರು ದೂರದ ಬೇಲೂರು ಮಠದಲ್ಲೇ ಅನೇಕ ವರ್ಷಗಳನ್ನು ಕಳೆಯಬೇಕಾಗಿ ಬಂದಾಗಲೂ ಗುಜರಾತಿನ ಜನರೊಂದಿಗೆ ಅವರಿಗೆ ಸಂಪರ್ಕವಿತ್ತು . ಕಛ್ ಪ್ರದೇಶದ ಧಾನೇತಿ ಎಂಬಲ್ಲಿ ಸ್ವಾಮೀಜಿ ನಡೆಸಿದ ಬರ ಪರಿಹಾರ ಕಾರ್ಯ ಸ್ಮರಣಾರ್ಹ.

ಧಾನೇತಿಯಲ್ಲಿ ಬರ ಉಂಟಾದಾಗ ಅಲ್ಲಿನ ಜನರಿಗೆ ಆಹಾರ ವಿತರಣೆ ಮಾಡುವುದಕ್ಕೂ ಸಾಧ್ಯವಾಗದೆ ಹೋಯಿತು. ಬೇರೆ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ನಡೆಯುತ್ತಿತ್ತು, ಆದರೆ ಇಲ್ಲಿಯತನಕ ಅದು ತಲುಪುತ್ತಿರಲಿಲ್ಲ. ಆತ್ಮಸ್ಥಾನಂದಜಿ ಮಹಾರಾಜ್ ಆಹಾರ ದ್ರವ್ಯಗಳೊಂದಿಗೆ ಅಲ್ಲಿಗೆ ಹೇಗೋ ತಲುಪಿದರೂ, ಒಂದಲ್ಲ ಒಂದು ಸಮಸ್ಯೆ ಎದುರಾಗುತ್ತಿತ್ತು. ಸಂನ್ಯಾಸಿಯೊಬ್ಬ ತಂದ ಆಹಾರವನ್ನು ಅಲ್ಲಿನ ಜನತೆ ಸ್ವೀಕರಿಸುತ್ತಿರಲಿಲ್ಲ. ಅವರೊಂದಿಗೆ ಚರ್ಚಿಸಿ ನೋಡಿದರು, ಅದನ್ನು ಸ್ವೀಕರಿಸಿ ಎಂದು ಪ್ರಾರ್ಥಿಸಿಯಾಯಿತು; ಆದರೂ ಜನ ಆಹಾರ ಸ್ವೀಕರಿಸಲಿಲ್ಲ. 'ಏನು ಮಾಡಲಿ?' ಎಂದು ಆಶ್ರಮದ ಸದಸ್ಯರೆಲ್ಲ ಚಿಂತಿತರಾದರು. ಕೊನೆಗೆ ಸ್ವಾಮಿ ಆತ್ಮಸ್ಥಾನಂದರು ಜನರ ಬಳಿಗೆ ಹೋಗಿ, ''ನೀವು ಈ ಆಹಾರವನ್ನು ಸ್ವೀಕರಿಸದಿದ್ದರೆ ನಾನೂ ಊಟ ಮಾಡಲಾರೆ. ಕೊನೆಯ ಉಸಿರಿನ ತನಕವೂ ಉಪವಾಸ ಮಾಡುತ್ತೇನೆ'' ಎಂದರು. ಹೇಳಿದಂತೆಯೇ ಮಾಡಿದರು ಸ್ವಾಮೀಜಿ : ಉಪವಾಸ ಕುಳಿತೇಬಿಟ್ಟರು. ಈಗ ಹಳ್ಳಿಯ ಜನ ಗಾಬರಿಗೊಂಡರು – ಸಂನ್ಯಾಸಿ ಉಪವಾಸ ಮಾಡಿದರೆ ಅದರ ಪಾಪ ತಮಗೂ ತಟ್ಟೀತೆಂದು ಅವರು ಹೆದರಿದರು. ಕೊನೆಗೂ ಅವರು ಆಹಾರ ಸ್ವೀಕರಿಸಲು ಒಪ್ಪಿದರು. ಮಹಾರಾಜರ ಪ್ರೀತಿ, ಅನುಕಂಪ ಹಾಗೂ ಸೇವಾ ಮನೋಭಾವ ಬಡ ಜನರ ಹೃದಯವನ್ನು ಗೆದ್ದಿತು.

ಮುಂದೆ ಅನೇಕ ವರ್ಷಗಳ ನಂತರ ಆತ್ಮಸ್ಥಾನಂದಜಿ ಮಹಾರಾಜ್ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದಾಗ ಧಾನೇತಿ ಗ್ರಾಮಕ್ಕೆ ಭೇಟಿ ಕೊಟ್ಟರು. ಆಗ ಅಲ್ಲಿನ ಪಂಚಾಯತಿ ಸದಸ್ಯೆ ಅವರನ್ನು ಸ್ವಾಗತಿಸುತ್ತ ಹೀಗೆ ಹೇಳಿದರು: ''ಶ್ರೀರಾಮಚಂದ್ರ ಮರಳಿ ಬಂದಾಗ ಅಯೋಧ್ಯೆಯ ಜನರು ಹೇಗೆ ಆನಂದಗೊಂಡರೋ, ಅದೇರೀತಿ ಇಂದು ಮಹಾರಾಜ್ ಬಂದಾಗಲೂ ನಮಗೆ ಅಂತಹ ಆನಂದ ಉಂಟಾಗಿದೆ.''

(ಸಂಗ್ರಹ: 'ಸ್ವಾಮಿ ಆತ್ಮಸ್ಥಾನಂದ' ಸಂಕ್ಷಿಪ್ತ ಜೀವನ ಚರಿತ್ರೆ)

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೮



ಕೆಳಗೆ ಬರೆದಿರುವ ಕಥೆಯಲ್ಲಿ ಶ್ರೀಮಾತೆಯವರು ಮಾಡಿದ ಕೆಲಸ ಹಾಗೂ ಅವರ ಮಾತುಗಳು ಗಮನಾರ್ಹವಾದುದು:

ಮಾಸ್ಟರ್ ಮಹಾಶಯ ತನ್ನ ವಿದ್ಯಾರ್ಥಿಯಾದ ವಿನೋದ ವಿಹಾರಿ ಸೋಮನನ್ನು ಶ್ರೀರಾಮಕೃಷ್ಣರ ಬಳಿಗೆ ಕರೆದುಕೊಂಡು ಹೋಗಿದ್ದ. ವಿನೋದ ವಿಹಾರಿಯದು ಬಹಳ ಎಳೆಯ ವಯಸ್ಸು. ಅವನ ಹೆಸರು 'ಶ್ರೀರಾಮಕೃಷ್ಣ ವಚನವೇದ'ದಲ್ಲೂ ಬರುತ್ತದೆ. ಅವನ ಮನೆ ಬಾಗ್‌ಬಜಾರಿನ ರಾಮಕಾಂತ ದಾಸ್ ಸ್ಟ್ರೀಟ್ ನಲ್ಲಿತ್ತು.[೧] ಭಕ್ತರ ನಡುವೆ ಅವನ ಹೆಸರು 'ಪದ್ಮವಿನೋದ್' ಎಂದಾಗಿತ್ತು. ನಾವೆಲ್ಲ ಅವನನ್ನು ನೋಡಿದುದು ತೀರ ಇತ್ತೀಚೆಗೆ; ಅಲ್ಲಿಂದೀಚೆಗೆ ಅವನ ಬಗ್ಗೆ ನಾನು ಖಂಡಿತ ವಿವರಿಸಬಲ್ಲೆ. ಆದರೆ ಅದಕ್ಕೂ ಹಿಂದೆ ಅವನ ಜೀವನದಲ್ಲಿ ಅನೇಕ ಬದಲಾವಣೆಗಳಾಗಿದ್ದವು. ಅವನ್ನು ಹೇಳದೆ ಅವನ ಅಲೌಕಿಕ ಜೀವನವನ್ನು ಸರಿಯಾಗಿ ತಿಳಿದುಕೊಳ್ಳಲಾಗದು. ತಾರುಣ್ಯದಲ್ಲೇ ಅವನು ಥಿಯೇಟರಿಗೆ ಸೇರಿಕೊಂಡಿದ್ದ; ಚೆನ್ನಾಗಿ ಅಭಿನಯ ಮಾಡುತ್ತಿದ್ದ. ಅವನು ಎಲ್ಲ ಪಾತ್ರಗಳನ್ನೂ ಚೆನ್ನಾಗಿ ಅಭಿನಯಿಸುತ್ತಿದ್ದ. ಅವುಗಳಲ್ಲಿ ಒಂದು ಪಾತ್ರದ ಬಗ್ಗೆ ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ.

ಗಿರೀಶಚಂದ್ರನ 'ಪ್ರಫುಲ್ಲ' ಎಂಬ ನಾಟಕದಲ್ಲಿ ಅವನು ಮುಲುಕ್‌ಚಂದ್ ಧುಧುರಿಯಾನ ಪಾತ್ರದೊಂದಿಗೆ ರಂಗಕ್ಕೆ ಬರುತ್ತಿದ್ದ. ಅದನ್ನು ಅವನು ಎಷ್ಟೊಂದು ಚೆನ್ನಾಗಿ ಅಭಿನಯಿಸಿ ತೋರಿಸುತ್ತಿದ್ದನೆಂದರೆ, ಇಂದಿನವರೆಗೂ ಅವನಿಗೆ ಸರಿಸಮಾನವಾಗಿ ಅದನ್ನು ನಟಿಸಿದವರು ಇನ್ನೊಬ್ಬರಿಲ್ಲ. ಈ ವಿಷಯವನ್ನು ಅವಿನಾಶಚಂದ್ರ ಗಂಗೋಪಾಧ್ಯಾಯ ಬರೆದ 'ಗಿರೀಶಚಂದ್ರ' ಗ್ರಂಥದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಆಗಿನ ಕಾಲದಲ್ಲಿ ಥಿಯೇಟರಿಗೆ ಸೇರಿದವರಲ್ಲಿ ಬಹುಪಾಲು ಮಂದಿ ಎಷ್ಟು ಗುಣಗಳಿಂದ ಕೂಡಿದ್ದರೋ, ಅಷ್ಟೇ ದೋಷಗಳೂ ಅವರನ್ನು ಬಂದು ಸೇರುತ್ತಿದ್ದವು. ನಮ್ಮ ಪದ್ಮವಿನೋದನೂ ಕೂಡ ಚೆನ್ನಾಗಿ ಮದ್ಯಪಾನ ಮಾಡುವ ಅಭ್ಯಾಸ ಮಾಡಿಕೊಂಡ. ನಾನು ಅವನನ್ನು ನೋಡುವಾಗ ಆತ ಈ ವ್ಯಸನದಲ್ಲೇ ಯಾವಾಗಲೂ ಮುಳುಗಿ, ಮೈಮರೆತು ಬಿದ್ದುಕೊಂಡಿರುತ್ತಿದ್ದ. ಅವನು ಆಗಾಗ ಬಲರಾಮ ಬಾಬುವಿನ ಮನೆಯಲ್ಲಿ ಶರತ್ ಮಹಾರಾಜರ ಬಳಿಗೆ ಬಂದು, ಅವರನ್ನು ನೋಡಿ ಹೋಗುತ್ತಿದ್ದ ಹಾಗೂ ಅವರನ್ನು 'ದೋಸ್ತ್' ಎಂದು ಕರೆಯುತ್ತಿದ್ದ ಎಂದು ಕೇಳಿದ್ದೆ.

ಒಂದು ದಿನ ರಾತ್ರಿ ಹೊತ್ತು, ಆಗ ಎರಡನೇ ಪ್ರಹರಕ್ಕಿಂತ ಕಡಿಮೆಯೇನಲ್ಲ. ನಾವು ಬಾಗ್‌ಬಜಾರ್ ಸ್ಟ್ರೀಟ್‌ನ ಮನೆಯಲ್ಲಿ[೨] ನಿದ್ರಿಸುತ್ತಿದ್ದೆವು. ಹಠಾತ್ತನೆ, ಮುಚ್ಚಿದ್ದ ಕಿಟಕಿಯ ಮೇಲೆ ಬಡಿದಂತೆ ಶಬ್ದವಾಯಿತು. 'ದೋಸ್ತ್, ದೋಸ್ತ್' ಎಂಬ ಸದ್ದು ಕೇಳಿಬಂದು ನಮಗೆ ನಿದ್ರಾಭಂಗವಾಯಿತು. ಪದ್ಮವಿನೋದ ಬಂದಿದ್ದಾನೆ ಎಂದು ತಿಳಿದ ಶರತ್ ಮಹಾರಾಜ್, ನಮ್ಮ ಬಳಿ ಪಿಸುಗುಟ್ಟಿ, ಅವನಿಗೆ ಉತ್ತರ ಕೊಡಬಾರದು ಅಥವಾ ಬಾಗಿಲು ತೆಗೆಯಕೂಡದು ಎಂದು ಹೇಳಿದರು. ಕುಡಿದ ಮತ್ತಿನಲ್ಲಿ ಅವನು ಕೂಗಾಡಿದರೆ, ಅದರಿಂದ ಮೇಲಂತಸ್ತಿನಲ್ಲಿ ನಿದ್ರಿಸುತ್ತಿದ್ದ ಶ್ರೀಮಾತೆಯವರ ನಿದ್ರೆಗೆ ಭಂಗವುಂಟಾದೀತು ಎಂದು. ಕೆಲವು ಬಾರಿ ಕರೆದು, ಅನಂತರ ಪದ್ಮವಿನೋದ ಹೇಳಿದ, ''ಅಲ್ಲೋ, ನಾನು

೧. ಬಲರಾಮ ಮಂದಿರ ಈ ರಸ್ತೆಯಲ್ಲೇ ಇದೆ. *(–ಸಂ)*

೨. ೨/೧, ಬಾಗ್‌ಬಜಾರ್ ಸ್ಟ್ರೀಟಿನ ಸಮೀಪ. ಶ್ರೀಮಾತೆ ಅಲ್ಲಿ ಸುಮಾರು ಒಂದೂವರೆ ವರ್ಷ ವಾಸವಾಗಿದ್ದರು. *(–ಸಂ)*

ರಾತ್ರಿ ಹೊತ್ತು ಬಂದೆ, ನೀನು ದೋಸ್ತ್, ಎದ್ದು ಬರಲೂ ಇಲ್ಲ, ಉತ್ತರ ಕೊಡಲೂ ಇಲ್ಲ!'' ಎನ್ನುತ್ತ ಹೊರಟುಹೋದ.

ಎರಡನೇ ಬಾರಿ ಅವನು ಬಂದಾಗ ರಾತ್ರಿ ಸುಮಾರು ಮೂರನೇ ಪ್ರಹರವಾಗಿತ್ತು. ಹಿಂದಿನ ಸಲದ ಹಾಗೆ ಈ ಬಾರಿ ಕೂಡ ನಮ್ಮಿಂದ ಉತ್ತರ ಸಿಗದ ಕಾರಣ, ಅವನು ರಸ್ತೆಯಲ್ಲಿ ನಿಂತು ಶ್ರೀಮಾತೆಯವರನ್ನು ಸಂಬೋಧಿಸಿ ಹೇಳತೊಡಗಿದ, ''ಅಮ್ಮಾ, ನಿನ್ನ ಮಗ ಬಂದಿದ್ದಾನೆ, ಏಳಮ್ಮಾ.'' ಹೀಗೆಂದವನು, ಕುಡಿದ ಮತ್ತಿನಿಂದ (ಉತ್ತಮ ಸ್ವರದಲ್ಲಿ) ಹಾಡತೊಡಗಿದ:

ಏಳು ಕರುಣಾಮಯಿ, ಗುಡಿಸಿಲಿನ ಬಾಗಿಲನು ತೆರೆ,
ಕತ್ತಲಲಿ ನಡೆಯಲಾರೆ, ಎದೆ ಕಂಪಿಸುತಿದೆ, ತಡೆಯೆ;
ಮಗನ ಹೊರಗಡೆಯಿಟ್ಟು, ಅಂತಃಪುರದಿ
ನೀನು ಸುಖವಾಗಿರುವೆ,
(ನಾ) ಕರೆಯುತಿಹೆ ಅಮ್ಮಾ ಅಮ್ಮಾ ಎಂದು,
ನಿನ್ನ ನಿದ್ರೆ ಹರಿಯದೆ?

('ಉಠೊಗೋ ಕರುಣಾಮಯಿ, ಖೋಲೋಗೋ ಕುಟೀರ ದ್ವಾರ್')

ಮೊದಲ ಸಾಲನ್ನು ಅವನು ಹಾಡುತ್ತಿದ್ದಂತೆಯೇ ಮೇಲಂತಸ್ತಿನಲ್ಲಿ ಶ್ರೀಮಾತೆಯವರ ಕೋಣೆಯ ಕಿಟಕಿಯ ಒಂದು ಬಾಗಿಲು ತೆರೆಯುವ ಶಬ್ದ ಕೇಳಿ ಬಂತು. ಆಗ ಶರತ್ ಮಹಾರಾಜ್ ''ಅಯ್ಯೋ, ಅವನು ಶ್ರೀಮಾತೆಯವರನ್ನು ಎಬ್ಬಿಸಿಬಿಟ್ಟ!'' ಎಂದರು. ಆ ಹಾಡಿನ ನಾಲ್ಕನೇ ಸಾಲನ್ನು ಹಾಡುವಷ್ಟರಲ್ಲಿ ಶ್ರೀಮಾತೆಯವರ ಕಿಟಕಿಯ ಬಾಗಿಲು ಸಂಪೂರ್ಣವಾಗಿ ತೆರೆಯಿತು. ನಾವು ಕುತೂಹಲದಿಂದ ನಮ್ಮ ಕೋಣೆಯ ಕಿಟಕಿಯ ಒಂದು ಬಾಗಿಲನ್ನು ಮೆಲ್ಲನೆ ತೆರೆದು, ಗ್ಯಾಸ್‌ಲೈಟಿನ ಬೆಳಕಿನಲ್ಲಿ ನೋಡುತ್ತ ನಿಂತೆವು. ಶ್ರೀಮಾತೆಯವರು ಕಿಟಕಿ ತೆರೆದ ಶಬ್ದ ಕೇಳಿ ಪದ್ಮವಿನೋದ, ''ಅಮ್ಮಾ ಎದ್ದುಬಿಟ್ಟೆಯಾ? ಮಗನ ಕರೆ ನಿನ್ನ ಕಿವಿಗೆ ಕೇಳಿಸಿತೆ? ಎದ್ದಿದ್ದರೆ ನನ್ನ ಪ್ರಣಾಮ ಸ್ವೀಕರಿಸು'' ಎನ್ನುತ್ತ ರಸ್ತೆಯಲ್ಲಿ ಉರುಳಾಡಿದ. ಮತ್ತೆ ಅಲ್ಲಿಂದೆದ್ದು, ಆ ಸ್ಥಳದ ಧೂಳನ್ನು ಹಣೆಗೆ ಮೆತ್ತಿಕೊಂಡು ಅಲ್ಲಿಂದ ಹೊರಟುಹೋದ. ಅವನು ಸುಮ್ಮನೆ ಹೋಗಲಿಲ್ಲ, ಮತ್ತೆ ಲಯಬದ್ಧವಾಗಿ ಹಾಡುತ್ತ ಹೋದ. ನಿಶ್ಶಬ್ದವಾದ ಆ ರಾತ್ರಿಯಲ್ಲಿ ಬಹಳ ದೂರದಿಂದಲೂ ನಮ್ಮ ಕಿವಿಗೆ ಅವನ ಹಾಡು ಕೇಳಿ ಬರುತ್ತಿತ್ತು:

ಯತ್ನದಿ ನಿನ್ನೆದೆಯಲಿರಿಸು ಜಗನ್ಮಾತೆ ಶ್ಯಾಮೆಯನು
(ಮನವೇ) ನೀನು ನೋಡು, ನಾ ನೋಡುವೆ
ಬೇರಾರೂ ನೋಡದಿರಲಿ ॥
ನಾ ನೋಡುವೆ, 'ದೋಸ್ತ್' ಮಾತ್ರ ನೋಡದಿರಲಿ ॥

ಶ್ರೀಮಾತೆಯವರ ಕಿಟಕಿ ಈಗ ಮುಚ್ಚಲ್ಪಟ್ಟಿತು. ನಾವು ಕೂಡ ಅವನ, ವಿಷಯವನ್ನೇ ಚಿಂತಿಸುತ್ತ ಮಲಗಿ ನಿದ್ದೆ ಹೋದೆವು.

ಮರುದಿನ ಬೆಳಿಗ್ಗೆ ಶ್ರೀಮಾತೆಯವರ ಬಳಿಗೆ ಹೋದಾಗ ಅವರು ಕೇಳಿದರು, ''ಯಾರು ಆ ಹುಡುಗ?'' ಅವನ ಕುರಿತಾಗಿ ಎಲ್ಲ ವಿಷಯವನ್ನೂ ಕೇಳಿ ತಿಳಿದ ನಂತರ ಹೇಳಿದರು, ''ನೋಡಿದೆಯಾ? ಅವನ ಬುದ್ಧಿ ಎಷ್ಟು ಚುರುಕಾಗಿದೆ!''

ಇನ್ನೊಂದು ದಿನ ಇದೇರೀತಿ ಪದ್ಮವಿನೋದ ನಡುರಾತ್ರಿ ಹೊತ್ತು ಬಂದಿದ್ದ. ಅವನು ಯಾವಾಗ ಬಂದಿದ್ದನೋ ನಮಗೆ ಗೊತ್ತಾಗಲಿಲ್ಲ, ನಾವು ನಿದ್ರಿಸುತ್ತಿದ್ದೆವು. ಅವನ ಹಾಡಿನಿಂದ ನಾವು ನಿದ್ದೆ ಬಿಟ್ಟೆದ್ದೆವು. ನಿಧಾನವಾಗಿ ಕಿಟಕಿ ತೆರೆದು ನೋಡಿದೆ, ಹಿಂದಿನಂತೆಯೇ ಅವನು ರಸ್ತೆಯಲ್ಲಿ ನಿಂತು ಶ್ರೀಮಾತೆಯವರ ಕಡೆಗೆ ನೋಡುತ್ತ ಹಾಡುತ್ತಿದ್ದ:

ಮಸಣವೇ ನಿನಗೆ ಪ್ರಿಯವೆಂದು ತಿಳಿದು
ಮಸಣವಾಗಿಸಿದೆ ನಾನೆನ್ನ ಹೃದಯವನು,
ಮಸಣದಲೆ ನೆಲೆಸಿರುವ ತಾಯೆ ಶ್ಯಾಮಾ,
ನರ್ತಿಸುವೆ ನೀನಲ್ಲೆ ಅನವರತ ಎಂದು.

ನನ್ನ ಚಿತ್ತದಲಿ ಬೇರೇನೇನು ಉಳಿದಿಲ್ಲ,
ಹಗಲಿರುಳು ಚಿತೆಯಾಗಿ ಧಗಧಗಿಸುತಿದೆ ಜ್ವಾಲೆ;
ಸುತ್ತಲೂ ಚಿತಾಭಸ್ಮ ಚೆಲ್ಲಾಡಿ ಕಾದಿರುವೆ
ಎಂದಾದರೂ ನೀನು ಬಳಿಗೆ ಬರುವೆಯೊ ಎನುತ.

ಪದತಲದಿ ಮೃತ್ಯುಂಜಯನ ಕೆಡವಿ ತುಳಿದಿರುವೆ,
ಆ ಮಹಾಕಾಲನನೆ ನೆಲವಾಗಿಸಿ;
ತಾಳಲಯವಿರಲು ನಲಿಯಮ್ಮ ನೀ ಕೊನೆಯಿರದೆ
ನೋಡುವೆನು ನಾ ನಿನ್ನ, ಕಣ್ಣ ಮುಚ್ಚಿ.

(ಮೂಲ ಬಂಗಾಳಿ : *ಶ್ಮಶಾನ್ ಭಾಲೊಬಾಸಿಸ್ ಬೋಲೇ..)*

ಹಾಡಿನ ಪ್ರಭಾವದಿಂದ ಹಿಂದಿನಂತೆಯೇ ಶ್ರೀಮಾತೆಯವರ ಕಿಟಕಿ ತೆರೆಯುವ ಶಬ್ದ ಕೇಳಿಬಂತು. ಶ್ರೀಮಾತೆಯವರ ದರ್ಶನ ಪಡೆದ ಮೇಲೆ ಅವನು ಮೊದಲಿನಂತೆ ರಸ್ತೆಯ ಮೇಲೆ ಉರುಳಾಡಿ, ಹಿಂದಿನಂತೆಯೇ ಹಾಡುತ್ತಾ ಹೋದ; ಮತ್ತೇನೂ ಗದ್ದಲವೆಬ್ಬಿಸಲಿಲ್ಲ.

ಮರುದಿನ ಬೆಳಿಗ್ಗೆ ಶ್ರೀಮಾತೆ, ''ನೋಡಿದೆಯಾ? ಅವನ ಬುದ್ಧಿ ಎಷ್ಟು ಚುರುಕಾಗಿದೆ!'' ಎಂದರು. ಅದಕ್ಕೆ ನಾನು, ''ಅವನು ನಿಮ್ಮ ನಿದ್ರೆಯನ್ನು ಹಾಳು ಮಾಡಿದ!'' ಎಂದೆ. ಆಗ ಶ್ರೀಮಾತೆ, ''ಅದು ಹೋಗಲಿ, ಮಗೂ. ಅವನು ಕರೆಯುತ್ತಿದ್ದಾಗ ನನಗೆ ಸುಮ್ಮನಿರಲಾಗಲಿಲ್ಲ. ಅದಕ್ಕೇ ನಾನು ತೋರಿಸಿಕೊಟ್ಟೆ'' ಎಂದರು.

ಪದ್ಮವಿನೋದ ಮತ್ತೆ ಬರಲಿಲ್ಲ; ಶ್ರೀಮಾತೆಯವರ ನಿದ್ರೆಗೂ ಭಂಗವುಂಟಾಗಲಿಲ್ಲ. ನಮಗೂ ಕುತೂಹಲದಿಂದ ಅವರ ನಡುವಿನ ಸಂಬಂಧವನ್ನು ಗಮನಿಸಲಾಗಲಿಲ್ಲ. ಹೀಗೆಯೇ ಬಹಳ ದಿನ ಕಳೆಯಿತು. ಮುಂದೊಂದು ದಿನ ಬೆಳಗಿನ ಹೊತ್ತು ಅವನ ಮಗ (ವಯಸ್ಸು ಹನ್ನೆರಡು–ಹದಿಮೂರು) ಶರತ್ ಮಹಾರಾಜರ ಬಳಿಗೆ ಬಂದು, ಅವರನ್ನು ಕರೆದುಕೊಂಡು ಹೋದ.

ಶರತ್ ಮಹಾರಾಜರು ಮರಳಿ ಬಂದಾಗ ಸ್ನೇಹಿತ ಡಾಕ್ಟರ್ ಕಂಜೀಲಾಲ್ ನಮ್ಮ ಬಳಿ ಕುಳಿತಿದ್ದ. ಶರತ್ ಮಹಾರಾಜರು ಸೇವೆಗೆ ಸಿದ್ಧರಾಗಲು ನಮಗೆ ಆದೇಶ ನೀಡಿದರು. ಯಾಕೋ ತಿಳಿಯದು, ಪದ್ಮವಿನೋದನಿಗೆ ಮರಣಾಂತಿಕ ಕಾಯಿಲೆ ಉಂಟಾಗಿತ್ತು. ಅವನು ಜಲೋದರ (dropsy) ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದ. ಈ ವಿಷಯವನ್ನು ಕೇಳಿ ತಟ್ಟನೆ ಎದ್ದು ನಿಂತ ಸ್ನೇಹಿತ; ಅವನಿಗೆ ಸಹಜ ಸ್ವಭಾವವಾಗಿದ್ದ ಸೇವಾಧರ್ಮ ಕೆಲಸ ಮಾಡಿತು. ನಮ್ಮೊಂದಿಗೆ ಅವನು ಹಾಸಿಗೆ ಹಿಡಿದು ಮಲಗಿದ್ದ ರೋಗಿಯ ಬಳಿಗೆ ಹೊರಟ.

ರೋಗಿಯನ್ನು ನೋಡಿದ ಡಾಕ್ಟರ್, ಪ್ರಾಣಧನ ಬಸುವಿನ ಮೂಲಕ ಹೊಟ್ಟೆಗೆ ತೂತು ಕೊರೆದು ('ಟ್ಯಾಪ್' ಮಾಡಿ) ಹೊಟ್ಟೆಯಲ್ಲಿದ್ದ ನೀರನ್ನು ಹೊರ ಹಾಕಿದ. ರೋಗಿ ನಿಟ್ಟುಸಿರು ಬಿಟ್ಟು ಉಳಿದುಕೊಂಡ. ಆದರೆ, 'ಲಿಖಿತಮಿಹ ಲಲಾಟೇ ಪ್ರೋಜ್ಝಿತುಂ ಕಃ ಸಮರ್ಥಃ?' – ಹಣೆಬರಹವನ್ನು ಅಳಿಸಲು ಸಮರ್ಥರಾರು? ರೋಗಿಯು ಮಲಗಿಕೊಂಡೇ ವಾಮಮಾರ್ಗದಿಂದ ಮದ್ಯ ಸಂಗ್ರಹ ಮಾಡುವುದನ್ನು ಬಿಡಲಿಲ್ಲ. ಅದರ ಪರಿಣಾಮವಾಗಿ ಮತ್ತೆ ಎರಡು ವಾರಗಳಲ್ಲಿ ಮೊದಲಿನ ಅವಸ್ಥೆಯೇ ಬಂದೊದಗಿತು. ಮತ್ತೆ ಸ್ನೇಹಿತ ಡಾಕ್ಟರ್‌ನ ದಯೆಯಿಂದ 'ಟ್ಯಾಪ್' ಮಾಡಲಾಯಿತು. ಶಸ್ತ್ರಚಿಕಿತ್ಸೆಯಿಲ್ಲದೆ ಬೇರೆ ದಾರಿಯಿಲ್ಲವೆಂದು ಡಾಕ್ಟರರು ಹೇಳಿದರು. ಆಸ್ಪತ್ರೆಗೆ ಹೋಗುವ ವಿಷಯವಾಗಿ ರೋಗಿ ಕೂಡ ಅತ್ಯಂತ ಅವಸರ ಮಾಡಿದ.

ನಾನು ಹೇಳುತ್ತಿರುವ ಘಟನೆ ನಡೆದಾಗ, ಕಲ್ಕತ್ತೆಯಲ್ಲಿ ಜಲೋದರ ಕಾಯಿಲೆಗೆ ಶಸ್ತ್ರಚಿಕಿತ್ಸೆ ಮಾಡಲು ಎಲ್ಲರಿಗಿಂತ ಸಮರ್ಥನಾದ ಡಾಕ್ಟರ್ ಬ್ರಾಯಿನ್ ಸಾಹೇಬ್ ಅತ್ಯಂತ ಪರಿಣಿತನೆಂದು ಬಹಳ ಪ್ರಖ್ಯಾತನಾಗಿದ್ದ. ಅವನು ಭವಾನೀಪುರದ ಶಂಭುನಾಥ ಪಂಡಿತರ ಆಸ್ಪತ್ರೆಯಲ್ಲಿ ರೋಗಿಗಳನ್ನು ಪರೀಕ್ಷೆ ಮಾಡುತ್ತಿದ್ದ. ನಮ್ಮ ರೋಗಿಯನ್ನು ಅಲ್ಲಿ ಒಂದು ಪ್ರತ್ಯೇಕ ಕೋಣೆಗೆ ವರ್ಗಾಯಿಸಲಾಯಿತು. ಸಾಹೇಬ ಪ್ರತಿದಿನವೂ ರೋಗಿಯನ್ನು ನೋಡುತ್ತಿದ್ದ, ಆದರೆ ನಮಗೇನೂ ಹೇಳುತ್ತಿರಲಿಲ್ಲ. ನಮ್ಮ ಸ್ನೇಹಿತನನ್ನು ಪ್ರತ್ಯೇಕ ಕರೆದು ಏನೋ ಹೇಳುತ್ತಿದ್ದ; ಆದರೆ ಅದನ್ನು ನಮಗೆ ಹೇಳದಂತೆ ನಿಷೇಧಿಸಿದ್ದ. ಹೀಗೆ ಎರಡು ದಿನ ಕಳೆಯಿತು. ಅತ್ತ ರೋಗಿ ಶಸ್ತ್ರಚಿಕಿತ್ಸೆಗೋಸ್ಕರ ಅವಸರ ಮಾಡುತ್ತಿದ್ದ. ಮೂರನೇ ದಿನ ಸಾಹೇಬ ರೋಗಿಯನ್ನು ನೋಡಲು ಹೋದಾಗ, ರೋಗಿ ಕಷ್ಟ ಸಹಿಸಲಾಗದೆ ಆತನಿಗೆ ಹೇಳಿದ, ''ನಾನು ಆಪರೇಷನ್ ಮಾಡಲು ಹೇಳುತ್ತಿದ್ದೇನೆ. ನೀವೇಕೆ ಹಿಂದೆ ಮುಂದೆ ನೋಡುತ್ತಿದ್ದೀರಿ? ನೀವು ಇಂಗ್ಲಿಷ್ ಸಾಹೇಬರೆಂದು ಕೇಳಿದ್ದೆ, ಭಾರೀ ಧೈರ್ಯಶಾಲಿ ಅಂತ. ಆದರೆ ಈಗ ನೋಡಿದರೆ ನೀವು ಬೇರೆ ಥರ.'' ಸಾಹೇಬನಿಗೆ ರೋಗಿಯ ಮಾತುಗಳನ್ನು—ವಿಶೇಷವಾಗಿ ಕೊನೆಯ ಮಾತನ್ನು ಸಹಿಸಲಾಗದೆ, ಮರುದಿನ ಬೆಳಗ್ಗೆಯೇ ಅವನ ಶಸ್ತ್ರಚಿಕಿತ್ಸೆಗೆ ಆದೇಶ ನೀಡಿದ.

ಸೂಕ್ತ ಸಮಯದಲ್ಲಿ ಶಸ್ತ್ರಚಿಕಿತ್ಸೆಯ ಕೋಣೆಗೆ ರೋಗಿಯನ್ನು ಕರೆದೊಯ್ದರು. ಸ್ನೇಹಿತ ಡಾಕ್ಟರನ ವ್ಯವಸ್ಥೆಯಿಂದಾಗಿ, ನಾನು ಡಾಕ್ಟರ್ ಅಲ್ಲದಿದ್ದರೂ ಕೂಡ ನನಗೆ ಪ್ರವೇಶ ದೊರಕಿತು. ಸಾಹೇಬನ ಶಸ್ತ್ರಚಿಕಿತ್ಸೆಯನ್ನು ನೋಡಲು ಡಾಕ್ಟರ್ ಹಾಜರಾ ಹಾಗೂ ಕಲ್ಕತ್ತೆಯ ಕೆಲವು ಮಂದಿ ಹೊಸ ಡಾಕ್ಟರರೂ ಬಂದಿದ್ದರು. ಡಾಕ್ಟರ್ ಹಾಜರಾ ರೋಗಿಗೆ ಅರಿವಳಿಕೆ ನೀಡಿ ಪ್ರಜ್ಞೆ ತಪ್ಪಿಸಿದರು, ಹಾಗೂ ನಾಡಿ ಹಿಡಿದು ಕುಳಿತರು. ಡಾಕ್ಟರ್ ಕಂಜೀಲಾಲ್, ಸಾಹೇಬನ ಸಹಾಯಕ್ಕೆ ನಿಂತ. ಹೊಟ್ಟೆಯನ್ನು ಕೊಯ್ದು ಆ ಸಾಹೇಬ ಡಾಕ್ಟರ್ ಹೇಳಿದ, ''ನನ್ನ ಕೈಲಿ ಈ ರೋಗದ ೨೨ನೇ ರೋಗಿ ಈತ. ೨೧ ಮಂದಿ ಆರೋಗ್ಯವಂತರಾಗಿ ಹೋದರು. ಆದರೆ ಈ ಬಾರಿ ಅದು ವಿರುದ್ಧವಾದೀತು. ನಾಳಗಳೆಲ್ಲ ಕೊಳೆತು ಹೋಗಿವೆ.''

ಶಸ್ತ್ರಚಿಕಿತ್ಸೆಯ ನಂತರ ರೋಗಿಯನ್ನು ಅವನ ಕೋಣೆಗೆ ಕರೆತರಲಾಯಿತು. ಅವನಿಗೆ ಕಂಬಳಿ ಹೊದಿಸಿ, ನಾಲ್ಕೂ ಕಡೆ ಬಿಸಿ ನೀರು ತುಂಬಿದ ಬಾಟಲಿಗಳನ್ನು ಇಡಲಾಯಿತು. ಕೈಕಾಲುಗಳನ್ನು ಕಟ್ಟಿಹಾಕಲು ಸಿದ್ಧತೆ ನಡೆಸಿದಾಗ ನಾನೆಂದೆ, ''ಏನೂ ಭಯವಿಲ್ಲ, ಅವನನ್ನು ಕಟ್ಟಿಹಾಕಬೇಡಿ. ಅವನ ಭಾರವನ್ನು ನಾನು ವಹಿಸಿಕೊಂಡಿದ್ದೇನೆ. ಅವನನ್ನು ಅಲುಗಾಡಲು ಬಿಡಲಾರೆ.'' ಆಗ ನರ್ಸುಗಳು ಬಿಟ್ಟುಕೊಟ್ಟರು. ಅನಂತರ ಡಾಕ್ಟರ್ ಹಾಜರಾ ಬಂದು ಹೇಳಿದರು, ''ನೀವು ರೋಗಿಗೆ ಎಳ್ಳಷ್ಟೂ ತಿನ್ನಲು ಕೊಡುವುದಿಲ್ಲ ಅಂತ ಮಾತುಕೊಟ್ಟರೆ ಮಾತ್ರ ನಿಮ್ಮನ್ನು ರೋಗಿಯ ಸಮೀಪ ಇರಲು ಬಿಡಬಹುದು. ಇಪ್ಪತ್ತನಾಲ್ಕು ಗಂಟೆಯ ತನಕ ಸ್ವಲ್ಪ ಸ್ವಲ್ಪ ಬಿಸಿನೀರನ್ನು ಮಾತ್ರ ಕೊಡಬಹುದು. ಅದನ್ನೂ ಕೂಡ ನರ್ಸ್‌ಗಳು ಕೊಡುತ್ತಾರೆ. ನೀವು ಕೊಡಬೇಡಿ.'' ಅಂತೆಯೇ ನಾನು ಮಾತುಕೊಟ್ಟೆ.

ಆದರೆ ರೋಗಿಗೆ ಪ್ರಜ್ಞೆ ಮರಳಿದ ಕೂಡಲೇ ಅವನು ದ್ರಾಕ್ಷಿ ತಿನ್ನಬೇಕೆಂದು ನನ್ನನ್ನು ಪೀಡಿಸತೊಡಗಿದ. ನಾನೂ ಕೊಡಲಾರೆ, ಅವನೂ ಬಿಡುತ್ತಿಲ್ಲ. ಕೊನೆಯ ಮರ್ಮಭೇದಕ ಸ್ವರದಿಂದ ಅವನು ಕೈಜೋಡಿಸಿ ಒಂದೇ ಒಂದು ದ್ರಾಕ್ಷಿಗೋಸ್ಕರ ಪ್ರಾರ್ಥಿಸಿದ. ಆ ಕಾತರದ ಧ್ವನಿ, ಆ ಕರುಣಾಮಯ ಹಾಗೂ ಹೃದಯ ಸ್ಪರ್ಶಿಯಾದ ಪ್ರಾರ್ಥನೆ ಈ ಇಳಿವಯಸ್ಸಿನಲ್ಲೂ ಕಲ್ಲಿನ ಮೇಲೆ ಕೊರೆದಂತೆ ನನ್ನೆದೆಯಲ್ಲಿ ಧಗಧಗಿಸುತ್ತಿದೆ; ನನಗೆ ನಾನೇ ಧಿಕ್ಕಾರ ಕೂಗುತ್ತಿದ್ದೇನೆ, ಅದೇಕೆ ಕೊಡಲಿಲ್ಲವೆಂದು. ಅವನು ಎಷ್ಟು ಬಾರಿ ಹೇಳಿದ, ''ನೀನೆಂಥ ಸ್ನೇಹಿತ? ಒಂದೇ ಒಂದು ದ್ರಾಕ್ಷಿ ಬೇಕೆಂದೆ, ನಾನು ಇನ್ನೆಂದೂ ಅದನ್ನು ಕೇಳಲು ಬರಲಾರೆ – ಆದರೂ ನೀನು ಕೊಡಲಾರೆಯಾ?'' ನಾನೆಂಥ ನಿರ್ದಯಿ! ಡಾಕ್ಟರರ ಆದೇಶವನ್ನು ಪಾಲಿಸುವುದಕ್ಕಾಗಿ ಅದನ್ನೂ ಕೊಡದೆ ಹೋದೆನಲ್ಲ!

ಅದು ನಿಜಕ್ಕೂ ಭಯಾನಕ ದಿನ! ರೋಗಿಯನ್ನು ಬಿಟ್ಟು 'ಉದ್ಬೋಧನ'ಕ್ಕೆ ಊಟಕ್ಕೆ ಬರಲಾಗಲಿಲ್ಲ. ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ರೋಗಿಯ ಭಾವಮೈದುನ ಅವನನ್ನು ನೋಡಲು ಬಂದ. ನನಗೆ ತುಸು ಊಟ ತಂದುಕೊಟ್ಟ ಹಾಗೂ

ಒಬ್ಬನೇ ಸುಮ್ಮನೆ ಕುಳಿತಿರಲು ಕಷ್ಟವಾದೀತೆಂದು ಭಾವಿಸಿ 'ಕಥಾಮೃತ'('ವಚನವೇದ'ದ ಮೂಲ ಬಂಗಾಳಿ ಗ್ರಂಥ)ವನ್ನು ಕೊಟ್ಟು ಹೋದ. ಹೇಗೋ ಆ ದಿನವೆಲ್ಲ ಕಳೆಯಿತು; ರಾತ್ರಿಹೊತ್ತು ಮೊದಲ ಪ್ರಹರವೂ ಕಳೆಯಿತು.

ರಾತ್ರಿ ಒಂದು ಗಂಟೆಯ ಹೊತ್ತಿಗೆ ರೋಗಿ ಹೇಳಿದ: ''ಇನ್ನು ನಾನು ಬದುಕಲಾರೆ. ಒಂದೇ ಒಂದು ದ್ರಾಕ್ಷಿಹಣ್ಣು ಕೇಳಿದೆ, ನೀನು ಕೊಡಲಿಲ್ಲ, ಅದನ್ನು ಕೊಡದೆ ಒಳ್ಳೆಯದನ್ನೇ ಮಾಡಿದೆ. ಇನ್ನು ನನಗೆ ಬೇಡ. ಈಗ ಒಂದು ಕೆಲಸ ಮಾಡು, ದೋಸ್ತ್! ಠಾಕೂರರ ಮಾತನ್ನು ಕೇಳಬೇಕು. ನನ್ನ ಕೊನೆ ಹತ್ತಿರ ಬಂದಿದೆ.''

ನನ್ನ ಕೈಯಲ್ಲಿದ್ದ 'ಕಥಾಮೃತ' ಪುಸ್ತಕ ಮುಚ್ಚಿತ್ತು. ಅದನ್ನು ತೆರೆದೆ. ತೆರೆದೊಡನೆಯೇ ಎಂಥ ದೃಶ್ಯ ಬಂದಿತೆಂದರೆ, ಅದರಲ್ಲಿ ಅವನ ಹೆಸರೇ ಇತ್ತು. ಓದತೊಡಗಿದೆ. ಕೇಳುತ್ತ ಕೇಳುತ್ತ ಅವನ ಎರಡೂ ಕಣ್ಣುಗಳ ಅಂಚಿನಲ್ಲಿ ನೀರ ಹನಿ ಉದುರಿದವು. ಒಂದೇ ಬಾರಿ ಬಾಯಿಯಿಂದ 'ರಾಮಕೃಷ್ಣ' ಎಂದು ಉಚ್ಚರಿಸಿದ – ತನ್ನ ಇಹಲೀಲೆ ಮುಕ್ತಾಯಗೊಳಿಸಿದ. 'ಪದ್ಮವಿನೋದ' ಎಂಬ ಹೆಸರು ಧರೆಯಲ್ಲಿ ಒರೆಸಲ್ಪಟ್ಟಿತು.

ಮರುದಿನ ಬೆಳಿಗ್ಗೆ ಅವನ ಬಂಧು ಜನರು ವಿಷಯ ತಿಳಿದು ಬರಲಾರಂಭಿಸಿದರು. ಕೇವುಡಾತಲಾದ ಘಾಟಿನಲ್ಲಿ ಅವನ ಅಂತ್ಯ ಸಂಸ್ಕಾರ ನಡೆಯಿತು.

ಮಧ್ಯಾಹ್ನ ನಾನು 'ಉದ್ಬೋಧನ'ಕ್ಕೆ ಮರಳಿದೆ. ಎಲ್ಲರ ಊಟ ಮುಗಿದಿತ್ತು. ಶ್ರೀಮಾತೆಯವರ ಆದೇಶದಂತೆ ನನಗಾಗಿ ಮುಚ್ಚಿ ಇಟ್ಟಿದ್ದ ಅನ್ನವನ್ನು ತೆಗೆದುಕೊಂಡು, ಮೇಲಂತಸ್ತಿಗೆ ಹೋಗಿ ಊಟ ಮಾಡಲು ಕುಳಿತೆ.

ಊಟ ಮಾಡುತ್ತ ಶ್ರೀಮಾತೆಯವರ ಬಳಿ ಆದ್ಯಂತವಾಗಿ ಎಲ್ಲವನ್ನೂ ವಿವರಿಸಿದೆ. ಎಲ್ಲವನ್ನೂ ಕೇಳಿದ ಅವರು, ''ಹಾಗಾಗದೆ ಮತ್ತೆ? ಠಾಕೂರರ ಶಿಷ್ಯ ಅವನು. ಕೆಸರು ಮೆತ್ತಿಕೊಂಡಿದ್ದ, ಅದರಿಂದ ಏನಾಯಿತು? ಅವನು ಯಾರ ಶಿಷ್ಯನೋ, ಅವರ ಮಡಿಲಿಗೆ ಸೇರಿಕೊಂಡ'' ಎಂದರು.

ಅದನ್ನು ಕೇಳಿ ನಾನೆಂದೆ: ''ನನಗೆ ತಿಳಿಯದ್ದನ್ನು ನಾನು ಒಪ್ಪಲಾರೆ.''

ಶ್ರೀಮಾತೆ (ನಗುತ್ತ): ''ಹಾಗಲ್ಲದೆ ಮತ್ತೆ ನೀನು ಅದೇನು ಹೇಳುತ್ತೀಯಾ?''

''ನಾನೇನು ನೋಡಿದೆನೋ, ಏನನ್ನು ತಿಳಿದುಕೊಂಡೆನೋ ಅದನ್ನು ಮಾತ್ರ ಹೇಳುತ್ತೇನೆ. ನನಗೆ ಗೊತ್ತು — ಅವನು ನಿಮ್ಮ ದರ್ಶನ ಪಡೆದ ಅಂತ. ಅದರಿಂದಲೇ ಅವನಿಗೆ ಇಂಥ ಪರಿವರ್ತನೆಯಾಯಿತು. ನಾನೂ ಈ ದೃಶ್ಯವನ್ನು ನೋಡಿ ಧನ್ಯನಾದೆ.''

ಒಂದು ದಿನ ಬೆಳಗಿನ ಹೊತ್ತು ಮೇಲಂತಸ್ತಿಗೆ ಹೋದಾಗ ಅಲ್ಲಿ ಶ್ರೀಮಾತೆಯವರೊಂದಿಗೆ ಗೋಲಾಪ್ ಮಾ ಇದ್ದರು. ನನ್ನನ್ನು ನೋಡಿ ಶ್ರೀಮಾತೆ ಹೇಳತೊಡಗಿದರು: ''ಗೋಲಾಪ್ ಅಸಡ್ಡೆ ಇನ್ನೂ ಹೋಗಲಿಲ್ಲ. ಇಂಥ ಅಸಡ್ಡೆಯಿಂದಾಗಿ ಎಷ್ಟು ಏಟು ಬಿದ್ದರೂ, ಮೊದಲು ಯಾವ ರೀತಿ ಅಸಡ್ಡೆಯಿತ್ತೋ ಅದೇ ಅಸಡ್ಡೆ! ಅವಳು ಹೇಳುತ್ತಾಳೆ, 'ಹುಟ್ಟುಗುಣ ಸುಟ್ಟರೂ ಹೋಗಲ್ಲ, ಪಡೆದ ಮಾನ ಒರೆಸಿದರೂ ಹೋಗಲ್ಲ' ಅಂತ. ಅಸಡ್ಡೆಯ ಕಾರಣದಿಂದ ಗಾಡಿಯಿಂದ ಉರುಳಿಬಿದ್ದು, ಹೇಗೋ ಉಳಿದುಕೊಂಡಳು.''

ನಾನು ಕೇಳಿದೆ, ''ಅದು ಯಾವಾಗ ಆಯಿತಮ್ಮಾ?'' ಅದಕ್ಕೆ ಅವರೆಂದರು, ''ನಮ್ಮ ದೊಡ್ಡ ರಸ್ತೆಯಲ್ಲಿ, ಕೇದಾರನ ಮನೆ ಬಳಿ.'' ''ಯಾವ ಕೇದಾರ? ಚಿಕ್ಕಪ್ಪ ಕೇದಾರನೆ?'' ಶ್ರೀಮಾತೆ, ''ಹೌದು, ರಸ್ತೆ ದಾಟುತ್ತಿದ್ದಳು. ಆಚೀಚೆ ನೋಡಿ, ರಸ್ತೆ ದಾಟಿ ಬಿಡಪ್ಪಾ ಅಂದರೆ, ಆಗಲ್ಲವಲ್ಲ; ಒಂದೇ ಸವನೆ ಹೋಗಿಬಿಡುತ್ತಾಳೆ! ಬೀಳುವುದಿದ್ದರೂ, ಕುದುರೆ ಗಾಡಿಯ ಮುಂದೆ ಸುಮ್ಮನೇ ಬಿದ್ದು ಬಿಡುವುದಲ್ಲ; ಮುಂದಿನ ಎರಡು ಕಾಲುಗಳನ್ನು ಎತ್ತಿ ನಿಂತಿತ್ತು ಆ ಕುದುರೆ, ಅದರ ಮುಂದೆಯೇ ಬೀಳಬೇಕೆ? ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೆ ಕುದುರೆ ಕಾಲ ಕೆಳಗೆ ಬಿದ್ದುಬಿಡುತ್ತಿದ್ದಳು. ಥಟ್ಟನೆ ಒಬ್ಬ ಗಂಡಸು, 'ಸತ್ತಳು, ಹೆಂಗಸು ಸತ್ತೇ ಹೋದಳು' ಎನ್ನುತ್ತ ಅವಳನ್ನು ಎತ್ತಿ ಎಳೆದುಕೊಂಡು ಬಂದ. ಗೋಲಾಪ್ ಬದುಕಿ ಉಳಿದಳು.

''ಇನ್ನೊಂದು ದಿನ ನಮ್ಮ ಜಗನ್ನಾಥ ಘಾಟಿನ ಮನೆಯಲ್ಲಿ (ಗೋಲ್‌ಬಾಡಿಯ ಹತ್ತಿರ) ಇದ್ದಳು. ಅವಳ ಕೊಡವನ್ನು ನೋಡಿದ್ದೀಯಾ? ಆ ಕೊಡದೊಂದಿಗೆ ಸ್ನಾನಕ್ಕೆ ಹೋಗಿದ್ದಳು. ನೀರಿನ ಬಳಿ ಕೊಡವನ್ನಿಟ್ಟು ಸ್ನಾನ ಮಾಡತೊಡಗಿದ್ದಾಳೆ. ಅಷ್ಟರಲ್ಲಿ ನದಿಯ ಉಬ್ಬರವೆದ್ದಿದೆ. ಕೊಡ ತೇಲಿ ಹೋಗುತ್ತಿತ್ತು. ಕೊಡವೂ ತೇಲುತ್ತಿದೆ, ಅದರ ಹಿಂದೆ ಹಿಂದೆ ಗೋಲಾಪ್ ಕೂಡಾ ಹೋಗುತ್ತಿದ್ದಾಳೆ. ಜನ ಅದನ್ನು ನೋಡಿ ನಗತೊಡಗಿದರು. ಕೊನೆಗೊಬ್ಬಾತ ಆ ಕೊಡವನ್ನು ಹಿಡಿದುಕೊಟ್ಟ.

''ಅದಕ್ಕೇ ಅವಳಿಗೆ ಹೇಳಿದೆ, ಪ್ರಪಂಚದಲ್ಲಿ ಬದುಕಿರಬೇಕಾದರೆ ಎಲ್ಲ ತಿಳಿದುಕೊಂಡು ನಡೆಯಬೇಕು ಅಂತ. ಅಜಾಗರೂಕತೆಯನ್ನು ಬಿಟ್ಟುಬಿಡಬೇಕು. ಎಚ್ಚರಿಕೆಯಿಂದಿರಬೇಕು. ಹಾಗಿದ್ದರೆ ಮಾತ್ರ ಜನರ ಮಧ್ಯೆ ಇದ್ದುಕೊಂಡು ಜೀವಿಸಬಹುದು. ನನ್ನ ಬಳಿ ಬಂದು ಅಯ್ಯೋ ಎಂದು ಅತ್ತರೆ ಏನು ಪ್ರಯೋಜನ?''

ಗೋಲಾಪ್ ಮಾ–ಗೆ ಏನಾಯಿತೋ ನನಗೆ ಸ್ವಲ್ಪವೂ ಅರ್ಥವಾಗಲಿಲ್ಲ. ಶ್ರೀಮಾತೆಯವರ ಉಪದೇಶವನ್ನು ಮಾತ್ರ ಕೇಳಿದೆ.

ಶ್ರೀಮಾತೆ ಕಲ್ಕತ್ತೆಗೆ ಬಂದು ಹಲವು ದಿನಗಳೇ ಕಳೆದಿದ್ದವು. ಈಗ ಅವರು ತಕ್ಷಣವೇ ಜಯರಾಮಬಾಟಿಗೆ ಹೋಗುವ ಬಯಕೆಯನ್ನು ವ್ಯಕ್ತಪಡಿಸಿದರು. ನಡುನಡುವೆ ಅಲ್ಲಿಗೆ ಹೊರಡುವ ಮಾತುಕತೆ ನಡೆಯುತ್ತಿತ್ತು. ಒಂದು ದಿನ ಬೆಳಿಗ್ಗೆ ಕೇಳಿದರು, ''ಬೇಲೂರು ಮಠದಲ್ಲಿ ಈಗ ಯಾರು ಪೂಜೆ ಮಾಡುತ್ತಿದ್ದಾರೆ?''

``ಬಾಬುರಾಮ ಮಹಾರಾಜ್'' ಎಂದು ನಾನು ಉತ್ತರ ಕೊಟ್ಟೆ. ಅವರನ್ನು ಕರೆದುಕೊಂಡು ಬರಲು ಶ್ರೀಮಾತೆ ತಿಳಿಸಿದಾಗ, ಗಣೇಂದ್ರನಾಥ ಅವರನ್ನು ಕರೆದುಕೊಂಡು ಬಂದ. ಬಾಬುರಾಮ ಮಹಾರಾಜರ ಕೈಗೆ ಶ್ರೀರಾಮಕೃಷ್ಣರ ಕವಚ ಇತ್ಯಾದಿಗಳನ್ನು ಕೊಟ್ಟು, ಅವುಗಳಿಗೆ ನಿತ್ಯವೂ ಪೂಜೆ ಮಾಡಲು ಅವರು ಆದೇಶವಿತ್ತರು. ಬಾಬುರಾಮ ಮಹಾರಾಜ್ ಕೂಡಲೇ ಒಂದು ದೋಣಿಯನ್ನು ಬಾಡಿಗೆಗೆ ಗೊತ್ತುಮಾಡಿ, ಅವುಗಳನ್ನು ಬೇಲೂರು ಮಠಕ್ಕೆ ತೆಗೆದುಕೊಂಡು ಹೋದರು. ಅವರು ಹೋದ ಮೇಲೆ ಶ್ರೀಮಾತೆ ಹೇಳಿದರು, ``ಠಾಕೂರರ ಕವಚ ಮೊದಲಾದವು ಇಷ್ಟು ದಿನ ನನ್ನ ಬಳಿಯಿದ್ದವು. ಈಗ ಅದನ್ನು ಬೇಲೂರು ಮಠಕ್ಕೆ ಕೊಟ್ಟುಬಿಟ್ಟೆ. ಶರೀರಕ್ಕೆ ಒಳ್ಳೆಯದು, ಕೆಟ್ಟದ್ದು ಎರಡೂ ಇವೆ; ಯಾವಾಗ ಏನಾಗುತ್ತದೋ ಹೇಳಲಾಗದು. ಬಹುಶಃ ಜ್ವರ ಹಿಡಿದು ಮಲಗುತ್ತೇನೆ, ಚೈತನ್ಯವೇ ಇಲ್ಲ— ಯಾರೋ ಸಮಯ ನೋಡಿಕೊಂಡು ಕದ್ದುಕೊಂಡು ಹೋಗಿಬಿಡಬಹುದು. ಹಳ್ಳಿಯಲ್ಲಂತೂ ನೋಡಿದ್ದೀಯಲ್ಲ, ಯಾರನ್ನೂ ನಂಬುವಂತಿಲ್ಲ.''

ಕೊನೆಗೂ ಶ್ರೀಮಾತೆ ಜಯರಾಮಬಾಟಿಗೆ ಹೊರಡುವ ದಿನ ನಿಶ್ಚಯವಾಯಿತು. ಈ ಬಾರಿ ವಿಷ್ಣುಪುರ ಮೂಲಕ ಹೊಸ ಮಾರ್ಗವಾಗಿ ಹೋಗಲಿದ್ದಾರೆ. ಈ ಮಾರ್ಗವಾಗಿ ಹೋದರೆ ಜಯರಾಮಬಾಟಿಗೆ ಸಮೀಪದ ಆಮೋದರ ನದಿ ಬಿಟ್ಟರೆ ಬೇರೆ ಯಾವ ನದಿಯನ್ನೂ ದಾಟಬೇಕಿಲ್ಲ. ಒಂದು ಸಲ ಮಾತ್ರ ಪುರಿಯಿಂದ ಅಜ್ಜಿ ಮೊದಲಾದವರನ್ನು ಮರಳಿ ಕರೆತರುವಾಗ ಈ ಮಾರ್ಗವಾಗಿ ಹೋಗಿದ್ದೆ. ಆದರೆ ಆಗ ನಾನೊಬ್ಬನೇ ಹೋಗಿದ್ದೆ; ಬೇರೆಲ್ಲೂ ತಂಗದೆ ವಿಷ್ಣುಪುರ ಮೂಲಕವಾಗಿ ಕೊತುಲ್‌ಪುರದವರೆಗೆ ಹೋಗಿದ್ದೆ. ಆದರೆ ಈಗ ಶ್ರೀಮಾತೆಯವರನ್ನು ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಹೋಟೆಲಲ್ಲಿ ಆಹಾರ, ಎತ್ತಿನ ಗಾಡಿ ಮೊದಲಾದವುಗಳ ವ್ಯವಸ್ಥೆಯನ್ನು ಮೊದಲೇ ಮಾಡಬೇಕಿತ್ತು. ಈ ಕಾರಣದಿಂದ ಅವರು ಪ್ರಯಾಣ ಮಾಡುವ ಹಿಂದಿನ ದಿನ ನಾನೊಬ್ಬನೇ ರಾತ್ರಿಯ ಗಾಡಿಯಲ್ಲಿ ಅಲ್ಲಿಗೆ ಹೊರಟೆ. ಹೊರಡುವ ಮುನ್ನ ಯೋಗಿನ್‌ಮಾ ಸಂಬಂಧಿಯಾಗಿದ್ದ ಡಿಟೆಕ್ಟಿವ್ ಇನ್‌ಸ್ಪೆಕ್ಟರ್ ಶಶಿಭೂಷಣ ಡೇ ಅವರ ಎರಡು ಪತ್ರಗಳನ್ನು ಒಯ್ದಿದ್ದೆ— ಒಂದು, ವಿಷ್ಣುಪುರ ಪೋಲಿಸ್ ಠಾಣೆಗೆ, ಇನ್ನೊಂದು ಕೊತುಲ್‌ಪುರ ಠಾಣೆಗೆ.

ಮರುದಿನ ವಿಷ್ಣುಪುರ ತಲುಪಿ, ಇನ್‌ಸ್ಪೆಕ್ಟರರ ಸಹಾಯದಿಂದ ಹೋಟೆಲು, ಅಡಿಗೆಯವನು ಹಾಗೂ ಎತ್ತಿನಗಾಡಿ ಇವುಗಳ ವ್ಯವಸ್ಥೆಯನ್ನು ಮಾಡಿದೆ. ಹೋಟೆಲನ್ನು ಸ್ವಚ್ಛಗೊಳಿಸಿ, ಶ್ರೀಮಾತೆಯವರು ಠಾಕೂರರ ಪೂಜೆ ಮಾಡುವ ಸಲುವಾಗಿ ಸಿದ್ಧಗೊಳಿಸಲಾಯಿತು. ಅವರ ಸ್ನಾನಕ್ಕೆ ನೀರು, ಆಹಾರ ಇತ್ಯಾದಿಗಳಿಗೆ ವ್ಯವಸ್ಥೆ ಮಾಡಿದ್ದಾಯಿತು. ಹನ್ನೆರಡು ಗಂಟೆಯ ಹೊತ್ತಿಗೆ ಗಾಡಿಗಳೊಂದಿಗೆ ರೈಲ್ವೆ ಸ್ಟೇಷನ್ನಿಗೆ ಬಂದೆ.

ಮೊದಲೇ ವ್ಯವಸ್ಥೆ ಮಾಡಿದ್ದಂತೆ ಕೃಷ್ಣಲಾಲ್ ಹಾಗೂ ಗಣೇಂದ್ರನಾಥ ಶ್ರೀಮಾತೆಯವರನ್ನು ಕರೆದುಕೊಂಡು ಬೆಳಗಿನ ರೈಲುಗಾಡಿಯಲ್ಲಿ ಹೊರಟು ಬಂದಿದ್ದರು. ಒಂದೂವರೆ ಗಂಟೆಯ ಹೊತ್ತಿಗೆ ಅಲ್ಲಿಗೆ ತಲುಪಿದ್ದರು. *(ಮುಂದುವರಿಯುವುದು)*



``ಬೇರೆ ಕಡೆ ನೀನು ಸಾಧಿಸಬೇಕಾದ ಕೆಲಸ ಬಹಳ ಇದೆ''

ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ರಾಜ್‌ಕೋಟ್ ಆಶ್ರಮದ ಅಧ್ಯಕ್ಷರಾಗಿದ್ದಾಗ ಒಬ್ಬ ಯುವಕ ಸಂನ್ಯಾಸಿಯಾಗಲು ಆಶ್ರಮಕ್ಕೆ ಬಂದು ಸೇರಿಕೊಂಡ. ಅವನಲ್ಲಿ ಜೀವನದ ಬಗ್ಗೆ ಅನೇಕ ಪ್ರಶ್ನೆಗಳಿದ್ದವು. ಆದರೆ ಸ್ವಾಮೀಜಿ ಅವನನ್ನು ಕರೆದು, ``ಈ ಜೀವನದಲ್ಲಿ ನೀನು ಬೇರೆ ಕಡೆ ಸಾಧಿಸಬೇಕಾದ ಕೆಲಸ ಬಹಳ ಇದೆ'' ಎಂದು ಹೇಳಿ ಹಿಂದಕ್ಕೆ ಕಳುಹಿಸಿದರು. ಅದಾಗಿ ಅನೇಕ ದಶಕಗಳೇ ಕಳೆದವು. ಸ್ವಾಮೀಜಿ ನುಡಿದ ಮಾತುಗಳು ಸುಳ್ಳಾಗಲಿಲ್ಲ. ಆ ಯುವಕನ ಮಾರ್ಗ ಬದಲಾಯಿತು, ಆತ ಬೇರೆ ಕಡೆ ಮಹತ್ವದ ಕಾರ್ಯ ನಿರ್ವಹಿಸತೊಡಗಿದ. ಗುಜರಾತಿನ ಸೀಮಿತ ವಲಯದಿಂದ ಆತ ಇಡೀ ದೇಶದ ಬೃಹತ್ತಾದ ಕಾರ್ಯಕ್ಷೇತ್ರಕ್ಕೆ ಬಂದ. ಆ ಯುವಕನೇ ನರೇಂದ್ರ ಮೋದಿ. ಗುಜರಾತಿನ ಮುಖ್ಯಮಂತ್ರಿಯಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ ಈಗ ಅವರು ಭಾರತದ ಪ್ರಧಾನ ಮಂತ್ರಿಯಾಗಿದ್ದಾರೆ. ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗುವ ಮುನ್ನ ಅವರು ಬೇಲೂರು ಮಠಕ್ಕೆ ಬಂದು, ಸ್ವಾಮಿ ಆತ್ಮಸ್ಥಾನಂದರನ್ನು ಭೇಟಿಯಾಗಿದ್ದರು. ಆ ಭೇಟಿ ಗುರು-ಶಿಷ್ಯರ ಆತ್ಮೀಯ ಭೇಟಿಯಂತಿತ್ತು. ಆಗ ಶ್ರೀ ನರೇಂದ್ರ ಮೋದಿ ಹೇಳಿದರು: ``ಮುಂದೆ ನಾನೇನೇ ಆಗುವುದಿದ್ದರೂ ಅದಕ್ಕೆಲ್ಲ ನೀವೇ ಕಾರಣ. ಏಕೆಂದರೆ, ಅಂದೊಮ್ಮೆ ನೀವು ನನ್ನನ್ನು ಹಿಂದಕ್ಕೆ ಕಳುಹಿಸದೆ ಇರುತ್ತಿದ್ದರೆ ನಾನು ಈ ಹಾದಿಯನ್ನು ತುಳಿಯುತ್ತಿರಲಿಲ್ಲ.''

ಸ್ವಾಮೀಜಿ ಮಹಾಸಮಾಧಿ ಹೊಂದಿದಾಗ ಶ್ರೀ ಮೋದಿಯವರು ಶ್ರದ್ಧಾಂಜಲಿ ಸೂಚಿಸುತ್ತ, ``ಅವರ ಸಮಾಧಿಯಿಂದಾಗಿ ನನಗೆ ವೈಯಕ್ತಿಕ ನಷ್ಟವುಂಟಾಗಿದೆ'' ಎಂದರು. *(ಸಂಗ್ರಹ: 'ಸ್ವಾಮಿ ಆತ್ಮಸ್ಥಾನಂದ' ಸಂಕ್ಷಿಪ್ತ ಜೀವನ ಚರಿತ್ರೆ)*

ಸ್ವಾಮಿ ವಿವೇಕಾನಂದರು ಮತ್ತು ಶ್ರೀಮಾತೆಯವರ ದಿವ್ಯ ಸಂಬಂಧ





ಸ್ವಾಮಿ ರಾಘವೇಶಾನಂದ

ಶ್ರೀಮಾತೆ ಹಾಗೂ ಸ್ವಾಮೀಜಿ — ಇಬ್ಬರೂ ಅವತಾರವರಿಷ್ಠರಾದ ಶ್ರೀರಾಮಕೃಷ್ಣರ ಲೀಲಾಸಹಾಯಕರಾಗಿ ಧರೆಗೆ ಅವತರಿಸಿ ಬಂದ ಮಹಿಮಾನ್ವಿತರು. ಶ್ರೀಮಾತೆ ಜೀವಕೋಟಿಗಳ ಬದುಕನ್ನು ಆಂತರಿಕವಾಗಿ ಬೆಳಗಿದ ದಿವ್ಯ ಶಕ್ತಿಯಾಗಿದ್ದರೆ, ಸ್ವಾಮೀಜಿ ಜಗದ್ವ್ಯಾಪಕವಾಗಿ ಶ್ರೀರಾಮಕೃಷ್ಣರ ಸಂದೇಶವನ್ನು ಸಕಲ ಮಾನವರ ಬಳಿಗೊಯ್ದ ಮಹಾತ್ಮರು. ಇಬ್ಬರೂ ಒಂದೇ ಗುರುಗಳ ಗರಡಿಯಲ್ಲಿ ಪಳಗಿದವರು; ಆದರೂ ಸ್ವಾಮೀಜಿ ಶ್ರೀಮಾತೆಯವರನ್ನು ಜಗನ್ಮಾತೆಯೆಂದೇ ಆರಾಧಿಸಿದರು. ಈ ದಿವ್ಯ ಸಂಬಂಧವನ್ನು ಕುರಿತು ಇಲ್ಲಿ ಬರೆದಿರುವ ಲೇಖಕರು ಉದಕಮಂಡಲ ರಾಮಕೃಷ್ಣ ಮಠದ ಅಧ್ಯಕ್ಷರು. ಪೂಜ್ಯರು ಉತ್ತಮ ವಾಗ್ಮಿಗಳೂ, ಲೇಖಕರೂ ಆಗಿದ್ದಾರೆ.

ಶ್ರೀಮಾತೆ ಜಗತ್ತಿಗೇ ತಾಯಿ. ಸ್ವಾಮಿ ವಿವೇಕಾನಂದರ ಹಾಗೂ ಶ್ರೀಮಾತೆಯವರ ಸಂಬಂಧ ತಾಯಿ ಮಗುವಿನ ರೀತಿಯ ದಾದರೂ, ಸ್ವಾಮೀಜಿಗೆ ಶ್ರೀಮಾತೆಯ ಮೇಲಿನ ಪ್ರೀತಿ ಎಲ್ಲಾ ಬಾಂಧವ್ಯವನ್ನೂ ದಾಟಿ ದೈವಿಕವಾಗಿತ್ತು. ಅವರಿಬ್ಬರ ವ್ಯಕ್ತಿತ್ವ , ಜೀವನಶೈಲಿ, ನಡತೆ, ಅತ್ಯಂತ ಭಿನ್ನವಾಗಿದ್ದರೂ ಹಲವಾರು ವಿಷಯಗಳಲ್ಲಿ ಸಾಮ್ಯತೆ ಇತ್ತು. ಮೊದಲನೆಯದಾಗಿ, ಅವರಿಬ್ಬರ ಜೀವನದ ಉದ್ದೇಶ ಶ್ರೀರಾಮಕೃಷ್ಣರ ಆದರ್ಶಗಳನ್ನು, ಕಾರ್ಯ ಗಳನ್ನು ಅವರೇ ರೂಪಿಸಿದ ರೀತಿಯಲ್ಲಿ ಮುಂದುವರೆಸಿ ಜಗತ್ತಿಗೆ ಪೂರ್ಣ ಶ್ರೇಯಸ್ಸನ್ನು ತರುವಂಥದಾಗಿತ್ತು. ಎರಡನೆಯದಾಗಿ ಇಬ್ಬರೂ ಆಧ್ಯಾತ್ಮಿಕ ಸಾಧನೆಯ ತುತ್ತತುದಿಯನ್ನು ಮುಟ್ಟಿ ಬ್ರಹ್ಮ ಜ್ಞಾನಿಗಳಾಗಿದ್ದರು. ಮೂರನೆಯದಾಗಿ, ಶ್ರೀರಾಮಕೃಷ್ಣ ಮಹಾ ಸಂಘದ ಸ್ಥಾಪನೆಯಲ್ಲಿ ಹಾಗೂ ಅದರ ಬೆಳವಣಿಗೆಯಲ್ಲಿ ಅವರಿ ಬ್ಬರ ಮುಂದಾಳತ್ವದಲ್ಲಿ ಸಮಾನತೆ ಇತ್ತು. ಇದನ್ನೆಲ್ಲಾ ಸರಿಯಾಗಿ ಅರ್ಥಮಾಡಿಕೊಳ್ಳುವುದು ಕಷ್ಟವಾದರೂ, ಭೌತಿಕ ನೆಲೆಯಲ್ಲಿ ಸ್ಥೂಲವಾಗಿ ನಮ್ಮ ಕಣ್ಣಿಗೆ ಎಟಕುವ ರೀತಿಯಲ್ಲಿ ಅವರ ಬಾಂಧವ್ಯ ವನ್ನು ಗುರುತಿಸಲು ಯತ್ನಿಸೋಣ.

ದಕ್ಷಿಣೇಶ್ವರದಲ್ಲಿ ಇವರಿಬ್ಬರ ಮುಖಾಮುಖಿ ಭೇಟಿ ಯಾವಾಗ ಲಾದರೂ ಆಗಿತ್ತೇ, ಇವರಿಬ್ಬರ ನಡುವೆ ಏನಾದರೂ ಮಾತುಕತೆ ಆಗಿತ್ತೇ ಎನ್ನುವುದರ ಉಲ್ಲೇಖ ಇವರಿಬ್ಬರ ಜೀವನ ಚರಿತ್ರೆಯ ಗ್ರಂಥದಲ್ಲಿ ಎಲ್ಲೂ ಕಂಡುಬರುವುದಿಲ್ಲ.

ಮುಂದೆ ಶ್ರೀಮಾತೆಯವರ ಸಂಭಾಷಣೆಯಲ್ಲಿ ನರೇಂದ್ರನ ಬಗ್ಗೆ ಮಾತುಕತೆ ಬಂದಾಗ ಅವರು, ''ನರೇಂದ್ರ ತುಂಬಾ ಸೊಗಸಾಗಿ ಹಾಡುತ್ತಿದ್ದ. ಅವನು ಶ್ರೀರಾಮಕೃಷ್ಣರ ಕೊಠಡಿಯಲ್ಲಿ ಕುಳಿತು ಹಾಡುತ್ತಿದ್ದಾಗ ನಾನು ನಹಬತ್‌ನಿಂದ ಅನೇಕ ಬಾರಿ ಕೇಳಿದ್ದೇನೆ'' ಎಂದು ನೆನಪಿಸಿಕೊಳ್ಳುತ್ತಿದ್ದರು. ಒಂದು ದಿನ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರನ್ನು ನೋಡಲು ನರೇಂದ್ರ ಬಂದಿದ್ದಾಗ, ಶ್ರೀಮಾತೆ ನರೇಂದ್ರನಿಗಾಗಿ ಒಳ್ಳೆಯ ಚಪಾತಿ ಹಾಗೂ ಹೆಸರುಬೇಳೆಯ ತೊವ್ವೆ ಮಾಡಿದ್ದರು. ಶ್ರೀರಾಮಕೃಷ್ಣರು ನರೇಂದ್ರನನ್ನು, ''ಅಡಿಗೆ ಹೇಗಿತ್ತು?'' ಎಂದು ಕೇಳಿದರು. ಅದಕ್ಕೆ ನರೇಂದ್ರ ಹೇಳಿದ, ''ಅಡಿಗೆಯೇನೋ ಚೆನ್ನಾಗಿತ್ತು. ಆದರೆ ಒಬ್ಬ ರೋಗಿಗೆ ಕೊಡುವ ಪಥ್ಯದಂತಿತ್ತು'' ಎಂದನು. ಅದಕ್ಕೆ ತಕ್ಷಣ ಶ್ರೀರಾಮಕೃಷ್ಣರು ನಹಬತ್ತಿನಲ್ಲಿದ್ದ ಶ್ರೀಮಾತೆಗೆ ಕೇಳುವಂತೆ, ''ನರೇಂದ್ರನಿಗೆ ಇನ್ನು ಮೇಲೆ ದಪ್ಪನೆಯ ಚಪಾತಿ ಹಾಗೂ ಗಟ್ಟಿಯಾದ ಕಡಲೆ ಬೇಳೆಯ ಪಲ್ಯವನ್ನು ಮಾಡು'' ಎಂದರು. ಮುಂದಿನ ಬಾರಿ ಹಾಗೆ ಮಾಡಿದಾಗ ನರೇಂದ್ರ ಬಹಳ ಮೆಚ್ಚಿ ಚೆನ್ನಾಗಿ ಊಟ ಮಾಡಿದ. ಶ್ರೀರಾಮಕೃಷ್ಣರ ನಂತರ ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಔನ್ನತ್ಯವನ್ನು ಗುರುತಿಸಿದವರು ಶ್ರೀಮಾತೆಯವರು.

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆ ಯವರು ಕಾಮಾರಪುಕುರದ ತಮ್ಮ ಪತಿಯ ಮನೆಯಲ್ಲಿ

ಏಕಾಂಗಿಯಾಗಿ ವಾಸಿಸುತ್ತಿದ್ದರು. ಆಗ ಅಲ್ಲಿ ಅವರಿಗೆ ಒಂದು ದಿನ ಒಂದು ದಿವ್ಯದರ್ಶನವಾಯಿತು. ಇದರಿಂದ ಸ್ವಾಮೀಜಿ ಮುಂದೆ ಮಾಡಬೇಕಾಗಿದ್ದ ಕಾರ್ಯದ ಅರಿವಾಯಿತು. ಆ ದರ್ಶನದಲ್ಲಿ ಅವರು ಶ್ರೀರಾಮಕೃಷ್ಣರು ಅವರ ಮನೆಯ ಕಡೆಗೆ ನಡೆದುಕೊಂಡು ಬರುತ್ತಿದ್ದುದನ್ನು ಕಂಡರು. ಅವರ ಹಿಂದೆಯೇ ನರೇಂದ್ರ, ರಾಖಾಲ, ಬಾಬುರಾಮ ಹಾಗೂ ಇನ್ನೂ ಅನೇಕ ಭಕ್ತರು ಕೂಡ ಬರುತ್ತಿದ್ದರು. ಹಾಗೆ ಬರುತ್ತಿದ್ದಂತೆಯೇ ಶ್ರೀರಾಮ ಕೃಷ್ಣರ ಪಾವನ ಪಾದಗಳಿಂದ ಗಂಗೆ ಹರಿದು ಬರುತ್ತಿತ್ತು. ಇದನ್ನು ಶ್ರೀಮಾತೆಯವರು ತಮ್ಮ ತೆರೆದ ಕಣ್ಣುಗಳಿಂದ ವೀಕ್ಷಿಸುತ್ತಿದ್ದರು. ಕೊನೆಗೆ ಶ್ರೀರಾಮಕೃಷ್ಣರು ನರೇಂದ್ರನ ದೇಹದಲ್ಲಿ ಲೀನರಾದರು. ಅಂದರೆ ಶ್ರೀರಾಮಕೃಷ್ಣರ ಮುಂದಿನ ಲೀಲಾಕಾರ್ಯ ನರೇಂದ್ರನ ಮೂಲಕ ನಡೆಯುತ್ತದೆ ಎಂಬುದರ ಸೂಚನೆಯೇ!

೧೮೯೩ನೆ ಇಸವಿಯಲ್ಲಿ ಒಮ್ಮೆ ಶ್ರೀಮಾತೆ ಬೇಲೂರಿನಲ್ಲಿರುವ ನೀಲಾಂಬರ ಮುಖರ್ಜಿಯ ಮನೆಯಲ್ಲಿ ವಾಸವಾಗಿದ್ದರು. ಅದೊಂದು ಹುಣ್ಣಿಮೆಯ ರಾತ್ರಿ ಎಲ್ಲೆಲ್ಲೂ ಹಾಲು ಬೆಳದಿಂಗಳು ಹರಡಿದೆ. ಶ್ರೀಮಾತೆಯವರು ಗಂಗೆಯ ಘಟ್ಟದ ಮೊದಲ ಮೆಟ್ಟಿಲ ಮೇಲೆ ಕುಳಿತು ಅದನ್ನು ಆಸ್ವಾದಿಸುತ್ತಿದ್ದರು. ಆಗ ಅವರಿಗೆ ಮತ್ತೊಂದು ಅನುಭವವಾಯಿತು. ಇದ್ದಕ್ಕಿದ್ದಂತೆ ಶ್ರೀರಾಮ ಕೃಷ್ಣರು ಪ್ರತ್ಯಕ್ಷರಾಗಿ ತಮ್ಮ ಹಿಂದಿನಿಂದ ಬಂದು ಮುನ್ನುಗ್ಗಿ ನದಿಯೊಳಗೆ ಇಳಿದರು. ಇಳಿದಿದ್ದೇ ತಡ, ಶ್ರೀರಾಮಕೃಷ್ಣರ ಜ್ಯೋತಿರ್ಮಯ ಶರೀರ ಆ ಪವಿತ್ರ ಗಂಗಾಜಲದಲ್ಲಿ ಕರಗಿ ಒಂದಾಯಿತು. ಆ ದೃಶ್ಯವನ್ನು ಕಂಡು ಶ್ರೀಮಾತೆ ರೋಮಾಂಚನ ಗೊಂಡರು. ಆಶ್ಚರ್ಯದಿಂದ ಅವಾಕ್ಕಾಗಿ ಆ ಗಂಗಾಜಲವನ್ನೇ ಕಣ್ಣು ಬಾಯಿ ತೆರೆದುಕೊಂಡು ನೋಡುತ್ತಾ ನಿಂತುಬಿಟ್ಟರು. ಆಗ ಮತ್ತೊಂದು ವಿಚಿತ್ರ ಸಂಭವಿಸಿತು, ಇದ್ದಕ್ಕಿದ್ದಂತೆ ಸ್ವಾಮಿ ವಿವೇಕಾನಂದರು ಎಲ್ಲಿಂದಲೋ ಬಂದು ಆವೇಶಭರಿತರಾಗಿ, 'ಜೈ ರಾಮಕೃಷ್ಣ! ಜೈ ರಾಮಕೃಷ್ಣ! ' ಎಂದು ಗಟ್ಟಿಯಾಗಿ ಉದ್ಘೋಷಿಸುತ್ತಾ ಸುತ್ತ ನೆರೆದಿದ್ದ ಸಹಸ್ರಾರು ಜನರ ಮೇಲೆ ಆ ಪವಿತ್ರ ಜಲವನ್ನು ಬೊಗಸೆ ಬೊಗಸೆಯಾಗಿ ಸಿಂಪಡಿಸಿದರು. ಆ ಪವಿತ್ರ ಜಲದ ಸಂಸ್ಪರ್ಶಕ್ಕೊಳಗಾದ ಜನರೆಲ್ಲಾ ಈ ಜಗತ್ತಿನಿಂದ ಮುಕ್ತರಾಗಿ ಹೋದರು. ಈ ಘಟನೆಯಿಂದ ಶ್ರೀಮಾತೆಗೆ ಸ್ಪಷ್ಟವಾದದ್ದೆಂದರೆ, ಶ್ರೀರಾಮಕೃಷ್ಣರು ತಮ್ಮ ಸ್ಥೂಲದೇಹ ತ್ಯಾಗ ಮಾಡಿದ್ದರೂ ಅವರು ತಮ್ಮ ಸೂಕ್ಷ್ಮದೇಹದಲ್ಲಿ ಜೀವಂತವಾಗಿದ್ದಾರೆ ಮತ್ತು ನರೇಂದ್ರನ ದೇಹದ ಮೂಲಕ ತಮ್ಮ ಕಾರ್ಯ ಮುಂದುವರಿಸುತ್ತಿದ್ದಾರೆ ಎಂದು.

ಶ್ರೀರಾಮಕೃಷ್ಣರ ಸಂದೇಶಗಳನ್ನು ಪ್ರಚಾರ ಮಾಡುವ ಜವಾಬ್ದಾರಿಯುತ ಕಾರ್ಯ ಈ ಇಬ್ಬರು ಪ್ರಮುಖ ವ್ಯಕ್ತಿಗಳ ಮೇಲೆ ಹೊರಿಸಲ್ಪಟ್ಟಿತು. ಶ್ರೀರಾಮಕೃಷ್ಣರ ಜೀವನ ಹಾಗೂ ಅವರ ಸಂದೇಶಗಳನ್ನು ತಮ್ಮ ಆಚರಣೆಯಲ್ಲಿ ತೋರಿಸುತ್ತಿದ್ದ ಶ್ರೀಮಾತೆ, ಹಾಗೂ ಅವರ ಸಂದೇಶಗಳನ್ನು ಶಕ್ತಿಯುತವಾಗಿ ಪ್ರಚಾರ ಮಾಡಬಲ್ಲ ಸ್ವಾಮಿ ವಿವೇಕಾನಂದರು — ಇವರೇ ಆ ಇಬ್ಬರು. ಅವರಿಬ್ಬರ ಪಥ ಬೇರೆ ಬೇರೆಯದಾಗಿದ್ದರೂ ಒಬ್ಬರ ಪಥಕ್ಕಿಂತ ಮತ್ತೊಬ್ಬರದು ಪೂರ್ಣ ಭಿನ್ನವಾಗಿರಲಿಲ್ಲ.

೧೮೯೦ರಲ್ಲಿ ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಹಿಮಾಲಯಕ್ಕೆ ಹೋಗಿ ಘೋರ ತಪಸ್ಸನ್ನು ಮಾಡಲು ತೀರ್ಮಾನಿಸಿದರು. ಆಗ ಅವರು ಬಾರಾನಗರ ಮಠದಲ್ಲಿದ್ದರು. ಅವರು ಅಲ್ಲಿದ್ದ ತಮ್ಮ ಸೋದರ ಶಿಷ್ಯರಿಗೆ, ಅವರಾರೂ ತಮ್ಮನ್ನು ಹಿಂಬಾಲಿಸಬಾರದೆಂದು ಕಠೋರ ಆಜ್ಞೆಯನ್ನಿತ್ತರು. ಹೋಗುವ ಮುನ್ನ ಒಮ್ಮೆ ಶ್ರೀಮಾತೆಯವರನ್ನು ಭೇಟಿಮಾಡಿ ಅವರ ಆಶೀರ್ವಾದವನ್ನು ಪಡೆಯಬೇಕೆಂದು ಅವರಿಗೆ ಬಯಕೆಯುಂಟಾಯಿತು. ಆದರೆ ಅವರ ಬಳಿಗೆ ಒಬ್ಬರೇ ಹೋಗಲು ಧೈರ್ಯವುಂಟಾಗಲಿಲ್ಲ. ಸ್ವಾಮಿ ಅಖಂಡಾನಂದರನ್ನೂ ಬರಲು ಹೇಳಿದರು. ಆದರೆ ಅಖಂಡಾನಂದರು ಒಂದು ನಿಬಂಧನೆ ಹಾಕಿದರು. ಅದೆಂದರೆ ಹಿಮಾಲಯಕ್ಕೆ ಅವರನ್ನೂ ಜೊತೆಗೆ ಕರೆದುಕೊಂಡು ಹೋಗಬೇಕು. ಕೊನೆಗೆ ವಿಧಿಯಿಲ್ಲದೆ ಆ ಶರತ್ತಿಗೆ ಒಪ್ಪಿಕೊಳ್ಳಬೇಕಾಯಿತು. ಆಗ ಶ್ರೀಮಾತೆಯವರು ಗಂಗೆಯ ಮತ್ತೊಂದು ತೀರದಲ್ಲಿದ್ದ ಘೂಸುರಿ ಎಂಬ ಹಳ್ಳಿಯಲ್ಲಿ, ಒಂದು ಸ್ಮಶಾನದ ಪಕ್ಕದಲ್ಲಿದ್ದ ಒಂದು ಮನೆಯಲ್ಲಿ ವಾಸಿಸುತ್ತಿದ್ದರು.

ಬಹುಶಃ ಸ್ವಾಮೀಜಿ ಹಾಗೂ ಶ್ರೀಮಾತೆಯವರ ಮುಖಾಮುಖಿ ಪ್ರಥಮ ಭೇಟಿ ಇದು. ಸ್ವಾಮೀಜಿ ಹಾಗೂ ಅಖಂಡಾನಂದರು ಅಲ್ಲಿಗೆ ಹೋದಾಗ ಶ್ರೀಮಾತೆಯವರು ತಮ್ಮ ಪದ್ಧತಿಯಂತೆ ತಲೆಯಿಂದ ಕಾಲಿನವರೆಗೆ ಬಿಳಿಯ ಬಟ್ಟೆಯಿಂದ ಮುಚ್ಚಿಕೊಂಡಿದ್ದರು. ಇಬ್ಬರೂ ಶ್ರೀಮಾತೆಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಶ್ರೀಮಾತೆಯವರ ಇಚ್ಛೆಯ ಮೇರೆಗೆ ಸ್ವಾಮೀಜಿ ಕೆಲವು ಹಾಡುಗಳನ್ನು ಹಾಡಿದರು. ಕುಶಲ ಸಮಾಚಾರವಾದ ನಂತರ ಸ್ವಾಮೀಜಿ ಮತ್ತೆ ನಮಸ್ಕಾರ ಮಾಡಿ ಹೇಳಿದರು, ''ಅಮ್ಮಾ, ನಾನು ಹಿಮಾಲಯಕ್ಕೆ ತೆರಳುತ್ತಿದ್ದೇನೆ. ನಾನು ನಿಜವಾದ ಅರ್ಥದಲ್ಲಿ ಮನುಷ್ಯನಾಗುವವರೆಗೆ (ಅಂದರೆ ಬ್ರಹ್ಮ ಜ್ಞಾನ ಪಡೆಯುವವರೆಗೆ) ಹಿಂದಿರುಗುವುದಿಲ್ಲ.'' ಅದನ್ನು ಕೇಳಿ ಬೆಚ್ಚಿದ ಶ್ರೀಮಾತೆ ತಮ್ಮ ಮುಸುಕು ತೆಗೆದು ನೇರವಾಗಿ ನೋಡುತ್ತಾ, ''ಏನು ಹೇಳುತ್ತಿದ್ದೀ ನರೇನ್?'' ಎಂದರು. ಆಗ ತಕ್ಷಣ ಸ್ವಾಮೀಜಿ, ''ಇಲ್ಲ ಅಮ್ಮ, ಬೇಗ ಹಿಂದಿರುಗುತ್ತೇನೆ'' ಎಂದರು. ಶ್ರೀಮಾತೆ ಸ್ವಾಮೀಜಿಯವರನ್ನು ಹೃತ್ಪೂರ್ವಕವಾಗಿ ಆಶೀರ್ವದಿಸಿ ಹೇಳಿದರು, ''ನರೇನ್, ಹೋಗುವ ಮುನ್ನ ನಿನ್ನ ಮನೆಗೆ ಹೋಗಿ ನಿನ್ನ ತಾಯಿಯ ಆಶೀರ್ವಾದವನ್ನು ಪಡೆದು ಹೋಗು.'' ಅದಕ್ಕೆ ಸ್ವಾಮೀಜಿ, ''ಜಗತ್ತಿನಲ್ಲಿ ನೀವೊಬ್ಬರೇ ತಾಯಿ'' ಎಂದರು. ಶ್ರೀಮಾತೆಯವರು ಮನಃಪೂರ್ವಕವಾಗಿ ಇಬ್ಬರನ್ನೂ ಹರಸಿದರು. ಇಬ್ಬರೂ ಶ್ರೀಮಾತೆಯಿಂದ ಬೀಳ್ಕೊಂಡು ಕೆಲವು ಹೆಜ್ಜೆ ಹೋದ ಮೇಲೆ ಶ್ರೀಮಾತೆ ಅಖಂಡಾನಂದರನ್ನು ಹಿಂದಕ್ಕೆ ಕರೆದು, ''ನೋಡು, ನನ್ನ ಸರ್ವಸ್ವವನ್ನೂ ನಿನಗೆ ಒಪ್ಪಿಸು

ತ್ತಿದ್ದೇನೆ. ಅವನನ್ನು ನೆರಳಿನಂತೆ ಅನುಸರಿಸು. ನಿನಗೆ ಹಿಮಾಲಯದ ಪರಿಸ್ಥಿತಿಯೆಲ್ಲಾ ಗೊತ್ತು. ನರೇಂದ್ರ ಆಹಾರಕ್ಕಾಗಿ ಅಲೆದಾಡಿ ಕಷ್ಟ ಪಡದಂತೆ ನೋಡಿಕೋ'' ಎಂದರು.

ಇಲ್ಲಿ ಗಮನಿಸಬೇಕಾದದ್ದು ಅವರಿಬ್ಬರ ದಿವ್ಯಬಾಂಧವ್ಯ. ನರೇಂದ್ರನಿಗೆ ಶ್ರೀಮಾತೆಯೊಬ್ಬರೇ ನಿಜವಾದ ತಾಯಿಯಾಗಿದ್ದರೆ, ಶ್ರೀಮಾತೆಗೆ ನರೇಂದ್ರ ಅವರ ಸರ್ವಸ್ವವಾಗಿದ್ದ.

ಹಿಂದೊಮ್ಮೆ ೧೮೯೦ರ ಏಪ್ರಿಲ್ ೨೫ರಂದು ಬಲರಾಮ ಬೋಸ್ ಎನ್ನುವ ಗೃಹೀಭಕ್ತನ ಮನೆಯಲ್ಲಿ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರೆಲ್ಲ ಸೇರಿ ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದರು. ಮಾತಿನ ಮಧ್ಯೆ ಸ್ವಾಮೀಜಿ ಹೇಳಿದರು, ''ಗುರುದೇವರು ನನಗೆ ಹಲವಾರು ವಿಷಯಗಳನ್ನು ತಿಳಿಸಿದರು. ಆದರೆ ಶ್ರೀಮಾತೆಯವರ ಬಗ್ಗೆ ಏನೂ ಹೇಳಲಿಲ್ಲ.'' ತಕ್ಷಣವೇ ಅಲ್ಲಿದ್ದ ಸ್ವಾಮಿ ಯೋಗಾನಂದರು ಹೇಳಿದರು, ''ಹೇಳುವುದಕ್ಕೇನಿದೆ? ಶ್ರೀರಾಮಕೃಷ್ಣರು ಈಶ್ವರನಾದರೆ ಶ್ರೀಮಾತೆ ಸಾಕ್ಷಾತ್ ಈಶ್ವರಿ.'' ಈ ಉತ್ತರ ಕೇಳಿ ಸ್ವಾಮೀಜಿ ಸಮಾಧಾನದ ನಿಟ್ಟುಸಿರು ಬಿಟ್ಟರು. ತನ್ನ ಸೋದರ ಶಿಷ್ಯ ಮಹಾಮಾತೆಯ ಬಗ್ಗೆ ಯಾವ ಭಾವನೆ ತಾಳಿರಬಹುದು ಎಂಬ ಸಂಶಯ ಅವರ ಮನಸ್ಸಿನಿಂದ ನಿವಾರಣೆಯಾಯಿತು. ಶ್ರೀರಾಮಕೃಷ್ಣರೇ ಹೇಳುವಂತೆ ಒಬ್ಬ ರತ್ನದ ವ್ಯಾಪಾರಿಗಷ್ಟೇ ರತ್ನದ ನಿಜವಾದ ಬೆಲೆ ಅರ್ಥವಾಗುವುದು. ಅಷ್ಟು ಮಾತ್ರವಲ್ಲ, ಇದು ಇನ್ನೂ ಒಂದು ಅಂಶವನ್ನು ಸ್ಪಷ್ಟಪಡಿಸುತ್ತದೆ. ಶ್ರೀರಾಮಕೃಷ್ಣರು ಯಾರ ಮೇಲೂ ಶ್ರೀಮಾತೆಯ ದೈವತ್ವವನ್ನು ಹೇರಿರಲಿಲ್ಲ. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯಂದಿರು 'ಗುರುಪತ್ನಿಯನ್ನು ಗುರುವಂತೆ ಪೂಜಿಸಬೇಕು' ಎಂಬ ಭಾವನೆಯಿಂದ ಮಾತ್ರ ಶ್ರೀಮಾತೆಯವರಿಗೆ ಗೌರವ ಸಲ್ಲಿಸುತ್ತಿರಲಿಲ್ಲ; ಅವರ ದೈವತ್ವವನ್ನು ಅವರೆಲ್ಲರೂ ತಮ್ಮ ಸಾಧನೆಯಿಂದ ಸಾಕ್ಷಾತ್ಕರಿಸಿಕೊಂಡಿದ್ದರು.

ತಮ್ಮ ಕೊನೆಯ ದಿನಗಳಲ್ಲಿ ಒಂದು ದಿನ ಶ್ರೀರಾಮಕೃಷ್ಣರು ಶ್ರೀಮಾತೆಗೆ, ತಾವು ದೇಹತ್ಯಾಗ ಮಾಡಿದ ಮೇಲೆ ಹೇಗೆ ಬಾಳಬೇಕು ಎನ್ನುವುದರ ಬಗ್ಗೆ ಹೇಳಿದರು, ''ನೋಡು, ನಾನು ಹೋದ ಮೇಲೆ ನೀನು ಯಾವುದಕ್ಕೂ ಚಿಂತಿಸಬೇಡ. ನೀನು ಈಗ ಹೇಗೆ ಬಾಳುತ್ತಿದ್ದೀಯೋ ಹಾಗೇ ಬಾಳು. ಈ ಶಿಷ್ಯರು ನನ್ನನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೋ ಹಾಗೆಯೇ ನಿನ್ನನ್ನೂ ನೋಡಿಕೊಳ್ಳುತ್ತಾರೆ.'' ಆದರೆ ಅದಕ್ಕೆ ಶ್ರೀಮಾತೆ ಬಹಳ ದಿನ ಕಾಯಬೇಕಾಯಿತು. ಶ್ರೀರಾಮಕೃಷ್ಣರ ದೇಹತ್ಯಾಗದ ನಂತರ ದಕ್ಷಿಣೇಶ್ವರದ ಕಾಳೀದೇವಾಲಯದ ಅಧಿಕಾರಿಗಳು ಶ್ರೀರಾಮಕೃಷ್ಣರಿಗೆ ಕೊಡುತ್ತಿದ್ದ ಏಳು ರೂಪಾಯಿಗಳನ್ನು ಶ್ರೀಮಾತೆಗೆ ತಿಂಗಳ ನಂತರ ನಿಲ್ಲಿಸಿಬಿಟ್ಟರು. ಇದನ್ನು ತಿಳಿದ ಸ್ವಾಮೀಜಿ ಅಧಿಕಾರಿಗಳೊಡನೆ ಇದಕ್ಕಾಗಿ ಬಹಳ ಹೋರಾಡಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಆದರೆ ಶ್ರೀಮಾತೆಯವರ ಭದ್ರತೆಗಾಗಿ ಯಾವಾಗಲೂ ಸ್ವಾಮೀಜಿ ಬಹಳ ಚಿಂತಿತರಾಗಿದ್ದರು.

ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನಕ್ಕೆ ಹೋಗಬೇಕೋ ಬೇಡವೋ ಎಂಬ ದ್ವಂದ್ವದಲ್ಲಿ ಸಿಲುಕಿ, ನಿರ್ಧಾರ ಮಾಡಲು ಅಶಕ್ಯರಾಗಿದ್ದಾಗ ಅವರಿಗೊಂದು ಅಪೂರ್ವ ದರ್ಶನವಾಯಿತು. ಒಂದು ದಿನ ಅವರು ಒರಗಿಕೊಂಡು ಅರ್ಧ ನಿದ್ರೆಯಲ್ಲಿದ್ದಾಗ ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರ ಜ್ಯೋತಿರ್ಮಯ ರೂಪವನ್ನು ಕಂಡರು. ಅವರು ಸಮುದ್ರದ ದಡದಿಂದ ಮುನ್ನಡೆದು, ಅಲೆಗಳ ಮೇಲೆ ನಡೆದು ಹೋಗುತ್ತಾ ತಮ್ಮನ್ನು ಅನುಸರಿಸಿ ಬರುವಂತೆ ಸ್ವಾಮೀಜಿಯನ್ನು ಕೈಬೀಸಿ ಕರೆಯುತ್ತಿದ್ದರು. ಆ ದೃಶ್ಯವನ್ನು ಕಂಡ ಸ್ವಾಮೀಜಿಯ ಮೈಮನಗಳು ಅಪೂರ್ವ ಶಾಂತಿ ಆನಂದಗಳಿಂದ ತುಂಬಿಹೋದವು. ತಕ್ಷಣ ಅವರು ಎಚ್ಚೆತ್ತು ಕುಳಿತರು. ಆದೇಶ ಸ್ಪಷ್ಟವಾಗಿತ್ತು. ಇದು ದೈವೇಚ್ಛೆಯೇ ಸರಿ ಎಂದು ಅವರಿಗೆ ದೃಢವಾಯಿತು.

ಆದರೂ ಅವರು ಶ್ರೀಮಾತೆ ಒಪ್ಪಿಕೊಂಡು ಆಶೀರ್ವಾದ ಮಾಡಿದರೆ ಮಾತ್ರ ಹೋಗುವುದೆಂದು ತೀರ್ಮಾನಿಸಿದರು. ಅದಕ್ಕನುಸಾರವಾಗಿ ತಮ್ಮನ್ನು ಹರಸುವಂತೆ ಬೇಡಿಕೊಂಡು ಶ್ರೀಮಾತೆಯವರಿಗೆ ಒಂದು ಪತ್ರ ಬರೆದರು. ಈ ಪತ್ರವನ್ನು ಕಂಡು ಶ್ರೀಮಾತೆಯವರಿಗೆ ಅತೀವ ಆನಂದವಾಯಿತು. ಎಷ್ಟೋ ಕಾಲದ ಮೇಲೆ ತಮ್ಮ ಪ್ರೀತಿಯ ನರೇಂದ್ರನ ಕ್ಷೇಮ ಸಮಾಚಾರ ಮತ್ತು ಆತನು ದೂರದೇಶಗಳಿಗೆ ಧರ್ಮಪ್ರಚಾರಕ್ಕಾಗಿ ಹೊರಟಿರುವ ವಿಷಯ ತಿಳಿದು ಅವರಿಗೆ ಆನಂದವಾಯಿತು. ತಮ್ಮ ಮಗನನ್ನು ಸಮುದ್ರದಾಚೆಗಿನ, ಅಷ್ಟು ದೂರದ ನಾಡಿಗೆ ಕಳುಹಿಸಿ ಕೊಡಲು ಮೊದಮೊದಲು ಅವರ ಮಾತೃಹೃದಯ ಒಪ್ಪಲಿಲ್ಲ. ಆದರೆ ಶ್ರೀಮಾತೆಯವರಿಗೂ ಸ್ವಾಮೀಜಿಗೆ ಆದ ದರ್ಶನವೇ ಆಗಿತ್ತು. ಅನಂತರ ನಿರಾಳವಾಗಿ ಅವರಿಗೆ ಹೋಗಲು ಅಪ್ಪಣೆಯಿತ್ತು, ಆಶೀರ್ವದಿಸಿ ಪತ್ರ ಬರೆದರು. ಶ್ರೀಮಾತೆಯವರ ಪತ್ರವನ್ನು ಓದಿದ ಸ್ವಾಮೀಜಿ ಆನಂದಾತಿಶಯದಿಂದ ಕುಣಿದಾಡಿದರು. ಭಾವವುಮ್ಮಳಿಸಿ ಬಂದು ಆನಂದದಿಂದ ಅತ್ತುಬಿಟ್ಟರು. ಬಳಿಕ ತಮ್ಮ ಭಾವಾವೇಶವನ್ನು ಮುಚ್ಚಿಕೊಳ್ಳಲು ಕೋಣೆಯನ್ನು ಸೇರಿಕೊಂಡರು. ಆಗ ಅವರು ತಮ್ಮಷ್ಟಕ್ಕೇ ಹೇಳಿಕೊಂಡರು, ''ಆಹ, ಈಗ ಎಲ್ಲ ಸರಿಹೋಯಿತು. ಇದೆಲ್ಲವೂ ತಾಯಿಯ ಇಚ್ಛೆಯೇ!''

ಅಮೆರಿಕಾ ತಲುಪಿದ ಮೇಲೆ ಶ್ರೀಮಾತೆಯ ಆಶೀರ್ವಾದವನ್ನು ನೆನೆಸಿಕೊಳ್ಳುತ್ತಾ ತಮ್ಮ ಸೋದರ ಶಿಷ್ಯರಾದ ಸ್ವಾಮಿ ಶಿವಾನಂದರಿಗೆ ಒಂದು ಪತ್ರದಲ್ಲಿ ಸ್ವಾಮೀಜಿ ಬರೆಯುತ್ತಾರೆ, ''ನಾನು ಅಮೆರಿಕಾ ದೇಶಕ್ಕೆ ಬರುವ ಮುನ್ನ ನನ್ನನ್ನು ಆಶೀರ್ವದಿಸಬೇಕೆಂದು ಶ್ರೀಮಾತೆಗೆ ಒಂದು ಪತ್ರವನ್ನು ಬರೆದೆ. ಅವರೇನಾದರೂ ಆಜ್ಞೆಮಾಡಿದರೆ ಅವರ ಭೂತಗಣಗಳು ಏನನ್ನಾದರೂ ಸಾಧಿಸಿಬಿಡಬಲ್ಲವು. ಕೊನೆಗೂ ಅವರ ಆಶೀರ್ವಾದದ ಪತ್ರ ಬಂತು. ಒಂದೇ ನೆಗೆತಕ್ಕೆ ಸಮುದ್ರವನ್ನು ದಾಟಿದೆ.''

ಅಮೆರಿಕಾ ದೇಶದಲ್ಲಿ ಪ್ರಖ್ಯಾತರಾಗಿ ಜನ ಅವರನ್ನು ಸದಾ ಮುತ್ತುತ್ತಿದ್ದ ಸಮಯದಲ್ಲಿ ಸ್ವಾಮಿ ವಿವೇಕಾನಂದರು ಶ್ರೀಮಾತೆ

ಯವರನ್ನು ಮರೆಯಲಿಲ್ಲ. ಸ್ವಾಮೀಜಿಯನ್ನು ಕಾಪಾಡುತ್ತಿದ್ದ ಶ್ರೀಮಾತೆಯವರ ಅಭಯಹಸ್ತ ಸದಾ ಅವರ ಮನಸ್ಸಿನಲ್ಲಿ ತುಂಬಿತ್ತು. ೧೮೯೫ ಜುಲೈ ೧ ರಂದು ಥೌಸೆಂಡ್ ಐಲೆಂಡ್ ಪಾರ್ಕಿನಲ್ಲಿ ಕೆಲವು ಮಂದಿ ಆಧ್ಯಾತ್ಮಿಕ ಪಿಪಾಸುಗಳಿಗೆ ತರಬೇತಿ ನೀಡುತ್ತಿದ್ದ ಸಮಯದಲ್ಲಿ ಮೊದಲ ಬಾರಿಗೆ ಶ್ರೀಮಾತೆಯ ಬಗ್ಗೆ ಹೊರ ಜಗತ್ತಿಗೆ ಹೇಳಿದರು, ''ಶ್ರೀಶಾರದಾದೇವಿ ಒಬ್ಬ ದೊಡ್ಡವ್ಯಕ್ತಿ, ಶುದ್ಧ ಪವಿತ್ರ ಮೂರ್ತಿ, ಅವರು ಸದಾ ತಮ್ಮ ಪತಿಯ ಕಾರ್ಯಕ್ಕೆ ಸಹಾಯಕರಾಗಿದ್ದರೇ ಹೊರತು, ಅವರನ್ನು ಗೃಹಸ್ಥ ಜೀವನಕ್ಕೆ ಎಳೆಯಲು ಯತ್ನಿಸಲಿಲ್ಲ.'' ೨೪ನೆಯ ೧೮೯೬ರಲ್ಲಿ ನ್ಯೂಯಾರ್ಕಿನಲ್ಲಿ 'ನನ್ನ ಗುರುದೇವ' ಎಂಬ ಪ್ರವಚನದಲ್ಲೂ ಶೀಮಾತೆಯ ಬಗ್ಗೆ, ''ಅವರೊಬ್ಬರು ಅತ್ಯಂತ ಪವಿತ್ರ ವ್ಯಕ್ತಿಯಾಗಿದ್ದರು. ತಮ್ಮ ಪತಿಯ ಆಕಾಂಕ್ಷೆಗಳನ್ನು, ಧ್ಯೇಯವನ್ನು ಅರ್ಥ ಮಾಡಿಕೊಂಡು ಅವರಿಗೆ ಸಹಾಯಕರಾಗಿ ನಿಂತಿದ್ದರು'' ಎಂದರು. ಮತ್ತೊಮ್ಮೆ 'ನನ್ನ ಜೀವನ ಮತ್ತು ಧ್ಯೇಯ' ಎಂಬ ಪ್ರವಚನದಲ್ಲಿ ಹೇಳುತ್ತಾರೆ, ''ಶ್ರೀರಾಮಕೃಷ್ಣರ ದೇಹತ್ಯಾಗದ ನಂತರ ನನಗೂ ನನ್ನ ಸೋದರ ಸನ್ಯಾಸಿಗಳಿಗೂ ಕಠಿಣ ಸಮಯ ಒದಗಿ ಬಂತು... ಈ ಬಾಲಕರ ಮಾತುಗಳಿಗೆ ಅನುಕಂಪ ಸೂಚಿಸುವರು ಯಾರೂ ಇರಲಿಲ್ಲ, ಒಬ್ಬರನ್ನು ಬಿಟ್ಟು. ಆ ಒಬ್ಬರ ಅನುಕಂಪೆ ನಮಗೆ ಅನುಗ್ರಹ ಹಾಗೂ ಆಸೆಯನ್ನು ತಂದಿತು. ಅವರೊಬ್ಬರು ಸ್ತ್ರೀ... ಆದರೆ ಅವರು ಆಗ ದುರ್ಬಲರಾಗಿದ್ದರು. ಕಾರಣ ಅವರು ನಮಗಿಂತ ಬಡವರಾಗಿದ್ದರು.''

ರಾಮಕೃಷ್ಣ ಸಂಘದ ಸ್ಥಾಪನೆಯ ಮೊದಲ ದಿನದಿಂದ, 'ಶ್ರೀಮಾತೆಯವರು ಪ್ರೀತಿಯಿಂದ ಈ ಸಂಘದ ಬೆಳವಣಿಗೆಯನ್ನು ಗಮನಿಸುತ್ತಿದ್ದಾರೆ' ಎಂದು ಸ್ವಾಮಿ ವಿವೇಕಾನಂದರು ತಮ್ಮ ಹೃದಯಾಂತರಾಳದಿಂದ ತಿಳಿದಿದ್ದರು. ಸ್ವಾಮೀಜಿ ಶ್ರೀಮಾತೆಯವರನ್ನು 'ಸಂಘಜನನಿ' ಎಂದು ಭಾವಿಸಿದ್ದರು.

ಶ್ರೀಮಾತೆಯವರು ತನ್ನ ಕಂದ ವಿವೇಕಾನಂದರ ಮೇಲೆ ವಿಶೇಷ ಪ್ರೀತಿ ಇಟ್ಟಿದ್ದರು. ನರೇಂದ್ರನು ಶ್ರೀರಾಮಕೃಷ್ಣರಿಂದ ಆರಿಸಲ್ಪಟ್ಟ ವಿಶೇಷ ವ್ಯಕ್ತಿ ಎಂದು ಅವರಿಗೆ ಗೊತ್ತಿತ್ತು. ಒಂದು ದಿನ ನರೇಂದ್ರನ ಒಂದು ಪತ್ರವನ್ನು ಓದಿದಾಗ, ಅವರು ಹೇಳಿದರು, ''ನರೇಂದ್ರನು ಶ್ರೀರಾಮಕೃಷ್ಣರ ಯಂತ್ರ. ಅವರೇ ಅವನಿಂದ ಈ ಶಕ್ತಿಯುತ ಮಾತುಗಳನ್ನು ಬರೆಸುತ್ತಿರುವುದು. ಈ ಮಾತುಗಳು ಯುವಕರಿಗೆ ಶ್ರೀರಾಮಕೃಷ್ಣರ ಕೆಲಸವನ್ನು ಮಾಡುವಂತೆ ಪ್ರೋತ್ಸಾಹಿಸುತ್ತದೆ. ನರೇಂದ್ರ, ಬರೆಯುವ ಮಾತುಗಳೆಲ್ಲ ಸತ್ಯ. ಕಾಲಕ್ರಮದಲ್ಲಿ ಅವುಗಳೆಲ್ಲ ಫಲಕಾರಿಯಾಗುತ್ತವೆ.''

ಸ್ವಾಮಿ ವಿವೇಕಾನಂದರಿಗಂತೂ ಶ್ರೀಮಾತೆಯವರು ಜೀವಂತ ದುರ್ಗೆಯಾಗಿದ್ದರು. ೧೮೯೪ರಲ್ಲಿ ಸ್ವಾಮೀಜಿ ಅಮೆರಿಕಾದಿಂದ ಸ್ವಾಮಿ ಶಿವಾನಂದರಿಗೆ ಹೀಗೆ ಬರೆಯುತ್ತಾರೆ: ''ಆದ್ಯಾಶಕ್ತಿಯ ಅನುಗ್ರಹವಿಲ್ಲದೆ ಜಗತ್ತಿಗೆ ಉದ್ಧಾರವಿಲ್ಲ. ಇತರ ಎಲ್ಲಾ ರಾಷ್ಟ್ರಗಳಿಗಿಂತ ನಮ್ಮ ರಾಷ್ಟ್ರ ದುರ್ಬಲಗೊಂಡಿದೆಯಲ್ಲ, ಹಿಂದುಳಿದಿದೆಯಲ್ಲ— ಏಕೆ? ಏಕೆಂದರೆ ಇಲ್ಲಿ ಆದ್ಯಾಶಕ್ತಿಯನ್ನು ಅವಮಾನಿಸಲಾಗಿದೆ. ಈ ಅದ್ಭುತ ಶಕ್ತಿಯನ್ನು ಜಾಗೃತಗೊಳಿಸುವುದಕ್ಕಾಗಿಯೇ ಶ್ರೀಮಾತೆಯವರು ಅವತರಿಸಿ ಬಂದಿದ್ದಾರೆ. ಅವರನ್ನು ಕೇಂದ್ರವಾಗಿರಿಸಿಕೊಂಡು ಈ ಜಗತ್ತಿನಲ್ಲಿ ಇನ್ನೊಮ್ಮೆ ಗಾರ್ಗಿ, ಮೈತ್ರೇಯಿಯರು, ಉದಿಸಿ ಬರಲಿದ್ದಾರೆ. ಪ್ರಿಯ ಸೋದರ, ನಿನಗೆ ಇದೆಲ್ಲ ಈಗ ಸ್ಪಷ್ಟವಾಗಿ ಅರ್ಥವಾಗದಿರಬಹುದು. ಆದರೆ ಕಾಲಕ್ರಮದಲ್ಲಿ ಎಲ್ಲವು ಅರ್ಥವಾಗುತ್ತದೆ... ಆದ್ದರಿಂದ ನಾವು ಮೊಟ್ಟಮೊದಲು ಶ್ರೀಶಾರದಾದೇವಿಯವರ ಹೆಸರಿನಲ್ಲಿ ಒಂದು ಮಠವನ್ನು ಕಟ್ಟಬೇಕು.''

ಶ್ರೀಮಾತೆಯವರ ಅದ್ಭುತ ಜೀವನ, ಅವರ ಪವಿತ್ರತೆ, ಅವರ ನಡತೆ, ಅವರ ಆಧ್ಯಾತ್ಮಿಕ ಅನುಭವದಿಂದ ಹೊರಬಂದ ಉಪದೇಶಗಳು, ಅವರ ವಿಶ್ವವ್ಯಾಪಕ ಪ್ರೀತಿ, ಇವುಗಳು ಹೊಸದಾಗಿ ಸ್ಥಾಪಿಸಲ್ಪಡುವ ಶ್ರೀಮಾತೆಯ ಮಠದ ಸಂನ್ಯಾಸಿನಿಯರಿಗೆ ತಮ್ಮ ಜೀವನವನ್ನು ಉಜ್ವಲಗೊಳಿಸಲು ಸ್ಫೂರ್ತಿದಾಯಕವಾಗುವುದೆಂದು ಸ್ವಾಮೀಜಿ ನಂಬಿದ್ದರು. ಆದರೆ ಈ ಮಠ ಆರಂಭಗೊಳ್ಳಲು ಬಹಳ ವರ್ಷಗಳೇ ಹಿಡಿದವು. ಬಹುಶಃ ಅದಕ್ಕೆ ಕಾರಣವೆಂಬಂತೆ ಸ್ವಾಮಿ ಯೋಗಾನಂದರು ಒಂದು ದಿನ ಗಿರೀಶ್‌ಚಂದ್ರನ ಮುಂದೆ ಸ್ವಾಮೀಜಿಗೆ ಹೀಗೆ ಹೇಳಿದರು, ''ಜಗತ್ತಿನ ಉದ್ಧಾರಕ್ಕಾಗಿ ಏನೇನು ಮಾಡಬೇಕೆಂದಿರುವೆಯೋ ಅದನ್ನು ನೀನು ಮಾಡು. ಆದರೆ ಶ್ರೀಮಾತೆಯವರನ್ನು ಬೋಧಿಸಿ ಜಗತ್ತಿನೆದುರಿಗೆ ತರಲು ಈಗಲೇ ಯತ್ನಿಸಬೇಡ. ಶ್ರೀರಾಮಕೃಷ್ಣರು ತಮ್ಮ ಬಗ್ಗೆ ಹೊರಜಗತ್ತಿಗೆ ಪ್ರಚಾರ ಮಾಡಲು ಆರಂಭಿಸಿದಾಗ ತಾವು ತಮ್ಮ ದೇಹತ್ಯಾಗ ಮಾಡುವರೆಂದು ಹೇಳಿದುದು ನಿನಗೆ ನೆನಪಿಲ್ಲವೆ? ಇದು ಶ್ರೀಮಾತೆಯ ವಿಷಯದಲ್ಲೂ ಸತ್ಯವಾಗಬಹುದು.'' ಈ ಸಲಹೆಯನ್ನು ಸ್ವಾಮೀಜಿ ಒಪ್ಪಿಕೊಂಡರು.

ಕೆಲವು ಬಾರಿ ಸ್ವಾಮೀಜಿಗೆ ಶ್ರೀಮಾತೆಯವರು ಶ್ರೀರಾಮಕೃಷ್ಣರ ವಿರಾಟ್‌ರೂಪವಾಗಿಯೇ ತೋರುತ್ತಿದ್ದರು. ಮತ್ತೆ ಕೆಲವು ಸಮಯದಲ್ಲಿ ಅವರು ಶ್ರೀರಾಮಕೃಷ್ಣರ ವ್ಯಕ್ತಿತ್ವದಲ್ಲಿ ಲೀನವಾಗುತ್ತಿದ್ದಂತೆ ಕಾಣುತ್ತಿದ್ದರು. ಆಗ ಅವರು ಶ್ರೀರಾಮಕೃಷ್ಣಮಯಿಯಾಗಿಯೇ ತೋರುತ್ತಿದ್ದರು. ಅದನ್ನು ಸ್ವಾಮಿ ಶಿವಾನಂದರಿಗೆ ಬರೆದ ಒಂದು ಪತ್ರದಲ್ಲಿ ವ್ಯಕ್ತಪಡಿಸುತ್ತಾರೆ: ''ನನ್ನ ಪಾಲಿಗೆ ಶ್ರೀಮಾತೆಯವರ ಕೃಪೆ ಎಂಬುದು ಶ್ರೀರಾಮಕೃಷ್ಣರ ಕೃಪೆಗಿಂತಲೂ ನೂರು ಸಾವಿರಪಟ್ಟು ಹೆಚ್ಚು ಅಮೂಲ್ಯ. ಮಾತೆಯ ಕೃಪೆ, ಮಾತೆಯ ಆಶೀರ್ವಾದ ಎಲ್ಲವೂ ನನಗೆ ಪರಮೋತ್ಕೃಷ್ಟ. ಸೋದರ, ನೋಡು ನನ್ನ ಹೆಸರು ನಿಜಕ್ಕೂ ವಿವೇಕಾನಂದ ಎಂಬುದೇ ಹೌದಾದಲ್ಲಿ, ನಿಮಗೆ ನಾನು ಜೀವಂತ ದುರ್ಗೆಯನ್ನು ಆರಾಧಿಸಿ ತೋರಿಸುತ್ತೇನೆ. ದಯವಿಟ್ಟು ನನ್ನನ್ನು ಕ್ಷಮಿಸು. ಮಾತೆಯ ವಿಷಯದಲ್ಲಿ ನಾನು ಸ್ವಲ್ಪ ಮತಾಂಧನೇ ಸರಿ... ಇತರ ದೇವತೆಗಳೆಲ್ಲಾ ಏನು ಮಹಾ! ಸೋದರ, ಮಾತೆಯ ಬಗೆಗಿನ ನನ್ನ ಅಭಿಮಾನ ಅಂತಹದು. ರಾಮಕೃಷ್ಣರನ್ನು ನೀನು

ಬೇಕಾದರೆ ಅವತಾರ ಪುರುಷ ಅನ್ನು, ಅಥವಾ ಹೇಗಿಷ್ಟವೋ ಹಾಗೆ ಕರೆದುಕೋ. ಆದರೆ ಶ್ರೀಮಾತೆಯವರ ಬಗ್ಗೆ ಯಾರಿಗೆ ಭಕ್ತಿ ಎಂಬುದಿಲ್ಲವೋ ಅವನಿಗೆ ಧಿಕ್ಕಾರ!''

ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶದಿಂದ ಹಿಂದಿರುಗಿದ ಮೇಲೆ ಕಾಶ್ಮೀರಕ್ಕೆ ಭೇಟಿ ಕೊಟ್ಟಾಗ ಒಂದು ಘಟನೆ ನಡೆಯಿತು. ಒಬ್ಬ ಫಕೀರ ಗುರುವಿನ ಶಿಷ್ಯನೊಬ್ಬ ಸ್ವಾಮೀಜಿಯ ವ್ಯಕ್ತಿತ್ವದಿಂದ ಪ್ರಭಾವಿತನಾಗಿ ಸ್ವಾಮೀಜಿ ಬಳಿಗೆ ಹೆಚ್ಚು ಬರುತ್ತಿದ್ದ. ಈ ವಿಷಯ ವನ್ನು ತಿಳಿದ ಅವನ ಫಕೀರ ಗುರುವಿಗೆ ಸ್ವಾಮೀಜಿಯ ಮೇಲೆ ಹೊಟ್ಟೆಯುರಿ ಉಂಟಾಯಿತು. ಕೋಪದಿಂದ ಒಂದು ದಿನ ಸ್ವಾಮೀಜಿ ಕಾಶ್ಮೀರ ಬಿಡುವ ಮುನ್ನ ತಲೆ ತಿರುಗಿ ವಾಂತಿ ಮಾಡಿ ಕೊಳ್ಳುತ್ತಾರೆ ಎಂದು ಶಾಪ ಹಾಕಿದ. ಅದು ಹಾಗೆಯೇ ನಡೆದು ಹೋಯಿತು ಕೂಡ. ಇದರಿಂದ ಸ್ವಾಮೀಜಿ ತೀವ್ರ ಮಾನಸಿಕ ಕ್ಷೋಭೆ ಹಾಗೂ ಆವೇಗಕ್ಕೊಳಗಾದರು. ಕಲ್ಕತ್ತೆಗೆ ಹಿಂದಿರುಗಿದ ಮೇಲೆ ಶ್ರೀಮಾತೆ ಶಾರದಾದೇವಿಯವರ ಬಳಿಗೆ ಹೋಗಿ, ದೂರುವ ಧ್ವನಿಯಲ್ಲಿ ಸ್ವಾಮೀಜಿ ಹೇಳಿದರು: ''ಏನಮ್ಮಾ ನನಗೆ ಹೀಗೆಲ್ಲಾ ಆಯಿತಲ್ಲ, ನಮ್ಮ ಶ್ರೀರಾಮಕೃಷ್ಣರು ಅದನ್ನು ತಡೆಯ ಬಾರದಿತ್ತೆ?'' ಶ್ರೀಮಾತೆಯವರು ಅವರನ್ನು ಸಂತೈಸುತ್ತಾ ನುಡಿ ದರು, ''ಏನು ಮಾಡುವುದಪ್ಪಾ? ಜಗತ್ತಿನಲ್ಲಿ ನಿಜವಾದ ಆಧ್ಯಾತ್ಮಿ ಕತೆಯಿರುವಂತೆಯೇ ಮಾಯಾಮಂತ್ರಗಳೂ ಇವೆ. ಅಷ್ಟೇ ಅಲ್ಲದೆ ಅವರೂ ಕೂಡ ಸಾಧನೆ ಮಾಡಿ ಗಳಿಸಿದ್ದೇ ಅಲ್ಲವೇ ಆ ಶಕ್ತಿ? ಅದು ವ್ಯರ್ಥವಾಗಬೇಕೆಂದರೆ ಹೇಗೆ ಸಾಧ್ಯ? ಹಿಂದೆ ಶ್ರೀರಾಮಕೃಷ್ಣರಿಗೆ ಹಲಧಾರಿ, 'ನೀನು ರಕ್ತ ಕಾರುವಂತಾಗಲಿ' ಎಂದು ಶಪಿಸಿದ್ದ. ಅದು ನಿಜಕ್ಕೂ ಹಾಗೆಯೇ ಆಗಿಹೋಯಿತು.'' ಆದರೆ ಈ ಉತ್ತರದಿಂದ ಸ್ವಾಮೀಜಿಯವರಿಗೇನೂ ಸಂಪೂರ್ಣ ಸಮಾಧಾನ ವಾಗಲಿಲ್ಲ. ಮುನಿಸಿಕೊಂಡ ಬಾಲಕ ತಾಯಿಯ ಮುಂದೆ ಹಠ ಮಾಡುವಂತೆ ಹೇಳಿದರು, ''ಒಟ್ಟಿನಲ್ಲಿ ನಿಮ್ಮ ರಾಮಕೃಷ್ಣರ ಕೈಯಲ್ಲಿ ಏನೂ ಆಗಲಿಲ್ಲ. ಹೋಗಲಿ, ನನಗೆ ಅವರ ಸಹವಾಸವೇ ಬೇಡ!'' ಇದನ್ನು ಕೇಳಿ ಶ್ರೀಮಾತೆಯವರಿಗೆ ನಗು ಬಂತು. ಅವ ರೆಂದರು, ''ಮಗೂ, ನೀನು ಏನೇ ಹೇಳಿದರೂ, ನಿನ್ನ ಜುಟ್ಟು ಅವರ ಕೈಯಲ್ಲಿ ಭದ್ರವಾಗಿದೆಯಲ್ಲ! ಏನು ಮಾಡುವುದು?''

೧೮೯೮ರಲ್ಲಿ ಕಲ್ಕತ್ತಾ ನಗರದಲ್ಲಿ ಪ್ಲೇಗ್ ರೋಗ ಭೀಷಣಾ ಕಾರವನ್ನು ತಾಳಿದೆ ಎಂಬ ಸುದ್ದಿ ಅವರ ಕಿವಿಗೆ ಬಿದ್ದಿತು. ಸ್ವಾಮಿ ಗಳು ದಾರ್ಜಿಲಿಂಗ್‌ನಿಂದ ಬೇಲೂರು ಮಠಕ್ಕೆ ಹಿಂದಿರುಗಿ ಬಂದು ತರುಣ ಸನ್ಯಾಸಿಗಳು ಮತ್ತು ಬ್ರಹ್ಮಚಾರಿಗಳಿಗೆ ರೋಗಿಗಳ ಸೇವಾ ಕಾರ್ಯವನ್ನು ಆರಂಭಿಸಲು ಹೇಳಿದರು.

ಅದನ್ನು ಕೇಳಿ ಸೋದರ ಸನ್ಯಾಸಿಗಳೊಬ್ಬರು, ''ಸ್ವಾಮೀಜಿ, ಸೇವಾಕಾರ್ಯಕ್ಕೆ ಹಣ ಬರುವುದೆಲ್ಲಿಂದ?'' ಎಂದು ಕೇಳಿದರು. ಸ್ವಾಮೀಜಿ ಸ್ವಲ್ಪವೂ ತಡವರಿಸದೆ, ''ಎಲ್ಲಿಂದ? ಅದೇಕೆ? ಆವಶ್ಯ ಕತೆ ಬಿದ್ದರೆ ಹೊಸದಾಗಿ ಕೊಂಡುಕೊಂಡ ಮಠದ ಭೂಮಿಯನ್ನೇ ಮಾರುವುದು. ಸಾವಿರಾರು ಜನರು ನಮ್ಮ ಕಣ್ಣ ಮುಂದೆಯೇ ನರಳುವಾಗ ನಮಗೆ ಮಠದಲ್ಲಿ ಸುಖವಾಸವೆ? ಮರದಡಿಯಲ್ಲಿ ಮಲಗಿ ಭಿಕ್ಷೆಯಿಂದ ಹೊಟ್ಟೆ ತುಂಬಿಸಿಕೊಳ್ಳೋಣ'' ಎಂದರು.

ಆ ಮಾತನ್ನು ಕೇಳಿ ಎಲ್ಲರೂ ಬೆಚ್ಚಿಬಿದ್ದರು. ಅವರು ಒಮ್ಮೆ ಏನಾದರೂ ಹೇಳಿದರೆ ಅದು ತೀರ್ಮಾನವೇ. ಆದರೂ ಸ್ವಾಮಿ ಶಿವಾನಂದರು ಹೇಳಿದರು, ''ನರೇನ್, ನೀನು ಮುಖ್ಯವಾದ ವಿಷಯಗಳನ್ನು ಶ್ರೀಮಾತೆಯವರೊಡನೆ ಆಲೋಚಿಸುವೆಯಲ್ಲ. ಮಠದ ನೆಲವನ್ನು ಮಾರುವ ಮುಂಚೆ ಒಮ್ಮೆ ಅವರ ಸಲಹೆ ಪಡೆಯಬಾರದೆ?''

ಸ್ವಾಮೀಜಿ ತಕ್ಷಣ ಹೇಳಿದರು, ''ನೀನು ಹೇಳುವುದು ಸರಿ, ತಾರಕ, ನಾನು ತಪ್ಪು ಮಾಡಿದೆ. ಇಂದೇ ಶ್ರೀಮಾತೆಯ ಬಳಿಗೆ ಹೋಗಿ ಅವರ ಸಲಹೆ ಪಡೆಯೋಣ.''

ಸ್ವಾಮೀಜಿ ಅಂದು ಸಂಜೆಯೇ ಸ್ವಾಮಿ ಬ್ರಹ್ಮಾನಂದರು ಹಾಗೂ ಶಾರದಾನಂದರೊಡನೆ ಶ್ರೀಮಾತೆಯವರನ್ನು ಕಾಣಲು ಹೋದರು. ಶ್ರೀಮಾತೆಗೆ ಸಾಷ್ಟಾಂಗ ಪ್ರಣಾಮ ಮಾಡಿ ಹೇಳಿ ದರು, ''ಅಮ್ಮಾ, ಪ್ಲೇಗ್ ರೋಗ ಭೀಷಣಾಕಾರ ತಾಳಿದೆ. ಆ ರೋಗಿಗಳಿಗೆ ಸಹಾಯ ಮಾಡಲು, ಸೇವೆ ಮಾಡಲು ನಮ್ಮ ಬಳಿ ಹಣವಿಲ್ಲ. ಮಠದ ನೆಲವನ್ನು ಮಾರಿಬಿಡೋಣ ಎಂದು ಯೋಚಿಸುತ್ತಿದ್ದೇನೆ. ನಾವು ಸಂನ್ಯಾಸಿಗಳು. ಮರದ ಕೆಳಗೂ ವಾಸಿಸಬಲ್ಲೆವು. ನಿಮ್ಮ ಅಪ್ಪಣೆ ಬೇಕು'' ಎಂದರು.

ಸ್ವಾಮೀಜಿಯವರ ಎಲ್ಲ ಯೋಜನೆಗಳನ್ನೂ ಸಾಧಾರಣವಾಗಿ ಶ್ರೀಮಾತೆ ಅನುಮೋದಿಸುತ್ತಿದ್ದರು. ಆದರೆ ಈ ವಿಷಯದಲ್ಲಿ ತಮ್ಮ ಸಮ್ಮತಿ ನೀಡಲಿಲ್ಲ. ಅವರು ಹೇಳಿದರು, ''ನೋಡು ಮಗು, ಆ ಜಮೀನನ್ನು ನೀನು ಮಾರಲಾಗುವುದಿಲ್ಲ. ಅದು ನಿನ್ನ ದಲ್ಲ. ಅದು ಶ್ರೀರಾಮಕೃಷ್ಣರಿಗೆ ಸೇರಿದ್ದು. ನೀವೆಲ್ಲಾ ನನ್ನ ಧೈರ್ಯಶಾಲಿ ಮಕ್ಕಳು, ನಿಜ. ಮರದ ಕೆಳಗೆ ಆನಂದದಿಂದಲೇ ಕಾಲಕಳೆಯುವಿರಿ, ಅದೂ ನನಗೆ ಗೊತ್ತು. ಆದರೆ ಮುಂದೆ ಬರುವ ನನ್ನ ಮಕ್ಕಳು ಅಂತಹ ಕಠೋರ ಜೀವನವನ್ನು ನಡೆಸ ಲಾರರು. ಈ ಮಠ ಅವರಿಗಾಗಿ... ನೀನು ಆರಂಭಿಸಿರುವ ಬೇಲೂರು ಮಠ ಬರಿಯ ಪರಿಹಾರ ಕಾರ್ಯದೊಡನೆ ಮುಗಿಯ ಬೇಕೆ? ಗುರುದೇವರ ಯೋಜನೆಗಳು ಅನಂತವಾದವು. ಅವರ ಹಲವಾರು ಸಂದೇಶಗಳನ್ನು ಈ ಮಠದ ಮೂಲಕ ಪ್ರಪಂಚ ದಲ್ಲೆಲ್ಲಾ ಹರಡಬೇಕಾಗಿದೆ. ಅವರ ಕಾರ್ಯ ಬಹಳ ಕಾಲದವರೆಗೆ ಮುಂದುವರಿಯುತ್ತದೆ.'' ಸ್ವಾಮೀಜಿ ಶ್ರೀಮಾತೆಯ ಮಾತಿ ನಲ್ಲಿದ್ದ ಸತ್ಯವನ್ನು ತಕ್ಷಣ ಮನಗಂಡರು.

ಮಠದ ಆಡಳಿತದ ಸಂಬಂಧದಲ್ಲಿ ಶ್ರೀಮಾತೆಯವರ ಮಾತು ಆದೇಶವಾಗಿ ಸ್ವೀಕರಿಸಲ್ಪಡುತ್ತಿತ್ತು.

ಒಮ್ಮೆ ಬೇಲೂರು ಮಠದ ಕೆಲಸಗಾರನೊಬ್ಬ ಏನನ್ನೋ ಕದ್ದ. ಇದು ಸ್ವಾಮೀಜಿ ಗಮನಕ್ಕೆ ಬಂದಿತು. ತಕ್ಷಣ ಅವನನ್ನು ಕೆಲಸ ದಿಂದ ತೆಗೆದು ಹಾಕಿದರು. ಆತ ಕಡುಬಡವ. ಅವನ ಸಂಸಾರ

ಅವನ ಆದಾಯದ ಮೇಲೆ ನಿಂತಿತ್ತು. ಆತ ಏನೂ ತೋಚದೆ ಶ್ರೀಮಾತೆಯ ಬಳಿ ಓಡಿದ. ಶ್ರೀಮಾತೆ ಅವನ ಕಥೆಯನ್ನೆಲ್ಲಾ ಕೇಳಿ ಉದ್ಬೋಧನದಲ್ಲೇ ಇರಲು ತಿಳಿಸಿದರು. ಅದೇ ದಿನ ಸಾಯಂಕಾಲ ಸ್ವಾಮಿ ಪ್ರೇಮಾನಂದರು ಕಾರ್ಯಾರ್ಥವಾಗಿ ಉದ್ಬೋಧನಕ್ಕೆ ಬಂದರು. ಆಗ ಶ್ರೀಮಾತೆಯವರು ಪ್ರೇಮಾನಂದರಿಗೆ ಹೇಳಿದರು: ''ನೋಡಪ್ಪಾ, ಬಾಬುರಾಮ್, ಈ ಮನುಷ್ಯ ಬಹಳ ಬಡವ. ಇವನು ಕದಿಯುವುದಕ್ಕೆ ಇವನ ಬಡತನವೇ ಕಾರಣ. ಇಷ್ಟಕ್ಕೆಲ್ಲಾ ನರೇನ್ ಇವನನ್ನು ಬೈದು ಕಳುಹಿಸಿಬಿಡುವುದೆ! ಪ್ರಪಂಚ ಬಹಳ ಕಷ್ಟ. ನೀವೆಲ್ಲಾ ಸಂನ್ಯಾಸಿಗಳು. ನಿಮಗೆ ಆ ಕಷ್ಟವೆಲ್ಲಾ ಗೊತ್ತಾಗುವುದಿಲ್ಲ. ಕರೆದುಕೊಂಡು ಹೋಗು ಅವನನ್ನು.'' ಆದರೆ ತಾವು ಹಾಗೆ ಕರೆದುಕೊಂಡು ಹೋದರೆ ಸ್ವಾಮೀಜಿ ಬೇಸರಿಸಿಕೊಳ್ಳುತ್ತಾರೆ ಎಂಬ ಅಂಶವನ್ನು ಶ್ರೀಮಾತೆಗೆ ಮನಗಾಣಿಸಲು ಪ್ರೇಮಾನಂದರು ಯತ್ನಿಸಿದರು. ಆಗ ಶ್ರೀಮಾತೆ ಅಧಿಕಾರವಾಣಿಯಿಂದ ಹೇಳಿದರು: ''ನಾನು ಹೇಳುತ್ತಿದ್ದೇನೆ. ಕರೆದುಕೊಂಡು ಹೋಗು.'' ಬೇರೆ ಮಾರ್ಗವಿಲ್ಲದೆ ಪ್ರೇಮಾನಂದರು ಅವನನ್ನು ಕರೆದುಕೊಂಡು ಹೋದರು. ಮಠದಲ್ಲಿ ದೂರದಿಂದಲೇ ಸ್ವಾಮೀಜಿ ಇವರಿಬ್ಬರನ್ನು ನೋಡಿ ಅಬ್ಬರಿಸಿದರು, ''ನೋಡು, ಬಾಬುರಾಮನ ಅವಿವೇಕವನ್ನು. ಆ ಮೂರ್ಖನನ್ನು ಮತ್ತೆ ಕರೆದುಕೊಂಡು ಬರುತ್ತಿದ್ದಾನಲ್ಲ.'' ಪ್ರೇಮಾನಂದರು ಸ್ವಾಮೀಜಿಗೆ ನಡೆದುದೆಲ್ಲವನ್ನೂ ವಿವರಿಸಿದ ಮೇಲೆ ಸ್ವಾಮೀಜಿ ಒಂದು ಮಾತೂ ಆಡದೆ ಮೌನವಾಗಿಬಿಟ್ಟರು.

ಒಮ್ಮೆ ಸ್ವಾಮೀಜಿ ಮತ್ತು ತುರೀಯಾನಂದರು ಶ್ರೀಮಾತೆಯವರನ್ನು ಭೇಟಿ ಮಾಡಲು ಬೇಲೂರು ಮಠದಿಂದ ಕಲ್ಕತ್ತೆಗೆ ದೋಣಿಯಲ್ಲಿ ಹೊರಟರು. ಸ್ವಾಮೀಜಿ ಗಂಗಾನದಿಯ ನೀರನ್ನು ಬೊಗಸೆ ಬೊಗಸೆಯಾಗಿ ಎತ್ತಿ ತಮ್ಮ ದೇಹದ ಮೇಲೆ ಚಿಮುಕಿಸಿಕೊಳ್ಳುತ್ತಿದ್ದರು. ಇದನ್ನು ನೋಡಿದ ತುರೀಯಾನಂದರು, ''ಇದೇನು ಮಾಡುತ್ತಿದ್ದೀ? ಹೀಗೆ ಮಾಡುತ್ತಿದ್ದರೆ ಶೀತವಾಗಿಬಿಡುತ್ತದೆ'' ಎಂದರು.

ಅದಕ್ಕೆ ಸ್ವಾಮೀಜಿ, ''ಇಲ್ಲ, ಸಹೋದರ, ನನ್ನ ದೇಹ ಮತ್ತು ಮನಸ್ಸನ್ನು ಶುದ್ಧಗೊಳಿಸಿಕೊಳ್ಳುತ್ತಿದ್ದೇನೆ. ಹಲವಾರು ದೇಶಗಳನ್ನು ಸುತ್ತಿ ಎಲ್ಲರೊಡನೆ ಬೆರೆತು ಅಶುದ್ಧವಾಗಿಬಿಟ್ಟಿದ್ದೇನೆ. ಹೀಗೇ ಹೋದರೆ ಶ್ರೀಮಾತೆಯವರು ನನ್ನೆಲ್ಲಾ ಪಾಪಗಳನ್ನು ತೆಗೆದುಕೊಂಡು, ತಾವು ಕಷ್ಟ ಅನುಭವಿಸುತ್ತಾರೆ'' ಎಂದರು.

ಸ್ವಾಮಿ ವಿವೇಕಾನಂದರು ೪ ಜುಲೈ ೧೯೦೨ರಲ್ಲಿ ಬೇಲೂರು ಮಠದಲ್ಲಿ ದೇಹತ್ಯಾಗ ಮಾಡಿದಾಗ ಶ್ರೀಮಾತೆಯವರು ಜಯರಾಂಬಾಟಿಯಲ್ಲಿದ್ದರು. ವಿಷಯ ತಿಳಿದ ಮೇಲೆ ಅವರು ಮೌನಿಗಳಾಗಿ ಮೂರು ದಿನ ಸತತವಾಗಿ ಅಳುತ್ತಾ ಗೋಳಾಡುತ್ತಿದ್ದರು. ಶ್ರೀರಾಮಕೃಷ್ಣರನ್ನು ಉದ್ದೇಶಿಸಿ ಕಂಬನಿಗರೆಯುತ್ತಾ ಹೇಳಿದರು: ''ಸ್ವಾಮಿ, ನನ್ನ ಮಕ್ಕಳ ನಿರ್ಗಮನದ ದುಃಖವನ್ನನುಭವಿಸಲು ನನ್ನನ್ನು ಇನ್ನೂ ಬದುಕಿ ಉಳಿಸಿದ್ದೀರಾ?''

ಸ್ವಾಮೀಜಿಯನ್ನು ನೆನೆಪಿಸಿಕೊಂಡಾಗಲೆಲ್ಲಾ ಹೇಳುತ್ತಿದ್ದರು, ''ಗುರುದೇವರು ಹೇಳುತ್ತಿದ್ದರು, 'ನರೇನ್, ನನ್ನ ಶಿರೋರತ್ನ. ಅವನಲ್ಲಿ ಎರಡು ದುರದೃಷ್ಟಗಳಿದ್ದವು. ಅವನು ಬಿರುಸಾಗಿ ಉದ್ದವಾಗಿ ಉಸಿರಾಡುತ್ತಿದ್ದ ಹಾಗೂ ಸಾಧಾರಣ ವ್ಯಕ್ತಿಗಳಿಗಿಂತ ಸ್ವಲ್ಪ ಜಾಸ್ತಿ ತಿನ್ನುತ್ತಿದ್ದ. ಇವೆರಡೂ ಅವನು ಬಹಳ ಕಾಲ ಬದುಕಿರುವುದಿಲ್ಲವೆನ್ನುವುದರ ಚಿಹ್ನೆ.' ''


ಒಮ್ಮೆ ಶ್ರೀಮಾತೆಯವರಿಗೆ ಸ್ವಾಮೀಜಿ ಹೇಳಿದರು, ''ಅಮ್ಮಾ, ನನಗೆ ಚೆನ್ನಾಗಿ ಗೊತ್ತು. ನಿಮ್ಮ ಆಶೀರ್ವಾದದಿಂದ ಬೇಕಾದಷ್ಟು ನರೇಂದ್ರರು ಹುಟ್ಟುತ್ತಾರೆ ಮತ್ತು ಸಾವಿರಾರು ವಿವೇಕಾನಂದರು ಉದ್ಭವಿಸುತ್ತಾರೆ. ಅಲ್ಲದೆ ನನಗೆ ಇದೂ ಖಚಿತವಾಗಿ ಗೊತ್ತು, ಈ ಪ್ರಪಂಚದಲ್ಲಿ ನಿನ್ನಂತಹ ತಾಯಿ ಒಬ್ಬಳೇ ಒಬ್ಬಳು.''

ಡಾ. ರಾಧಾಕೃಷ್ಣನ್ ಮತ್ತು ಸ್ವಾಮಿ ಆತ್ಮಸ್ಥಾನಂದಜಿ




ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ರಾಮಕೃಷ್ಣ ಮಹಾಸಂಘವನ್ನು ಸೇರುವುದಕ್ಕೆ ಮೊದಲು, ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದಲ್ಲಿ ಎಂ.ಎ. ಪದವಿಗಾಗಿ ಓದುತ್ತಿದ್ದರು. ಅವರಿಗೆ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಪ್ರಾಧ್ಯಾಪಕರಾಗಿದ್ದರು. ಬಹಳ ವರ್ಷಗಳ ನಂತರ ಅವರಿಬ್ಬರೂ ಒಂದೆಡೆ ಭೇಟಿಯಾಗುವ ಪ್ರಸಂಗ ಒದಗಿ ಬಂತು. ಸ್ವಾಮೀಜಿಯವರನ್ನು ಕಂಡ ಕೂಡಲೇ ರಾಧಾಕೃಷ್ಣನ್ ಎದ್ದು ನಿಂತರು. ತುಂಬಾ ಹಿಂದೆ ಶಿಷ್ಯನಾಗಿದ್ದ ತಮ್ಮನ್ನು ಖಂಡಿತ ಅವರು ಗುರುತಿಸಲಾರರು ಎಂದೇ ಸ್ವಾಮೀಜಿ ಭಾವಿಸಿದ್ದರು. ಅವರು ತಮ್ಮನ್ನು ತಾವು ಪರಿಚಯಿಸಿಕೊಂಡಾಗ ರಾಧಾಕೃಷ್ಣನ್, ''ನನಗೆ ನಿಮ್ಮನ್ನು ಚೆನ್ನಾಗಿ ನೆನಪಿದೆ'' ಎಂದರು. ಆಗ ಮಹಾರಾಜ್, ''ಹಾಗಿದ್ದರೆ ಮತ್ತೆ ನೀವೇಕೆ ಎದ್ದು ನಿಂತಿರಿ? ನೀವು ನನ್ನ ಅಧ್ಯಾಪಕರು, ನನಗೆ ಗುರುವಲ್ಲವೆ?'' ಎಂದು ಕೇಳಿದರು. ಆಗ ರಾಧಾಕೃಷ್ಣನ್, ''ನೀವು ಶಿಷ್ಯನಾಗಿದ್ದಾಗ ನಾನು ನಿಮ್ಮ ಗುರುವಾಗಿದ್ದೆ, ನಿಮಗೆ ಅಧ್ಯಾಪಕನಾಗಿದ್ದೆ. ಆದರೆ ಈಗ ನೀವು ಸಂನ್ಯಾಸಿಗಳು, ಜಗದ್ಗುರುಗಳು'' ಎಂದರು.

(ಸಂಗ್ರಹ: 'ಸ್ವಾಮಿ ಆತ್ಮಸ್ಥಾನಂದ' ಸಂಕ್ಷಿಪ್ತ ಜೀವನ ಚರಿತ್ರೆ)



ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೯

ಈ ಸಮಯದಲ್ಲೇ, ಕಾಶಿಯ ಹೊರಭಾಗದಲ್ಲಿದ್ದ ಪ್ರಮದ ದಾಸ ಮಿತ್ರರ[೧] ತೋಟದ ಮನೆಯಲ್ಲಿ ಶ್ರೀರಾಮಕೃಷ್ಣರ ಕೆಲವು ಸಂನ್ಯಾಸೀ ಶಿಷ್ಯರಾದ ಸ್ವಾಮಿ ಯೋಗಾನಂದಜಿ, ಸ್ವಾಮಿ ಶಿವಾನಂದಜಿ, ಸ್ವಾಮಿ ಅಭೇದಾನಂದಜಿ, ಮುಂತಾದವರು ತಪಸ್ಸು ಮಾಡುತ್ತಿದ್ದರು. ಬೂಡೋ ಬಾಬಾ (ಸ್ವಾಮಿ ಸಚ್ಚಿದಾನಂದರು) ಸ್ವಲ್ಪ ಕಾಲದ ಹಿಂದಷ್ಟೇ ಸಂಸಾರ ತ್ಯಾಗ ಮಾಡಿ, ಸ್ವಾಮಿ ಶಾರದಾನಂದರ[೨] ಹತ್ತಿರ ಸಂನ್ಯಾಸ ಪಡೆದು ಅಲ್ಲಿಯೇ ವಾಸಿಸುತ್ತಿದ್ದರು. ಇವರೆಲ್ಲ ಮಧುಕರಿ ಮಾಡುತ್ತಿದ್ದರು; ಯಾವಾಗಲಾದರೊಮ್ಮೆ ದುಡ್ಡು ಸಿಕ್ಕಿದರೆ ತಂಬಾಕು, ಕಲ್ಲಿದ್ದಲು, ಮಣ್ಣಿನ ಗುಡುಗುಡಿ ಇತ್ಯಾದಿಗಳನ್ನು ಕೊಂಡು ತರುತ್ತಿದ್ದರು. ಕೆಲವು ದಿನಗಳು ತುಂಬ ಉಲ್ಲಾಸದಿಂದ ತಂಬಾಕು ಸೇವನೆ ನಡೆಯುತ್ತಿತ್ತು. ದುಡ್ಡು ಕರಗಿ ಹೋದಾಗ ಗುಡುಗುಡಿಯನ್ನು ಎಸೆದು ಬರುತ್ತಿದ್ದರು. ಕಾಳೀಕೃಷ್ಣರೀಗ ಶ್ರೀರಾಮಕೃಷ್ಣರ ಈ ಸಂನ್ಯಾಸೀ ಶಿಷ್ಯರ ಪುಣ್ಯ ಸಂಗವನ್ನು ಮಾಡಲಾರಂಭಿಸಿದರು. ಬೂಡೋ ಬಾಬಾ ಇವರಿಗೆ ಮಧುಕರಿ ಮಾಡುವುದನ್ನು ಕಲಿಸಿಕೊಟ್ಟಿದ್ದರು. ಗಂಟು ಹಾಕಿ ವಸ್ತ್ರವನ್ನುಟ್ಟು ಜೋಳಿಗೆ ಮತ್ತು ಬೋಗುಣಿಯನ್ನು ಹಿಡಿದು ಚಪಾತಿ, ತೊವ್ವೆಗಳನ್ನು ಹೇಗೆ ಭಿಕ್ಷೆ ಪಡೆಯಬೇಕು ಮುಂತಾಗಿ. ಕಾಳೀಕೃಷ್ಣರನ್ನು ಅವರು ತುಂಬ ಪ್ರೀತಿಸುತ್ತಿದ್ದರು. ಸ್ವಾಮಿ ಅದ್ವೈತಾನಂದರು ಮತ್ತು ಬೂಡೋ ಬಾಬಾ ಇವರುಗಳೊಂದಿಗೆ ಕಾಳೀಕೃಷ್ಣರು ಕಾಶಿಯಲ್ಲಿ 'ಪಂಚಕ್ರೋಶ' ಪ್ರದಕ್ಷಿಣೆಯನ್ನು ಕೈಗೊಂಡಿದ್ದರು. ಇದು ಸುಮಾರು ೨೨ ಕ್ರೋಶ ದೂರದ ಪ್ರದಕ್ಷಿಣೆ; ಅದಕ್ಕೆ ನಾಲ್ಕು ದಿನಗಳು ಹಿಡಿದವು. ಮಧ್ಯಾಹ್ನ ಎಲ್ಲಿಗೆ ತಲುಪುತ್ತಿದ್ದರೊ ಅಲ್ಲಿಯೇ ಅಡುಗೆ, ಊಟ ಮುಗಿಸಿ ವಿಶ್ರಮಿಸುತ್ತಿದ್ದರು; ಮಾರನೆಯ ದಿನ ಮುಂಜಾನೆ ಇತರರೊಡನೆ ಹೊರಡುತ್ತಿದ್ದರು. ರಾತ್ರಿ ಮರದಡಿಯಲ್ಲಿ ಆಸನ ಹರಡಿ ಇತರ ಸಾಧುಗಳಂತೆಯೇ ಮಲಗುತ್ತಿದ್ದರು. ಹೀಗೆ ಸುಮಾರು ಒಂದು ತಿಂಗಳ ಕಾಶೀವಾಸದ ನಂತರ ಮಾರ್ಗಮಧ್ಯದಲ್ಲಿ ಅಯೋಧ್ಯೆಯನ್ನು ಸಂದರ್ಶಿಸಿ ಕಾಳೀಕೃಷ್ಣರು ಬೃಂದಾವನವನ್ನು ತಲುಪಿದರು.



ಶ್ರೀರಾಮಕೃಷ್ಣರ ಗೃಹೀಭಕ್ತರಾದ ಬಲರಾಮಬಸುಗಳ ಗೃಹ ದೇವಾಲಯವಾದ ಕಾಲಾಬಾಬುವಿನ ಕುಂಜ[೩]ದಲ್ಲಿ ಬಾಬುರಾಮ್ ಮಹಾರಾಜರು ತಂಗಿದ್ದರು. ಕಾಳೀಕೃಷ್ಣರೂ ಸಹ ಅವರೊಂದಿಗೇ ಇರತೊಡಗಿದರು. ಜಪ-ಧ್ಯಾನ, ದೇವರ ದರ್ಶನ ಇತ್ಯಾದಿಗಳಲ್ಲಿ ಆನಂದದಿಂದ ಕಾಲ ಕಳೆಯತೊಡಗಿತು. ಶ್ರೀರಾಮಕೃಷ್ಣರ ಭಾವಚಿತ್ರವನ್ನು ಒಂದು ಮರದ ಪೀಠದ ಮೇಲಿಟ್ಟು ಬಾಬುರಾಮ್ ಮಹಾರಾಜರು ಅದಕ್ಕೆ ಪೂಜೆಯನ್ನು ಸಲ್ಲಿಸುತ್ತಿದ್ದರು. ನೈವೇದ್ಯಕ್ಕೆ ಕೇವಲ ಕಲ್ಲುಸಕ್ಕರೆಯನ್ನಷ್ಟೇ ನೀಡುತ್ತಿದ್ದರು.

---

೧ ಇವರು ಕಾಶಿಯ ಒಬ್ಬ ಧರ್ಮನಿಷ್ಠ ಜಮೀನ್ದಾರರು. ಇವರು ಸ್ವಾಮೀಜಿ ಮತ್ತಿತರ ಶಿಷ್ಯರ ಸಂಪರ್ಕಕ್ಕೆ ಬಂದು ಶ್ರೀರಾಮಕೃಷ್ಣರ ಪರಮಭಕ್ತರಾಗಿದ್ದರು. ಇವರಿಂದ ರಚಿಸಲ್ಪಟ್ಟ ''ವಿಶುದ್ಧವಿಜ್ಞಾನಮಗಾಧಸೌಖ್ಯಂ...'' ಎಂಬ ಪ್ರಖ್ಯಾತ ಸ್ತೋತ್ರವು ಶ್ರೀರಾಮಕೃಷ್ಣರ ಭಕ್ತವೃಂದದಲ್ಲಿ ವಿಶೇಷವಾಗಿ ಆದರಣೆ ಪಡೆದಿದೆ. ಸ್ವಾಮೀಜಿಯವರು ಈ ಪ್ರಮದ ಬಾಬುಗಳಿಗೆ ಬರೆದ ಅನೇಕ ಪತ್ರಗಳು 'ಸ್ವಾಮಿ ವಿವೇಕಾನಂದರ ಪತ್ರಮಾಲೆ' ಎಂಬ ಗ್ರಂಥದಲ್ಲಿ ಮುದ್ರಿತವಾಗಿವೆ.

೨ ಇದಕ್ಕೂ ಮೊದಲು ಬೂಡೋ ಬಾಬಾರವರು ಕಾಶಿಯಲ್ಲಿ ಸ್ವಾಮಿ ಯೋಗಾನಂದರಿಂದಲೂ ಸಾಧನೆಯ ಕೆಲವು ಉಪದೇಶಗಳನ್ನು ಪಡೆದಿದ್ದರು.

೩ ವಿಖ್ಯಾತ ಜಮೀನ್ದಾರರೂ, ಭಕ್ತಾಗ್ರಣಿಯೂ ಆದ ಲಾಲಾಬಾಬುಗಳು ಬೃಂದಾವನದಲ್ಲಿ ಶ್ರೀಕೃಷ್ಣನ ಬೃಹತ್ತಾದ ಕಲ್ಲಿನ ಮಂದಿರವನ್ನು ನಿರ್ಮಿಸಿದ ಸಮಯದಲ್ಲೇ ಬಲರಾಮಬಸುವಿನ ತಾತನೂ ಸಹ ಈ ಕುಂಜವನ್ನು ನಿರ್ಮಿಸಿದ್ದರು. ಲಾಲಾಬಾಬುಗಳು ಬಹಳ ಗೌರವರ್ಣದವರಾದ್ದರಿಂದ ವ್ರಜನಿವಾಸಿಗಳು ಅವರಿಗೆ 'ಲಾಲಾಬಾಬು' ಎಂಬ ಹೆಸರನ್ನಿಟ್ಟಿದ್ದರು. ಅವರಿಗೆ ಹೋಲಿಸಿದರೆ ಬಸು ಮಹಾಶಯರು ಕಪ್ಪಗಿದ್ದುದರಿಂದ ಇವರಿಗೆ 'ಕಾಲಾಬಾಬು' ಎನ್ನುತ್ತಿದ್ದರು.



ಕಾಲಾಬಾಬುವಿನ ಕುಂಜ, ವೃಂದಾವನ

ಶ್ಯಾಮಸುಂದರನ ಮಂದಿರದಿಂದ ಇಬ್ಬರಿಗೂ ಸಹ ಎರಡೂ ಹೊತ್ತು ಪ್ರಸಾದ ತಲುಪುತ್ತಿತ್ತು. ಬಾಬುರಾಮ್ ಮಹಾರಾಜರು ಅಲ್ಪಾಹಾರಿಯಾದ್ದರಿಂದ ಪ್ರಸಾದದ ಹೆಚ್ಚಿನ ಅಂಶವನ್ನು ಕಾಳೀ ಕೃಷ್ಣರೇ ತಿನ್ನುತ್ತಿದ್ದರು. ಇವರುಗಳ ಖರ್ಚನ್ನು ಬಲರಾಮ ಬಾಬುಗಳ ಪತ್ನಿಯವರೇ ವಹಿಸಿಕೊಳ್ಳುತ್ತಿದ್ದರು. ಮಹಡಿಯಲ್ಲಿ ಎಡಗಡೆ ಇದ್ದ ದೊಡ್ಡ ಕೊಠಡಿಯಲ್ಲಿ ಇವರು ಇರುತ್ತಿದ್ದರು. ಕೆಳಗಡೆ ಇದ್ದ ಕೊಠಡಿಯಲ್ಲಿ ವೃದ್ಧ ಬ್ರಹ್ಮಚಾರಿಗಳೊಬ್ಬರು ಬಹಳ ಹಿಂದಿನಿಂದಲೂ ವಾಸವಾಗಿದ್ದರು. ಬಹುಶಃ ಅದೇ ಸ್ಥಳದವರಿರಬೇಕು. ಪೈಲ್ವಾನರಂತೆ ತುಂಬ ದಪ್ಪ-ಎತ್ತರದ ಮೈಕಟ್ಟು. ಯಾರೊಂದಿಗೂ ಹೆಚ್ಚಾಗಿ ಬೆರೆಯುತ್ತಿರಲಿಲ್ಲ, ತಮ್ಮ ಪಾಡಿಗೆ ತಾವಿರುತ್ತಿದ್ದರು.

ಕಾಳೀಕೃಷ್ಣರಿಗೆ ಬಹಳ ಇಚ್ಛೆ ಇದ್ದರೂ ಸಹ ಬಾಬುರಾಮ್ ಮಹಾರಾಜರು ತಮ್ಮ ಸೇವೆ ಮಾಡಲು ಹೆಚ್ಚಾಗಿ ಬಿಡುತ್ತಿರಲಿಲ್ಲ. ಆದರೂ ಕಾಳೀಕೃಷ್ಣರು ಮನೆ ಗುಡಿಸುವುದು, ಬಾವಿಯಿಂದ ನೀರು ತರುವುದು, ಪೂಜೆಗೆ ಅಣಿಮಾಡಿ ಕೊಡುವುದು ಮುಂತಾದ ಸಾಧಾರಣ ಕೆಲಸಗಳನ್ನು ಮಾಡುತ್ತಿದ್ದರು. ಬಾಬುರಾಮ್ ಮಹಾರಾಜರು ತಮ್ಮದೇ ಆದ ಭಾವದಲ್ಲಿ ತನ್ಮಯರಾಗಿರುತ್ತಿದ್ದರು, ಹೊರಗಿನವರೊಂದಿಗೆ ಹೆಚ್ಚಾಗಿ ಬೆರೆಯುತ್ತಿರಲಿಲ್ಲ. ಕೇವಲ ಸಂಜೆ ಹೊತ್ತು ಗೋವಿಂದಜೀ, ರಾಧಾರಮಣ, ಕೃಷ್ಣಚಂದ್ರ, ಗೋಪೇಶ್ವರ ಶಿವ ಮುಂತಾದ ದೇವಾಲಯಗಳಿಗೆ ಹೋಗುತ್ತಿದ್ದರು.

'ಭಕ್ತಮಾಲ'[೪] ಎಂಬ ವೈಷ್ಣವ ಸಾಧುಗಳೊಬ್ಬರು ಬಾಬುರಾಮ್ ಮಹಾರಾಜರಲ್ಲಿಗೆ ಬಹಳವಾಗಿ ಬರುತ್ತಿದ್ದರು, ಅವರನ್ನು ಬಹುವಾಗಿ ಗೌರವಿಸುತ್ತಿದ್ದರು. ಮಹಾರಾಜರೂ ಸಹ ಅವರನ್ನು ತುಂಬ ಪ್ರೀತಿಸುತ್ತಿದ್ದರು. 'ಝೂಲನ್'[೫] (ಉಯ್ಯಾಲೆ ಉತ್ಸವ) ಸಮಯದಲ್ಲಿ ಈ ಭಕ್ತಮಾಲನನ್ನು ಕರೆದುಕೊಂಡು, ಕಾಳೀಕೃಷ್ಣರೊಡಗೂಡಿ ಬಾಬುರಾಮ್ ಮಹಾರಾಜರು ವ್ರಜಮಂಡಲದ ಪ್ರಮುಖ ತೀರ್ಥದರ್ಶನಕ್ಕೆ ಹೊರಟರು. ಮೊದಲು ಮಥುರೆಗೆ ಹೋಗಿ ಸ್ನಾನ-ದರ್ಶನ ಮಾಡಿಕೊಂಡು 'ಎಕ್ಕಾ' ಗಾಡಿಯಲ್ಲಿ ಗೋವರ್ಧನ ಮತ್ತು ರಾಧಾಕುಂಡಕ್ಕೆ ಹೋಗಿ ಅಲ್ಲೇ ಒಂದೆರಡು ರಾತ್ರಿ ಕಳೆದರು. ಹಗಲಲ್ಲಿ ದೇವಸ್ಥಾನಗಳಲ್ಲಿ ಪ್ರಸಾದ ಪಡೆಯುತ್ತಿದ್ದರು, ರಾತ್ರಿ ಭಕ್ತಮಾಲರು ಮಧುಕರಿ ಮಾಡಿ ತರುತ್ತಿದ್ದರು. ಅಲ್ಲಿಂದ ಮುಂದಕ್ಕೆ ಅವರು ಕಾಲ್ನಡಿಗೆಯಲ್ಲೇ ಹೊರಟರು. ಗ್ರಾಮದ ಕಡೆ ರಸ್ತೆಯಂಚಿನ ಮುಳ್ಳುಬೇಲಿ ಮುರಿದು, ಅದರ ಮುಳ್ಳು ರಸ್ತೆಯ ಮಣ್ಣಿನೊಂದಿಗೆ ಬೆರೆತಿರುತ್ತದೆಂದು ಭಕ್ತಮಾಲರು ಇವರುಗಳಿಗೆ ಬೂಟುಗಳನ್ನು ಕೊಂಡುಕೊಳ್ಳಲು ಹೇಳಿದರು. ಆದರೆ ವ್ರಜಧಾಮ ಪುಣ್ಯಭೂಮಿಯೆಂದು ಚರ್ಮದ ಬೂಟನ್ನು ಹಾಕಿಕೊಳ್ಳಲು ಬಾಬುರಾಮ್ ಮಹಾರಾಜರು ಏನು ಮಾಡಿದರೂ ಒಪ್ಪಲಿಲ್ಲ. ಬದಲಾಗಿ ಎರಡಾಣೆಯ ಬಟ್ಟೆಯ ಚಪ್ಪಲಿ ಹಾಕಿಕೊಳ್ಳುತ್ತಿದ್ದರು. ಅವರ ಕತ್ತಿನಿಂದ ಇಳಿಬಿದ್ದಿದ್ದ ಬಟ್ಟೆಯ ಥೈಲಿಯಲ್ಲಿ ಶ್ರೀರಾಮಕೃಷ್ಣರ ಕಟ್ಟುಹಾಕಿದ ಭಾವಚಿತ್ರ, ಅದನ್ನು ಕೂರಿಸುವ ಒಂದು ಆಸನ ಮತ್ತು ಜಪದ ಮಾಲೆ ಇರುತ್ತಿತ್ತು.

ಈ ಯಾತ್ರೆಯ ಸಮಯದಲ್ಲಿ ಕಾಲಿಗೆ ಮುಳ್ಳು ಚುಚ್ಚಿದರೂ ಸಹ ಬಾಬೂರಾಮ್ ಮಹಾರಾಜರು ಅದನ್ನು ಲೆಕ್ಕಿಸುತ್ತಿರಲಿಲ್ಲ. ತದೇಕಚಿತ್ತದಿಂದ ಮಾಲೆಯನ್ನು ಹಿಡಿದು ಜಪಿಸುತ್ತ ನಡೆಯುತ್ತಿದ್ದರು, ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಬೆಳಿಗ್ಗೆಯಿಂದ ಹಿಡಿದು ಮಧ್ಯಾಹ್ನ ೧೧-೧೨ರವರೆಗೂ ನಡೆದು, ಅವರೆಲ್ಲ ಯಾವುದಾದರೊಂದು ಸಾಧುಗಳ ಬಿಡಾರವನ್ನು ಸೇರುತ್ತಿದ್ದರು. ಅಲ್ಲಿಯ ಸಾಧುಗಳು ಬಹಳ ಉಪಚರಿಸಿ ಊಟ ಬಡಿಸುತ್ತಿದ್ದರು. ರಾತ್ರಿ ಅಲ್ಲಿಯೇ ಕಳೆಯುತ್ತಿದ್ದರು. ಕೆಲವೊಮ್ಮೆ ಬಿಡಾರ ತಲುಪಲು ತುಂಬ ತಡವಾಗುತ್ತಿತ್ತು; ಬಾಬಾಜಿಗಳ ಊಟವೂ ಮುಗಿದಿರುತ್ತಿತ್ತು. ಆದರೂ ತುಂಬ ಪ್ರೀತಿಯಿಂದ ಮತ್ತೆ ಚಪಾತಿ, ಝೋಲ್ (ತರಕಾರಿ ಹಾಕಿ ಬೇಯಿಸಿದ ಪದಾರ್ಥ) ತಯಾರಿಸಿ ಈ ಮೂವರನ್ನೂ ಉಪಚರಿಸುತ್ತಿದ್ದರು. ಈ ರೀತಿಯಲ್ಲಿ ಅವರು ಕುಸುಮ ಸರೋವರದಿಂದ ರಾಧಾರಾಣಿಯ ಜನ್ಮಸ್ಥಳವಾದ ವರ್ಷಾಣಾ ಗ್ರಾಮವನ್ನು ತಲುಪಿದರು. ಅಲ್ಲಿಯ ರಾಮಾಯತ ಸಾಧುಗಳ ಬಿಡಾರವೊಂದರಲ್ಲಿ ಇಳಿದುಕೊಂಡರು. ಕಾಳೀಕೃಷ್ಣರ ಮಾತಿನಲ್ಲಿ ಆ ದಿನಗಳ ಸ್ಮೃತಿಯು ತುಂಬ ಸ್ವಾರಸ್ಯಕರವಾಗಿದೆ:

''ಅಂದು ಅಲ್ಲಿ ಸಾಧುಗಳಿಗೆ 'ಭಂಡಾರ' (ಭೋಜನ ಸೇವೆ) ಎಂದು ಕೇಳಿದೆ; ಸುಮಾರು ೪೦-೫೦ ಮಂದಿ ಸಾಧುಗಳು ನೆರೆದಿದ್ದರು. ಊಟಕ್ಕೆ ಕುಳಿತಾಗ ಎರಡೋ ಮೂರೋ ಗಂಟೆಯಾಗಿತ್ತು. ಊಟ ತಡವಾಗುತ್ತಿದ್ದದನ್ನು ಕಂಡು ಕೆಲವರು ಚಡಪಡಿಸಲಾರಂಭಿಸಿದರು. ಅದನ್ನು ಕಂಡ ಇತರ ಸಾಧುಗಳು ಹೇಳುತ್ತಿದ್ದರು 'ಅರೇ ಜೀ, ಆಜ್ ಮೀಠಾ ಪಲಾವ್!' (ಅರೇ ತಡಿಯಪ್ಪಾ! ಇಂದು ಸಿಹಿ ಪಲಾವ್!) ಎಂದು. ಅದನ್ನು ಕೇಳಿ ನಾನು ಅದೆಂಥಾ ಅಪೂರ್ವ ಖಾದ್ಯವೋ ಎಂದುಕೊಂಡೆ! ತಿನ್ನಲು ಕುಳಿತಾಗ ನೋಡಿದರೆ, ಬೆಲ್ಲದ ರಸದಲ್ಲಿ ಅಕ್ಕಿಯನ್ನು ಬೇಯಿಸಿದ, ಒಣ ಉಂಡುಂಡೆ ಪದಾರ್ಥ; ಅದೇ ಅವರ ಮೀಠಾ ಪಲಾವ್!!

[೪] ಇವರಿಗೆ 'ಭಕ್ತಮಾಲ' ಎಂಬ ಗ್ರಂಥವು ಪೂರ್ತಿ ಕಂಠಪಾಠವಾಗಿತ್ತು. ರಾತ್ರಿ ೩ ಗಂಟೆಗೆ ನಿದ್ರೆಯಿಂದೆದ್ದು, ಇಡೀ ಗ್ರಂಥವನ್ನು ರಾಗವಾಗಿ ಆವೃತ್ತಿ ಮಾಡುತ್ತಿದ್ದರು.

[೫] ರಾಧಾ-ಕೃಷ್ಣ ಇಬ್ಬರ ವಿಗ್ರಹಗಳನ್ನು ಅಲಂಕರಿಸಿದ ಉಯ್ಯಾಲೆಯಲ್ಲಿಟ್ಟು ತೂಗಿ, ನರ್ತಿಸುತ್ತ ನಡೆಸುವ ಉತ್ಸವ. ಆಗಸ್ಟ್ ತಿಂಗಳ ಹುಣ್ಣಿಮೆಯಂದು ವೃಂದಾವನದ ಎಲ್ಲ ದೇವಾಲಯಗಳಲ್ಲೂ ಈ ಉತ್ಸವವನ್ನು ಆಚರಿಸುತ್ತಾರೆ.

ಹೆಚ್ಚಾಗಿ ಹಾಕಿಸಿಕೊಂಡೆ. ಹಸಿವಿನ ಭರದಲ್ಲಿ ೮-೧೦ ತುತ್ತು ತಿಂದ ನಂತರ ಏನು ಮಾಡಿದರೂ ಮುಂದೆ ಗಂಟಲಿನಿಂದ ಕೆಳಗಿಳಿಯು ತ್ತಲೇ ಇಲ್ಲ. ಕಡೆಗೂ ಹೇಗೋ ಮಾಡಿ ಅದರಿಂದಲೇ ಹೊಟ್ಟೆ ತುಂಬಿಸಿಕೊಂಡು, ರಾತ್ರಿಯನ್ನು ಅಲ್ಲೇ ಕಳೆದೆ. ಬೆಳಗಿನಿಂದ ಸುತ್ತಾಡಿ ಕಾಲು ಬೇರೆ ಊದಿಕೊಂಡಿತ್ತು. ಭಕ್ತಮಾಲನು ಸ್ವಲ್ಪ ಅಫೀಮವನ್ನು ತಂದುಕೊಟ್ಟನು. ಅದನ್ನು ಸಾಸಿವೆ ಎಣ್ಣೆಯಲ್ಲಿ ಹಾಕಿ ಕಾಯಿಸಿ, ಕಾಲಿಗೆ ತಿಕ್ಕಿಕೊಂಡು ಮಲಗಿದೆ. ಬೆಳಗ್ಗೆ ಎಲ್ಲಾ ನೋವು, ಊತ ಹೊರಟುಹೋಗಿತ್ತು.''

ಸಾಧುಗಳ ಬಿಡಾರವು ಏಕಾಂತವಾಗಿರಲಿಲ್ಲ. ಆದ್ದರಿಂದ ಅವರು ವರ್ಷಾಣಾದ ಶ್ರೀಜೀ ಬೆಟ್ಟದ ಮುಂದಿದ್ದ, ಕಾಡಿನಿಂದ ಆವೃತವಾದ ಮತ್ತೊಂದು ಬೆಟ್ಟದ ಖಾಲಿ ಮನೆಯೊಂದರಲ್ಲಿ ಇಳಿದುಕೊಂಡರು. ಮಧುಕರಿ ಮತ್ತು ದರ್ಶನಾದಿಗಳಿಗಾಗಿ ಕೆಳಗೆ ಇಳಿಯುತ್ತಿದ್ದರು.[೬] ಗ್ರಾಮಗಳ ಮೂಲಕ ಹೋಗುವಾಗ ಬೃಂದಾ ವನದ ಸ್ತ್ರೀಯರು ಬಂದು ಬಾಗಿಲಲ್ಲಿ ನಿಲ್ಲುತ್ತಿದ್ದರು. ಬಾಬು ರಾಮ್ ಮಹಾರಾಜರು ಸ್ತ್ರೀಯರನ್ನು ರಾಧಾರಾಣಿಯ ಸಂಗಾತಿ ಗಳೆಂಬ ದೃಷ್ಟಿಯಿಂದ ಅತ್ಯಂತ ವಿನಮ್ರಭಾವದಿಂದ 'ರಾಧೇ ರಾಧೇ' ಎಂದು ಹೇಳಿ ಅಭಿನಂದಿಸುತ್ತಿದ್ದರು. ಅವರೂ ಸಹ ಮಹಾ ರಾಜರನ್ನು ರಾಧಾರಾಣಿಯ ಸಹಚರಿಯೆಂದೇ ಭಾವಿಸಿ 'ಲಾಲೀ ಲಾಲೀ' ಎನ್ನುತ್ತಾ ಬಾಲಸಹಜ ಹುಡುಗಾಟದಿಂದ ಇವರ ಉತ್ತ ರೀಯವನ್ನು ಹಿಡಿದು ಎಳೆದಾಡಿ ನಗುತ್ತಿದ್ದರು. ಬಾಬುರಾಮ್ ಮಹಾರಾಜರು ಆ ಶುದ್ಧಭಾವವನ್ನು ಕಂಡು ಮುಗ್ಧರಾಗಿ ನಮ ಸ್ಕರಿಸುತ್ತಿದ್ದರು, ಅವರಲ್ಲೇ ಒಬ್ಬರಾಗಿಬಿಡುತ್ತಿದ್ದರೋ ಎಂಬಂತೆ.

ವರ್ಷಾಣಾದ ಗಾಳಿ, ನೀರು ಎಷ್ಟು ಆರೋಗ್ಯಕರವಾಗಿತ್ತೆಂದರೆ, ತುಂಬ ಹಸಿವಾಗುತ್ತಿತ್ತು. ಏಕಾದಶಿಯ ದಿನ ಭಕ್ತಮಾಲನು 'ವ್ರಜ ಧಾಮದ ನಿಯಮದಂತೆ ವೈಷ್ಣವ ಬಾಬಾಜಿಗಳೆಲ್ಲ ಉಪವಾಸ ಮಾಡುತ್ತಾರೆ, ಮಧುಕರಿ ಮಾಡಲು ಹೋಗುವುದು ಅಪಮಾನ ಕರ' ಎಂದು ಹೇಳಿದ. ಆದ್ದರಿಂದ ಅಂದು ಅವರೆಲ್ಲರೂ ಏನನ್ನೂ ತಿನ್ನುವುದಿಲ್ಲವೆಂದು ನಿಶ್ಚಯಿಸಿಕೊಂಡರು. ಬೆಳಗ್ಗೆ ಸ್ನಾನಾದಿಗಳನ್ನು ಮುಗಿಸಿ ೧೨ ಗಂಟೆಯವರೆಗೆ ಜಪ-ಧ್ಯಾನದಲ್ಲಿ ಕಳೆದರು. ತದ ನಂತರ ಬಾಬುರಾಮ್ ಮಹಾರಾಜರು ನಗುತ್ತಾ ಕೇಳಿದರು, ''ಏನು ಕಾಳೀಕೃಷ್ಣ? ಹೇಗಿದೆ?'' ಕಾಳೀಕೃಷ್ಣರು ಉತ್ತರಿಸಿದರು, ''ನನಗಂತೂ ಭಯಂಕರ ಹಸಿವಾಗಿದೆ.'' ಬಾಬುರಾಮ್ ಮಹಾ ರಾಜರು, ''ನನಗೂ ಅಷ್ಟೇಪ್ಪ! ಏನು ಮಾಡೋದೀಗ ಹೇಳು'' ಎಂದರು. ಸ್ವಲ್ಪ ಸಮಯದ ನಂತರ ಮತ್ತೆ ಹೇಳಿದರು,''ಇನ್ನು ತಡೆಯಲು ಸಾಧ್ಯವಿಲ್ಲ. ನಡೆ, ಬೈರಾಗಿಗಳ ಬಿಡಾರಕ್ಕೆ! ಏನಾದರೂ ಸ್ವಲ್ಪ ಸಿಗುತ್ತೋ ಇಲ್ಲವೋ ನೋಡೋಣ!'' ಬಿಡಾರಕ್ಕೆ ಹೋಗಿ ಸಾಧುಗಳನ್ನು 'ರಾಧೇ ರಾಧೇ' ಎಂದು ಅಭಿನಂದಿಸಿ ಕುಳಿತರು. ಸ್ವಲ್ಪ ಹೊತ್ತು ಮಾತುಕತೆಯಾಡಿದ ನಂತರ ಬಾಬುರಾಮ್ ಮಹಾ



ಶ್ರೀರಾಧೆಯ ಮಂದಿರ, ವರ್ಷಾಣಾ (ರಾಧೆಯ ಜನ್ಮಸ್ಥಳ)

ರಾಜರು, ''ಬಹುತ್ ಭೂಕ್ ಲಗಾ, ಕುಛ್ ಖಿಲಾನಾ ಸಕತೇ ಹೋ?'' (ತುಂಬ ಹಸಿವಾಗಿದೆ. ಏನಾದರೂ ನೀಡಲು ಸಾಧ್ಯವೆ?) ಎಂದರು. ಅದನ್ನು ಕೇಳಿದ ಅವರು 'ಜರೂರ್ ಮಹಾರಾಜ್, ಅಭೀ ಬನಾ ದೇತಾ' (ಖಂಡಿತ ಮಹಾರಾಜ್ ಈಗಲೇ ಮಾಡಿ ಕೊಡುವೆ) ಎಂದರು. ಅರ್ಧಗಂಟೆಯೊಳಗಾಗಿ ಚಪಾತಿ ಮತ್ತು ಸೊಪ್ಪಿನ ಝೋಲನ್ನು ತಯಾರಿಸಿಕೊಟ್ಟರು. ಅರ್ಧ ಇಂಚು ದಪ್ಪ, ಹತ್ತು ಇಂಚಿನಷ್ಟು ವ್ಯಾಸವುಳ್ಳ ಆರು ಬಿಸಿಬಿಸಿ ಚಪಾತಿಗಳು; ಹಸಿದ ಬಾಯಿಗೆ ಅಮೃತದಂತಿತ್ತು. ಬಾಬುರಾಮ್ ಮಹಾರಾಜರು ಒಂದೂವರೆ ಚಪಾತಿ ತಿಂದರು, ಉಳಿದ ನಾಲ್ಕೂವರೆ ಚಪಾತಿ ಗಳನ್ನು ಕಾಳೀಕೃಷ್ಣರೇ ಉಡಾಯಿಸಿದರು. ಹಸಿದ ಬಾಯಿಗೆ ಅಮೃತವೆರೆದಂತಾಯಿತು. ಹಸಿವು ಇಂಗಿದ ಮೇಲೆ ವಿಶ್ರಾಂತಿ ಗಾಗಿ ತಾವು ಇಳಿದುಕೊಂಡಿದ್ದ ಮನೆಗೆ ಹಿಂದಿರುಗಿ ಅವರಂದು ಕೊಂಡರು, 'ಆಯ್ತಪ್ಪ, ಇವತ್ತಿನ ಮಟ್ಟಿಗೆ ನಿಶ್ಚಿಂತೆ' ಅಂತ. ಆದರೆ ಸಂಜೆಯಾಗುತ್ತಿದ್ದಂತೆಯೇ ಇಬ್ಬರಿಗೂ ವಿಪರೀತ ಹಸಿವು! ಮತ್ತೆ ಭಕ್ತಮಾಲನಿಗೆ ಹೇಳಬೇಕಾಯಿತು, 'ಹೋಗು ನೋಡೋಣ, ಏನಾದರೂ ಸ್ವಲ್ಪ ಭಿಕ್ಷೆ ಸಿಗುತ್ತೋ ಅಂತ.' ಭಕ್ತಮಾಲನು ಒಂದು ಗಂಟೆಯ ನಂತರ ಒಂದು ಜೋಳಿಗೆ ತುಂಬ ಭಿಕ್ಷೆ ತುಂಬಿಕೊಂಡು ಬಂದ. ಅದನ್ನು ತಿಂದ ನಂತರವೇ ಇವರಿಬ್ಬರ ಜಠರಾನಲ ಶಾಂತ ವಾಯಿತು!

ಮತ್ತೊಮ್ಮೆ ಮಧುಕರಿಯ ವೇಳೆ ನಡೆದ ಘಟನೆಯೊಂದರ ನೆನಪು: ''ಒಂದು ದಿನ ಸಂಜೆಯ ನಂತರ ಒಂದು ಗ್ರಾಮಕ್ಕೆ ಹೊಕ್ಕಾಗ, ಒಬ್ಬ ಗೃಹಸ್ಥನ ಧಾನ್ಯದ ಉಗ್ರಾಣಕ್ಕೆ ಬೆಂಕಿ ಹತ್ತಿ ಕೊಂಡು, ಎಲ್ಲ ಭಸ್ಮವಾಗಿ, ಎಲ್ಲರೂ ಅತ್ತು ದುಃಖಿಸುತ್ತಿದ್ದುದನ್ನು ಕಂಡೆ. ನಾವು ಸ್ವಲ್ಪ ಹೊತ್ತು ನಿಂತಿದ್ದು, ಇನ್ನೇನು ಹೊರಡುವು ದರಲ್ಲಿದ್ದೆವು. ಅದನ್ನು ಕಂಡ ಮನೆಯ ಯಜಮಾನ ನಮ್ಮನ್ನು ಕರೆದು, ಕೈಜೋಡಿಸಿ, ದೈನ್ಯತೆಯಿಂದ, ''ಮಹಾರಾಜ್ ನಾವು ಅದೆಷ್ಟು ಪಾಪ ಮಾಡಿದ್ದೆವೋ ಏನೋ, ಅದರ ಫಲವಾಗಿ ಈ ರೀತಿ ಸರ್ವನಾಶವಾಯಿತು. ಇದರ ಮೇಲೆ ನೀವು ಸಾಧುಗಳು; ಭಿಕ್ಷೆ ತೆಗೆದುಕೊಳ್ಳದೆ ಹಿಂತಿರುಗಿದರೆ ಇನ್ನೂ ವಿಷಮ ವಿಪತ್ತು ಕಾದಿ ರುತ್ತದೆ. ನೀವು ಕೃಪೆಯಿಟ್ಟು, ಸ್ವಲ್ಪ ಹೊತ್ತು ಇಲ್ಲೇ ಇರಿ. ನಾವು ರೊಟ್ಟಿ ಮಾಡಿ ತರುವೆವು'' ಎಂದ. ನಾವು ಎಷ್ಟು ಬೇಡವೆಂದರೂ ಕೇಳಲೇ ಇಲ್ಲ, ರೊಟ್ಟಿಯನ್ನು ತಯಾರಿಸಿಯೇ ಕೊಟ್ಟರು.''

---

೬ ಭಕ್ತಮಾಲನು, 'ಎಲ್ಲರೂ ಏಕೆ ಕಷ್ಟಪಡಬೇಕು? ನಾನೇ ನಿಮಗೂ ಭಿಕ್ಷೆ ತರು ತ್ತೇನೆ' ಎಂದು ಬಹಳ ಬೇಡಿಕೊಂಡ. ಆಗಿನಿಂದ ಆತನೇ ಮಧುಕರಿ ಮಾಡಿ ತರು ತ್ತಿದ್ದ, ಎಲ್ಲರೂ ಅದನ್ನು ಸ್ವೀಕರಿಸುತ್ತಿದ್ದರು.

ವರ್ಷಾಣಾದಿಂದ ಹೊರಟು ಈ ಮೂವರೂ ಸಂಕೇತಗ್ರಾಮ ಮತ್ತು ನಂದಗ್ರಾಮವನ್ನು ನೋಡಿಕೊಂಡು ಬಂದರು. ವರ್ಷಾಣಾ ರಾಧಾರಾಣಿಯ, ಮತ್ತು ನಂದಗ್ರಾಮ ಶ್ರೀಕೃಷ್ಣನ ಜನ್ಮಸ್ಥಾನ. ಇವೆರಡರ ಮಧ್ಯದ ಗ್ರಾಮವೇ 'ಸಂಕೇತ'. ರಾಧಾ-ಕೃಷ್ಣರು ಇಲ್ಲಿಂದಲೇ ಪರಸ್ಪರರಿಗೆ ಸಂಕೇತಗಳನ್ನು ಕಳುಹಿಸುತ್ತಿದ್ದರೆಂದು ಪ್ರತೀತಿ. ಇವರು ಅಲ್ಲಿದ್ದಾಗ 'ಝೂಲನ್ ಉತ್ಸವ' ಬಂದೇ ಬಿಟ್ಟಿತು; ನಂದಿಗ್ರಾಮ ಮತ್ತು ವರ್ಷಾಣಾದ ಸ್ತ್ರೀಪುರುಷರ ನಡುವೆ ನಡೆಯುವ ಕೃತಕ ಯುದ್ಧವನ್ನು ನೋಡಿ ಅವರು ತುಂಬ ಆನಂದಿಸಿದರು. ಪುರುಷರು ಚರ್ಮದ ಕೋಲು ಮತ್ತು ಮಾರುದ್ದದ ಲಾಠಿಯನ್ನೂ, ಸ್ತ್ರೀಯರು ಅದೇ ತರಹದ ಲಾಠಿ ಮತ್ತು ಇಟ್ಟಿಗೆಯ ಚೂರುಗಳನ್ನು ಎಸೆಯುತ್ತ ಯುದ್ಧ ಮಾಡುತ್ತಾರೆ. ವರ್ಷಾಣಾದಲ್ಲಿ ಹೀಗೆ ಅವರು ಒಂದು ತಿಂಗಳನ್ನು ಆನಂದದಿಂದ ಕಳೆದು, ಕಾಲ್ನಡಿಗೆಯಲ್ಲಿ ಗೋವರ್ಧನ ಮತ್ತು ರಾಧಾಕುಂಡಕ್ಕೆ ಹೋದರು. ಬಳಿಕ ಎಕ್ಕಾಗಾಡಿ, ರೈಲಿನ ಮೂಲಕ ವೃಂದಾವನಕ್ಕೆ ಮರಳಿದರು. ಅವರ ನೆನಪಿನಿಂದ:

''ಬೆಳಗಿನಿಂದ ನಡೆದು ಮಧ್ಯಾಹ್ನದ ಹೊತ್ತಿಗೆ ಯಾವುದಾದರೂ ರಾಮಾಯತ ವೈಷ್ಣವ ಸಾಧುಗಳ ಬಿಡದಿಗೆ ತಲುಪುತ್ತಿದ್ದೆ. ಬೇರೆ ಸಾಧುಗಳು, ಅಭ್ಯಾಗತರೊಂದಿಗೆ ಚಪಾತಿ, ದಾಲ್ ಅಥವಾ ಸೊಪ್ಪಿನ ಝೋಲನ್ನು ಪ್ರಸಾದವಾಗಿ ಪಡೆಯುತ್ತಿದ್ದೆ. ರಾತ್ರಿ ಅಂಗಳದಲ್ಲಿದ್ದ ಮರದ ಬುಡದಲ್ಲಿ ಧುನಿಯ ಮುಂದೆ ಕಂಬಳಿ ಹಾಸಿ ನಿದ್ರಿಸುತ್ತಿದ್ದೆ. ಬಿಡದಿಯ ಬಡ ಸಾಧುಗಳು ಅತಿಥಿ ಅಭ್ಯಾಗತರಿಗೆ ಪ್ರೀತಿಯಿಂದ ಉಪಚರಿಸಿ, ಶ್ರದ್ಧಾ-ಭಕ್ತಿಗಳಿಂದ ಉಣಬಡಿಸುವುದನ್ನು ಕಂಡು ನಾನು ಆಶ್ಚರ್ಯಗೊಂಡೆ. ಸಾಧುಗಳನ್ನು ಕಂಡರೆ ಸಾಧುಗಳಿಗೆ ಅದೆಂತಹ ಪ್ರೇಮ, ತಮ್ಮ ಸ್ವಂತದವರೇ ಏನೋ ಎಂಬಂತೆ.''

ಸ್ವಾಮಿ ವಿವೇಕಾನಂದರ ಗುರುಭಾಯಿಗಳಾದ ಬಾಬುರಾಮ್ ಮಹಾರಾಜರು ಬೃಂದಾವನಕ್ಕೆ ಬಂದಿದ್ದಾರೆಂದು ಕೇಳಿ, ರಾಮಸ್ನೇಹಿ[೭] ಎಂಬ ಹೆಸರಿನ ಆಳ್ವಾರಿನ ವೈಷ್ಣವ ಭಕ್ತನೊಬ್ಬನು ಅವರನ್ನು ಭೇಟಿಯಾಗಲು ಬಂದನು. ವಿವೇಕಾನಂದರು ಆಳ್ವಾರಿಗೆ ಹೋಗಿದ್ದಾಗ ಅವರಿಂದ ಪ್ರಭಾವಿತನಾಗಿದ್ದ ಈ ಭಕ್ತನು ಅವರ ಬಗ್ಗೆ ಮಾತನಾಡುತ್ತಾ ಭಾವಪರವಶನಾದ; ಅವನ ಕಣ್ಣಿಂದ ಅಶ್ರುಧಾರೆ ಹರಿಯಲಾರಂಭಿಸಿತು. ಅಲ್ಲಿಯ ಜನ ಸ್ವಾಮೀಜಿಯವರನ್ನು ಆಳವಾಗಿ ಪ್ರೀತಿಸಿದ್ದರು, ಈಗಲೂ ಸಹ ಬಹಳಷ್ಟು ಭಕ್ತರು ಅವರ ಪ್ರೇಮದಿಂದ ಆಕರ್ಷಿತರಾಗುತ್ತಿದ್ದಾರೆ ಎಂದು ರಾಮಸ್ನೇಹಿಯ ಬಾಯಿಂದ ಕೇಳಿದ ಬಾಬುರಾಮ್ ಮಹಾರಾಜರು ಮತ್ತು ಕಾಳೀಕೃಷ್ಣರು ವಿಸ್ಮಯಗೊಂಡರು.

(ಮುಂದುವರಿಯುವುದು)

---

೭ ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಿಂದ ಮರಳಿ ಬಂದ ಮೇಲೆ, ೧೮೯೭ರ ಕೊನೆಯ ಭಾಗದಲ್ಲಿ ಆಳ್ವಾರಿಗೆ ಹೋದರು. ಆಗ ಅವರನ್ನು ಬರಮಾಡಿಕೊಳ್ಳಲು ಅರಮನೆಯ ಹಾಗೂ ಸ್ಥಳೀಯ ಗಣ್ಯ ವ್ಯಕ್ತಿಗಳು ರೈಲ್ವೇ ಸ್ಟೇಷನ್ನಿಗೆ ಬಂದಿದ್ದರು. ಜನಜಂಗುಳಿಯ ಮಧ್ಯೆ ದೂರ ಒಂದೆಡೆ, ಮೂಲೆಯಲ್ಲಿ ಚಿಂದಿ ಬಟ್ಟೆಯನ್ನುಟ್ಟುಕೊಂಡು ಸಂಕೋಚದಿಂದ ನಿಂತಿದ್ದ ಬಡ ರಾಮಸ್ನೇಹಿಯನ್ನು ಕಂಡ ಕೂಡಲೇ ಸ್ವಾಮೀಜಿ, 'ರಾಮಸ್ನೇಹಿ, ರಾಮಸ್ನೇಹಿ' ಎಂದು ಅವನನ್ನು ತಮ್ಮ ಬಳಿಗೆ ಕರೆದರು. ತಮ್ಮ ಪರಿವ್ರಾಜಕ ದಿನಗಳಲ್ಲಿ ಸ್ನೇಹಿತನಾಗಿದ್ದ ಅವನೊಂದಿಗೆ ಅತ್ಯಂತ ಪ್ರೀತಿಯಿಂದ ಮಾತನಾಡತೊಡಗಿದರು ಸ್ವಾಮೀಜಿ. ವಿಶ್ವವಿಜೇತ ಸ್ವಾಮಿ ವಿವೇಕಾನಂದರ ಸಮದರ್ಶಿತ್ವ ಹಾಗೂ ವಿಶಾಲಹೃದಯಕ್ಕೆ ಇದು ಒಂದು ಒಳ್ಳೆಯ ನಿದರ್ಶನವಾಗಿದೆ.

ಮಣ್ಣು ತಿಂದ ಬಾಲಕ ಜಗತ್ತನ್ನೇ ಬೆಳಗಿದ..




ಸಾವಿರಾರು ವರ್ಷಗಳಿಗೆ ಮೊದಲು, ಮಥುರಾಪಟ್ಟಣದ ಕಾರಾಗೃಹದೊಳಗೆ ಒಂದು ಮಗು ಹುಟ್ಟಿತು; ವೃಂದಾವನವೆಂಬ ಒಂದು ಗೊಲ್ಲರ ಹಳ್ಳಿಯಲ್ಲಿ ಅದು ಬೆಳೆಯಿತು. ಕೃಷ್ಣನ ಬಾಲಲೀಲೆಯೊಂದಿಗೆ ಅವನ ದೈವೀ ವ್ಯಕ್ತಿತ್ವವೂ ಪ್ರಕಟಗೊಂಡಿತು. ಗೋಪೀಪ್ರೇಮದ ಮೂಲಕ ಭಕ್ತಿ, ಪ್ರೇಮ, ಭಾವಗಳ ಮಹಾಪೂರವೇ ಹರಿಯಿತು. ಪಾಪ, ಮುಗ್ಧ ತಾಯಿ ಯಶೋದೆ ಮಣ್ಣು ತಿನ್ನುತ್ತಿದ್ದ ಮಗುವನ್ನು ಬೆದರಿಸಿ, ''ಕಳ್ಳ! ಮಣ್ಣು ತಿಂದೆಯಾ? ಬಾಯಿ ತೆರೆ!'' ಎಂದಾಗ ಅದು ಬಾಯಿ ತೆರೆದು ಇಡೀ ಬ್ರಹ್ಮಾಂಡವನ್ನೇ ಅಲ್ಲಿ ತೋರಿಸಿಬಿಡುವುದೆ? ಸಾಂಕೇತಿಕವಾಗಿ ನಡೆದ ಈ ಘಟನೆ ಮುಂದೆ ನಿಜವಾಯಿತು. ಪುಟ್ಟ ಕೃಷ್ಣ ಬೆಳೆದ, ಬೃಹತ್ತಾಗಿ ತನ್ನ ವ್ಯಕ್ತಿತ್ವವನ್ನು ಬೆಳೆಸುತ್ತ ಹೋದ; ವಿಶ್ವವ್ಯಾಪಿಯಾಗಿ ಬೆಳೆದ. ಇಡೀ ವಿಶ್ವವನ್ನೆಲ್ಲ ವ್ಯಾಪಿಸಿದ್ದಲ್ಲದೆ, ಅದನ್ನು ಮೀರಿಯೂ ಹತ್ತು ಅಂಗುಲ, ಇನ್ನಷ್ಟು ದೂರ, ಬಹುದೂರ ವ್ಯಾಪಿಸಿದ.

ಮಥುರೆಯ ರಾಜಕೀಯದಲ್ಲಿ ಏರುಪೇರಾಯಿತು. ದುಷ್ಟ ಕಂಸನನ್ನು ಕೊಂದ, ಅಲ್ಲಿ ಶಾಂತಿ ನೆಲೆಸುವಂತೆ ಮಾಡಿದ. ಮುಂದೆ ಕುರುರಾಜ್ಯದ ಯಾದವೀಕಲಹದಲ್ಲಿ ಕೃಷ್ಣನದು ಪ್ರಧಾನ ಪಾತ್ರವಾಯಿತು. ಇತ್ತ ದ್ವಾರಕೆಯಲ್ಲಿ ತನ್ನವರನ್ನು ನೆಲೆಗೊಳಿಸಬೇಕಾಯಿತು. ಮಗಧರಾಜ್ಯದಲ್ಲೂ ಕ್ರೂರ ಜರಾಸಂಧನ ಅಂತ್ಯ ಕಾಣಿಸಿ, ಅವನಿಂದಾಗಿ ನರಳುತ್ತಿದ್ದ ಸಾವಿರಾರು ಮಂದಿ ಜನರನ್ನೆಲ್ಲ ಬಿಡಿಸಬೇಕಾಯಿತು. ಹೀಗೆ ಉತ್ತರ ಭಾರತದುದ್ದಕ್ಕೂ ಕೃಷ್ಣನ ಕಾರ್ಯಕ್ಷೇತ್ರ ವಿಸ್ತರಿಸಿತು. ಕೃಷ್ಣನ ಜೀವಿತಕಾಲದಲ್ಲೇ ಅವನು ದೇವರೆಂದೂ, ಅವತಾರ ಪುರುಷನೆಂದೂ, ಮಹಾಯೋಗಿಯೆಂದೂ, ಸಾಕ್ಷಾತ್ ಪರಬ್ರಹ್ಮನೆಂದೂ ಪೂಜಿಸಲ್ಪಟ್ಟ. ಅವನ ಕಾಲವಾದ ನಂತರ ಎಲ್ಲ ಎಲ್ಲೆಯನ್ನು ಮೀರಿ ಅವನ ದೈವತ್ವ ವ್ಯಾಪಿಸಿತು. ದಕ್ಷಿಣದ ತಿರುವನಂತಪುರದಿಂದ ಹಿಡಿದು ಉತ್ತರದ ಬದರೀನಾಥ, ನೇಪಾಳದವರೆಗೂ, ಪಶ್ಚಿಮದ ದ್ವಾರಕೆಯಿಂದ ಹಿಡಿದು ಪೂರ್ವದ ಮಣಿಪುರದವರೆಗೂ ಲೆಕ್ಕವಿಲ್ಲದಷ್ಟು ಕಡೆ ಅವನ ದೇವಾಲಯಗಳು ತುಂಬಿವೆ. ಇವೆಲ್ಲಕ್ಕಿಂತಲೂ, ಕೃಷ್ಣನ ಶ್ರೀಮುಖದಿಂದ ಹೊರಬಂದ ಗೀತೆ ಕೋಟಿಕೋಟಿ ಮಾನವರ ಹೃದಯಗುಹೆಯನ್ನು ಹೊಕ್ಕು, ಅಂಧಕಾರದಲ್ಲಿ ದಿವ್ಯಜ್ಯೋತಿಯಾಗಿ ಬೆಳಗುತ್ತಿದೆ.

ಉಪಯುಕ್ತ ಗ್ರಂಥ: ಶಾಂಕರ ಭಾಷ್ಯಗಳ ಉದ್ಧರಣೆಗಳ ಕೋಶ

ಲೋಕದಲ್ಲಿ ಅನುಭವದಲ್ಲಿರುವ ದುಃಖಬಾಧೆಗಳಿಗೆ ವೈದ್ಯ ಆರ್ಥಿಕ ಸಂಘ ಸಂಸ್ಥೆ – ಹೀಗೆ ಲೌಕಿಕ ಪರಿಹಾರಗಳಿವೆ, ಆದರೆ ಅವು ತಾತ್ಕಾಲಿಕ, ಆತ್ಯಂತಿಕ ಪರಿಹಾರಗಳಲ್ಲ. ಇವುಗಳಿಗೆ ಕಾರಣವೇನು? ಇವಕ್ಕೆ ಆತ್ಯಂತಿಕ ಪರಿಹಾರ ಇದೆಯೆ? ಅದು ಹೇಗೆ ಸಾಧ್ಯವಾಗುತ್ತದೆ, ಈ ಎಲ್ಲ ವಿಚಾರಗಳ ಚಿಂತನ ಮಂಥನ ಪ್ರಯೋಗಗಳ ಫಲವಾಗಿ ಹುಟ್ಟಿಕೊಂಡ ಶಾಸ್ತ್ರಗಳೇ ದರ್ಶನಗಳು. ಅವೆಲ್ಲವೂ ಲೋಕದ ವಿವಿಧ ಬಗೆ ದುಃಖಗಳ ಆತ್ಯಂತಿಕ ನಿವಾರಣೆಯೇ ಶಾಸ್ತ್ರಗಳ ಮೂಲ ಉದ್ದೇಶ್ಯ ಎಂದು ಘೋಷಿಸುತ್ತವೆ. ಇವುಗಳಲ್ಲಿ ವೇದಾಂತ ದರ್ಶನಗಳು ಸೇರ್ಪಡೆಯಾಗುತ್ತವೆ. ಇವು ತಮ್ಮ ಸಿದ್ಧಾಂತಗಳನ್ನು ಶ್ರೌತ ಸ್ಮಾರ್ತ ನ್ಯಾಯ ಮೂಲ ಆಧಾರಗಳನ್ನವಲಂಬಿಸಿ ಸ್ಥಾಪಿಸಿವೆ. ಈ ಮೂಲ ಆಧಾರಗಳನ್ನು ಪ್ರಸ್ಥಾನ ತ್ರಯ ಎನ್ನುವರು. ಜೀವಿ ತನ್ನ ದುಃಖದಿಂದ ಬಿಡುಗಡೆ ಹೊಂದಲು ಮುಟ್ಟಬೇಕಾದ ಆತ್ಯಂತಿಕ ಗುರಿಯೆಡೆಗೆ ಸಾಗಬೇಕಾದ ಮಾರ್ಗ(ಪ್ರಸ್ಥಾನ)ಗಳನ್ನು ಇವು ತಿಳಿಸುತ್ತವೆ. ಶ್ರೌತ ಮೂಲ–ಉಪನಿಷತ್ತುಗಳು, ಸ್ಮಾರ್ತಮೂಲ– ಭಗವದ್ಗೀತೆ, ನ್ಯಾಯ ಮೂಲ–ಬ್ರಹ್ಮಸೂತ್ರ, ಇವು ಪ್ರಸ್ಥಾನತ್ರಯ. ಅದ್ವೈತ ದರ್ಶನ ಪ್ರವರ್ತಕರಾದ ಶ್ರೀಶಂಕರಾಚಾರ್ಯರು ಇವುಗಳಿಗೆ ಭಾಷ್ಯವನ್ನು ಬರೆಯುವುದರ ಮೂಲಕ ತಮ್ಮ ಸಿದ್ಧಾಂತ ತತ್ತ್ವಗಳನ್ನು ಪ್ರತಿಪಾದಿಸಿದ್ದಾರೆ. ಊಹಿಸಲೂ ಕಷ್ಟವಾಗುವಂತಹ ಅಧ್ಯಾತ್ಮ ತತ್ತ್ವಗಳನ್ನು ತಮ್ಮ ಭಾಷ್ಯದಲ್ಲಿ ಬಹಳ ಸರಳವಾಗಿ ಸುಗಮವಾಗಿ ತಿಳಿಸಿದ್ದಾರೆ. ವಿಚಾರ ವಿವರಣೆಯ ಅಗತ್ಯವನ್ನನುಸರಿಸಿ ಸಣ್ಣ ದೊಡ್ಡ ವಾಕ್ಯಗಳನ್ನು ರಚಿಸಿದ್ದಾರೆ. ಪ್ರಸ್ಥಾನತ್ರಯಗಳು ಭಾಷ್ಯ ಸಹಾಯವಿಲ್ಲದೆ ಅರ್ಥವಾಗುವಂತಹುದಲ್ಲ.



Title : A Collection from Sankara's Commentaries on the Prasthana-Traya

Author : Swami Kritarthananda

Publisher : Ramakrishna Mission Institute of Culture, Golpark, Kolkata - 700 029

Pages : 928 *Price* : 600/-

ಈ ಪ್ರಸ್ಥಾನತ್ರಯಗಳೇ ಅಗಾಧ ಸಾಗರ, ಇನ್ನು ಇವುಗಳ ಅರ್ಥವನ್ನು ಸ್ಪಷ್ಟಪಡಿಸುವ ವಿವರಣಾತ್ಮಕ ಭಾಷ್ಯಗಳ ವ್ಯಾಪ್ತಿ ಇನ್ನಷ್ಟು ವ್ಯಾಪಕವಿರಬಹುದು! ಕಲ್ಪಿಸಲೂ ಸಾಧ್ಯವಿಲ್ಲ. ಅಂತಹ ಭಾಷ್ಯಗಳ ಅಧ್ಯಯನಕ್ಕೆ ವ್ಯಕ್ತಿ ತನ್ನ ಸಂಪೂರ್ಣ ಜೀವಿತವನ್ನೇ ಮುಡಿಪಾಗಿಟ್ಟರೂ ಅವುಗಳ ಆಮೂಲಾಗ್ರ ಅಧ್ಯಯನ ಅಸಂಭವವೇನೋ! ಆ ಎಲ್ಲವನ್ನು ಓದಿ ಅರ್ಥೈಸಿಕೊಂಡು ಮನನ ಮಾಡಿ ನೆನಪಿನಲ್ಲಿಟ್ಟುಕೊಳ್ಳುವುದು ಭಗೀರಥ ಸಾಹಸವೇ ಸರಿ. ಹಾಗಾಗಿ ಪೂಜ್ಯ ಸ್ವಾಮಿ ಕೃತಾರ್ಥಾನಂದರು ಅವುಗಳ ಹೃದಯಭೂತವಾದ, ಅತ್ಯಗತ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶಗಳನ್ನು ಕ್ರೋಡೀಕರಿಸಿ ಒಂದೆಡೆ ಸಂಗ್ರಹಿಸುವ ಅಗತ್ಯತೆಯನ್ನು ಮನಗಂಡರು. ಅದರ ಫಲರೂಪವೇ ಈ ಕೃತಿ, 'A Collection from Sankara's Commentaries on the Prasthana-Traya'


ಅದ್ವೈತವೇದಾಂತವನ್ನು ಅಧ್ಯಯನ ಮಾಡುವ ಕುತೂಹಲಿಗಳಿಗೆ, ಸಂಶೋಧಕರಿಗೆ ಸುಲಭಲಭ್ಯವಾದ ಅತಿಪ್ರಮುಖ ಪರಾಮರ್ಶನ ಗ್ರಂಥ ಇದಾಗಿದೆ. ಇದು ಅದ್ವೈತ ವೇದಾಂತ ತತ್ತ್ವಗಳ ಕುರಿತಾದ ವಿಶಿಷ್ಟ ಸಂಶೋಧನೆಗಳಿಗೆ ಪ್ರೇರಕವೂ ಸಹಾಯಕವೂ ಆಗಲಿ ಎಂಬುದು ಲೇಖಕರ ಹೃತ್ಪೂರ್ವಕ ಸವಿನಯ ಭಾವನೆ. ಕೃತಿಕಾರರೇ ಹೇಳುವಂತೆ ೯೦೦ ಪುಟಗಳಿಗೂ ಮೀರಿದ ಈ ಬೃಹದ್ಗ್ರಂಥ ಸುಮಾರು ೨೫೦೦ ವಾಕ್ಯ, ವಾಕ್ಯಸಮೂಹಗಳನ್ನು ಒಳಗೊಂಡಿದೆ. ಇಲ್ಲಿ ಆಯ್ಕೆ ಗೊಂಡಿರುವ ಸಿದ್ಧಾಂತಪ್ರತಿಪಾದಕಗಳಾದ ಲಕ್ಷಣಾತ್ಮಕ ವಾಕ್ಯಗಳು, ಪ್ರಮಾಣ ವಾಕ್ಯಗಳು, ವಿವರಣಾತ್ಮಕ ವಾಕ್ಯಗಳ ಸ್ವರೂಪದಲ್ಲಿವೆ. ಇವು ಸಿದ್ಧಾಂತದ ಸ್ವರೂಪವನ್ನರಿಯಲು ಸಹಾಯಕಗಳಾಗುವುವು. ಇವುಗಳ ಆಧಾರದ ಮೇಲೆ ಅದ್ವೈತ ಸಿದ್ಧಾಂತದ ವಿಭಿನ್ನ ಆಯಾಮಗಳು, ಅವುಗಳನ್ನು ಗಮನಿಸಬಹುದಾದ ವಿಶಿಷ್ಟ ದೃಷ್ಟಿಕೋನಗಳು, ಸಂಶೋಧಕನಿಗೆ ದೊರಕುತ್ತವೆ. ಈ ವಾಕ್ಯಗಳ ಸಹಾಯದಿಂದ ತತ್ತ್ವಜಿಜ್ಞಾಸು, ವಿಭಿನ್ನ ದೃಷ್ಟಿಕೋನಗಳಿಂದ ಅದ್ವೈತ ತತ್ತ್ವವನ್ನು ಕುರಿತು ಚಿಂತಿಸಲು ಚರ್ಚಿಸಲು ಅದರ ವ್ಯಾಪಕತೆ ವಿಸ್ತಾರ ಹರಹನ್ನು ಮನಗಾಣಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಲೇಖಕರು ಈ ಬೃಹದ್ಗ್ರಂಥದಲ್ಲಿ ಇಂತಹ ವಾಕ್ಯಗಳನ್ನೇ ಸಂಗ್ರಹಿಸಲು ಪ್ರಯತ್ನಿಸಿರುವರು.

ಇದರಲ್ಲಿ ಒಟ್ಟು ೧೪ ಅಧ್ಯಾಯಗಳಿವೆ. ಸ್ಮೃತಿಪ್ರಸ್ಥಾನಕ್ಕೆ ಸೇರಿದ ಭಗವದ್ಗೀತಾಭಾಷ್ಯದ ३४೮ ವಾಕ್ಯಗಳಿವೆ, ಶ್ರುತಿಪ್ರಸ್ಥಾನಕ್ಕೆ ಸೇರಿದ ಪ್ರಧಾನವಾದ ಹನ್ನೆರಡು ಉಪನಿಷತ್ತುಗಳ ಭಾಷ್ಯದ ಸುಮಾರು ೧೫೦೦ ವಾಕ್ಯಗಳಿವೆ. ನ್ಯಾಯಪ್ರಸ್ಥಾನ ವಿಭಾಗಕ್ಕೆ ಸೇರಿದ ಬ್ರಹ್ಮಸೂತ್ರಭಾಷ್ಯಕ್ಕೆ ಸಂಬಂಧಿಸಿ ೫೯೪ ವಾಕ್ಯಗಳಿವೆ. ಮೊದಲು ಆಯ್ಕೆ ಮಾಡಿರುವ ವಾಕ್ಯಗಳ ಸಂಸ್ಕೃತ ಭಾಷೆಯ ಅವತರಣಿಕೆಯನ್ನು ದೇವನಾಗರೀ ಲಿಪಿಯಲ್ಲಿ ಕೊಡಲಾಗಿದೆ, ಅವುಗಳ ಮೂಲ ಆಕರವನ್ನು ಸೂಚಿಸಲಾಗಿದೆ. ಆ ನಂತರ ಆ ವಾಕ್ಯಗಳ ಇಂಗ್ಲಿಷ್ ರೂಪಾಂತರ ಕೊಟ್ಟು ಅವುಗಳ ಇಂಗ್ಲಿಷ್ ಭಾಷಾಂತರವನ್ನೂ ನೀಡಲಾಗಿದೆ. ಜಿಜ್ಞಾಸು ಹಾಗೂ ಸಂಶೋಧಕರಿಗೆ ತಾವು ಪರಾಮರ್ಶಿಸಬೇಕೆಂದೆನಿಸುವ ಪದ, ಪದಜಾಲ, ವಾಕ್ಯಜಾಲಗಳು ಸುಲಭವಾಗಿ ದೊರಕಲೆಂಬ ಉದ್ದೇಶದಿಂದ ಅಕಾರಾದಿ ಪಟ್ಟಿಯನ್ನು ಎರಡು ವಿಸ್ತಾರವಾದ ಪರಿವಿಡಿಗಳಲ್ಲಿ ವಿಭಜಿಸಿ ಕೊಡಲಾಗಿದೆ. ಮೊದಲ ಪರಿವಿಡಿ ಸಂಸ್ಕೃತ (ಭಾಷ್ಯದ ಮೂಲ) ವಾಕ್ಯಗಳ ಪಟ್ಟಿಗೆ ಸೀಮಿತವಾಗಿದ್ದರೆ ಎರಡನೆಯ ಪರಿವಿಡಿ ಭಾಷ್ಯವಾಕ್ಯಗಳ ಅರ್ಥಜ್ಞಾನಕ್ಕೆ ಸಹಾಯಕವಾಗುವ ಇಂಗ್ಲಿಷ್ ಪದಗಳ (catch word) ಪಟ್ಟಿಯನ್ನು ಒಳಗೊಂಡಿದೆ.

ಅತ್ಯಂತ ವ್ಯಾಪಕವಾದ ಭಾಷ್ಯಸಾಹಿತ್ಯವನ್ನು ಪೂಜ್ಯ ಸ್ವಾಮಿ ಕೃತಾರ್ಥಾನಂದರು ಅಪಾರ ಶ್ರಮವಹಿಸಿ, ಅತ್ಯಮೂಲ್ಯವಾದ ಪವಿತ್ರ ಸಮಯವನ್ನು ವಿನಿಯೋಗಿಸಿ ವಿಶೇಷವಾದ ಮುತುವರ್ಜಿಯಿಂದ ಅರ್ಥಪೂರ್ಣವಾಗಿ ಸಂಗ್ರಹಿಸಿದ್ದಾರೆ. ಅವರ ಈ ಪ್ರಯತ್ನ ಅತ್ಯಂತ ಅಭಿನಂದನೀಯ. ಇದಕ್ಕೆ ಆಧ್ಯಾತ್ಮಿಕ ಜ್ಞಾನ-ಪಿಪಾಸು, ಜನತೆ ಸ್ವಾಮೀಜಿಯವರಿಗೆ ಎಷ್ಟು ಋಣಿಯಾಗಿದ್ದರೂ ಸಾಲದು. ಅನೇಕ ಮಂದಿ ಸಾಧಕರ ಕೈಸೇರಿ ಇದರ ಉಪಯೋಗವನ್ನು ಅಧಿಕ ಸಂಖ್ಯೆಯ ಜನರು ಪಡೆದುಕೊಳ್ಳುವಂತಾಗಬೇಕು, ಆಗ ಸ್ವಾಮೀಜಿಯವರ ಪರಿಶ್ರಮ ಸಾರ್ಥಕವಾಗುತ್ತದೆ.

– ಡಾ. ಕೆ.ಎಲ್.ಪ್ರಸನ್ನಾಕ್ಷೀ

'ವಿಶ್ವಧರ್ಮ' – ಸ್ವಾಮಿ ವಿವೇಕಾನಂದರ ಸಾಕ್ಷ್ಯಚಿತ್ರ



ಚಿತ್ರಕಥೆ ಹಾಗೂ ನಿರೂಪಣಾ ಸಾಹಿತ್ಯ: **ಸಂಪಿಗೆ ತೋಂಟದಾರ್ಯ, ಎಚ್.ಟಿ. ನಾಗೇಂದ್ರ**
ಸಂಗೀತ: **ಮನೋರಂಜನ್ ಪ್ರಭಾಕರ್**
ನಿರ್ದೇಶನ: **ಎಚ್.ಟಿ. ನಾಗೇಂದ್ರ**
ಪ್ರಕಾಶಕರು: **SSEF, ಬೆಂಗಳೂರು**
ಬೆಲೆ : **ಉಚಿತ ವಿತರಣೆ**

ಬೆಂಗಳೂರಿನ ಸಾಮಾಜಿಕ-ಆಧ್ಯಾತ್ಮಿಕ ಶೈಕ್ಷಣಿಕ ಚಲನಚಿತ್ರ (**SSEF**) ಸಂಸ್ಥೆಯು ಸ್ವಾಮಿ ವಿವೇಕಾನಂದರ ವಿಚಾರಧಾರೆಗಳನ್ನು ಆಧರಿಸಿದ 'ವಿಶ್ವಧರ್ಮ' ಎಂಬ ಸಾಕ್ಷ್ಯಚಿತ್ರವನ್ನು ಹೊರತಂದಿದೆ. ಎರಡು ಡಿವಿಡಿ.ಗಳಲ್ಲಿ 'ಸಾಕ್ಷಾತ್ಕಾರ' ಹಾಗೂ 'ಸಂಪ್ರದಾಯ' ಎಂಬ ಎರಡು ಭಾಗಗಳಲ್ಲಿ ನಿರ್ಮಿಸಲಾದ ಈ ಸಾಕ್ಷ್ಯಚಿತ್ರದಲ್ಲಿ ಹಲವು ಮಾಧ್ಯಮಗಳನ್ನು ಅಳವಡಿಸಿಕೊಂಡು ಸ್ವಾಮೀಜಿ ಸಂದೇಶಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸುವ ಕಾರ್ಯವನ್ನು ಸಮರ್ಥವಾಗಿ ಮಾಡಲಾಗಿದೆ. ವಿವಿಧ ಬಗೆಯ ಸನ್ನಿವೇಶಗಳನ್ನು ನೈಜ ಚಿತ್ರೀಕರಣಗಳೊಂದಿಗೆ ಪ್ರಸ್ತುತಪಡಿಸಲಾಗಿದ್ದು, ನಡುನಡುವೆ ಅನಿಮೇಷನ್, ರೇಖಾಚಿತ್ರ, ಸ್ಥಿರಚಿತ್ರಗಳು, ಗ್ರಾಫಿಕ್ಸ್‌ಗಳನ್ನೂ ಅಗತ್ಯವಿದ್ದಂತೆ ಅಳವಡಿಸಲಾಗಿದೆ. ಹಿನ್ನೆಲೆ ಸಂಗೀತ, ಸೂಕ್ತ ಹಾಡುಗಳು ಪರಿಣಾಮಕಾರಿಯಾದ ಭಾವವನ್ನು ಹೊರಹೊಮ್ಮಿಸುತ್ತವೆ. ಒಟ್ಟಿನಲ್ಲಿ ಇದೊಂದು ವಿನೂತನ ಶೈಲಿಯ, ಗುಣಮಟ್ಟದ ಸಾಕ್ಷ್ಯಚಿತ್ರವಾಗಿದೆ.

ಮೊದಲ ಭಾಗವಾದ 'ಸಾಕ್ಷಾತ್ಕಾರ' ಡಿವಿಡಿ.ಯಲ್ಲಿ ಸ್ವಾಮಿ ವಿವೇಕಾನಂದರ ಜೀವನ-ಉಪದೇಶಗಳ ಹಿನ್ನೆಲೆ, ಅವರ ಪರಿವ್ರಾಜಕ ಜೀವನ, ಅವರ ಆಧ್ಯಾತ್ಮಿಕ ಅನುಭೂತಿಗಳಿಗೆ ಹಿನ್ನೆಲೆಯಾಗಿದ್ದ ಭಾರತೀಯ ಸನಾತನ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆ, ವೇದ-ಉಪನಿಷತ್ತುಗಳಲ್ಲಿ ಮೂಡಿಬಂದ ಸತ್ಯದ ಸಾಕ್ಷಾತ್ಕಾರ ಇವುಗಳ ವಿವರಣೆಯಿದೆ. ಮುಂದೆ, ಇತಿಹಾಸದುದ್ದಕ್ಕೂ ಮುಂದುವರಿದ ಧಾರ್ಮಿಕ ವಾಹಿನಿ ಹೇಗೆ ಸ್ವಾಮಿ ವಿವೇಕಾನಂದರ ಪರಿವ್ರಾಜಕ ಜೀವನದುದ್ದಕ್ಕೂ ಮಾರ್ದನಿಸಿತ್ತು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ.

ಎರಡನೇ ಭಾಗವಾದ 'ಸಂಪ್ರದಾಯ' ಡಿವಿಡಿ.ಯಲ್ಲಿ ಹಿಂದಿನ ಭಾಗದಲ್ಲಿ ಚಿತ್ರಿಸಲಾದ ವಿಷಯಗಳ ಮುಂದುವರಿಕೆಯಿದೆ. ಗಹನವಾದ ದರ್ಶನ, ತತ್ತ್ವ ಹಾಗೂ ಆಧ್ಯಾತ್ಮಿಕ ವಿಚಾರಗಳು ಸ್ಮೃತಿ, ಪುರಾಣ, ವಿವಿಧ ಆಚರಣೆ-ಸಂಪ್ರದಾಯಗಳ ಮೂಲಕ ಹೇಗೆ ಜನಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಾಗಿ ಬಂದಿದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಡಿವಿಡಿ.ಯ ಕೊನೆಯಲ್ಲಿ ಸ್ವಾಮಿ ವಿವೇಕಾನಂದರ ಪ್ರವಚನ, ಉಪದೇಶಗಳ ಮೂಲಕ ಈ ಸಾರ್ವತ್ರಿಕ ಧರ್ಮವು ಹೇಗೆ ಆಧುನಿಕ ಜಗತ್ತಿಗೆ ಅನ್ವಯವಾಗುವಂತೆ ಶಕ್ತಿಶಾಲಿಯಾಗಿ ಪ್ರಕಟಗೊಂಡಿದೆ ಎಂಬುದನ್ನು ವಿವಿಧ ಉದ್ಧರಣೆ, ಚಿತ್ರಣಗಳೊಂದಿಗೆ ನೀಡಲಾಗಿದೆ.

ಹೀಗೆ ಈ ಎರಡು ಡಿವಿಡಿ.ಗಳ ಮೂಲಕ ಸ್ವಾಮಿ ವಿವೇಕಾನಂದರ ಜೀವನ, ಸಂದೇಶ; ಯೋಗ, ಸಾಧನೆ, ಧರ್ಮ, ಶಾಸ್ತ್ರ, ಸಂಸ್ಕೃತಿಯೇ ಮೊದಲಾದ ನಮ್ಮ ಆಧ್ಯಾತ್ಮಿಕ ಪರಂಪರೆಯ ಪ್ರಧಾನ ಅಂಶಗಳನ್ನು ಪರಿಚಯಿಸಲಾಗಿದೆ. ಚಲನಚಿತ್ರ, ರೇಖಾಚಿತ್ರ, ಸಂಗೀತವೇ ಮೊದಲಾದ ಹಲವು ಮಾಧ್ಯಮಗಳನ್ನು ಇಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ. ಸುಮಾರು ೨ ಗಂಟೆ ಅವಧಿಯ ಈ ಡಿವಿಡಿ.ಗಳಲ್ಲಿ ಸಮಗ್ರ ಭಾರತದ ಪರಂಪರೆ ಹಾಗೂ ಸ್ವಾಮೀಜಿ ಜೀವನ, ಧ್ಯೇಯ, ಆದರ್ಶಗಳನ್ನು ಒಳಗೊಳ್ಳಲು ಇದರ ನಿರ್ಮಾಪಕರು ವಿಶೇಷ ಶ್ರಮವಹಿಸಿ ದುಡಿದಿದ್ದಾರೆ. ಈ ಸಾಕ್ಷ್ಯಚಿತ್ರದ ನಿರ್ಮಾಣದ ಹಿಂದೆ ವಾಣಿಜ್ಯ ಉದ್ದೇಶಗಳಿಲ್ಲದೆ, ಕೇವಲ ಸ್ವಾಮಿ ವಿವೇಕಾನಂದರ ಧ್ಯೇಯಾದರ್ಶಗಳ ಪ್ರಚಾರವಷ್ಟೇ ಇರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ಅದಕ್ಕನುಗುಣವಾಗಿ, ಈ ಸಾಕ್ಷ್ಯಚಿತ್ರಕ್ಕೆ ಯಾವುದೇ ಬೆಲೆ ನಿಗದಿ ಮಾಡದೆ, 'ಉಚಿತ ವಿತರಣೆ'ಯಾಗಿ ನೀಡಲಾಗುವುದು. **ಆಸಕ್ತರು ಸಂಪರ್ಕಿಸಬೇಕಾದ ವಿಳಾಸ :** ಶ್ರೀ ಹೆಚ್.ಟಿ. ನಾಗೇಂದ್ರ, ಫೋನ್ ನಂ: 9341219116, 9535383588; ಇ-ಮೇಲ್ : nagendra.ht@gmail.com

ಭಕ್ತ ಕವಿ ಜಯದೇವ

ಸ್ವಾಮಿ ವೀರೇಶಾನಂದ



ಲಲಿತಲವಂಗಲತಾಪರಿಶೀಲನ ಕೋಮಲ ಮಲಯ ಸಮೀರೇ
ಮಧುಕರನಿಕರಕರಂಬಿತಕೋಕಿಲ ಕೂಜಿತ ಕುಂಜಕುಟೀರೇ ।
ವಿಹರತಿ ಹರಿರಿಹ ಸರಸ ವಸಂತೇ ನೃತ್ಯತಿ
ಯುವತಿಜನೇ ನ ಸಮಂ ಸಖಿ! ವಿರಹಿಜನಸ್ಯ ದುರಂತೇ ॥

'ಲವಂಗದ ಬಳ್ಳಿಗಳ ಸಂಪರ್ಕದಿಂದ, ಕೋಮಲವಾದ ಮಲಯ ಮಾರುತದಿಂದ, ಲತಾಮಂಟಪಗಳಲ್ಲಿ ಝೇಂಕರಿಸುತ್ತಿರುವ ದುಂಬಿಗಳ ಸಮೂಹದಿಂದ, ಕೋಗಿಲೆಗಳ ಕೂಜನದಿಂದ ಈ ವಸಂತಕಾಲ ರಮಣೀಯವಾಗಿದೆ. ವಿರಹಿಗಳಿಗೆ ದುಃಖ ನೀಡುವ ಈ ವಸಂತದಲ್ಲಿ ಶ್ರೀಕೃಷ್ಣನು ಗೋಪಿಯರೊಡನೆ ನರ್ತಿಸುತ್ತ ಕ್ರೀಡಿಸುತ್ತಿದ್ದಾನೆ.'

(ಗೀತಗೋವಿಂದ, ಸರ್ಗ ೧, ಅಷ್ಟಪದಿ ೩)

—ಮೇಲಿನ ಮನೋಹರ ಸಾಲುಗಳು 'ಗೀತಗೋವಿಂದ' ಎಂಬ ಕಾವ್ಯಗ್ರಂಥದಿಂದ ಆರಿಸಿಕೊಂಡವು. ಇದನ್ನು ರಚಿಸಿದವನು ಭಕ್ತ ಶಿರೋಮಣಿ ಜಯದೇವ. ಇಂದಿಗೂ ಈ ಕಾವ್ಯವು ಭಕ್ತರಸಿಕರನ್ನು ಮುದಗೊಳಿಸುತ್ತದೆ, ಶ್ರೀಕೃಷ್ಣ ಪ್ರೇಮದಿಂದ ನಲಿದಾಡುವಂತೆ ಮಾಡುತ್ತದೆ. ಪ್ರಸಿದ್ಧ ಗಾಯಕರು ಇಲ್ಲಿನ ಪದ್ಯಗಳನ್ನು ಸುಮಧುರ ರಾಗಗಳಲ್ಲಿ ಹಾಡುವುದನ್ನು ಕೇಳಿದಾಗ, ಮನಸ್ಸು ಭಗವದಾನಂದದಲ್ಲಿ ಮುಳುಗಿಹೋಗುತ್ತದೆ. ಇಂದಿಗೂ ಅತ್ಯಂತ ಪ್ರಸಿದ್ಧವಾಗಿರುವ ಈ ಅಷ್ಟಪದಿಗಳನ್ನು ರಚಿಸಿದ ಮಹಾಸಂತನ ಜೀವನವೂ ಅವನ ರಚನೆಗಳಷ್ಟೇ ರಮ್ಯವಾದುದು; ಅವನ ವ್ಯಕ್ತಿತ್ವವು ಕೂಡ ಅವನ ಕವನಗಳಿಂದ ಹೊರಹೊಮ್ಮುವ ಭಾವನೆಗಳಂತೆಯೇ ನವಿರಾದುದು, ಭಕ್ತಿಪೂರಿತವಾದುದು.

ಈ ಭಕ್ತ ಕವಿಯು ಕ್ರಿ.ಶ. ಸುಮಾರು ೧೧೭೦ ರಲ್ಲಿ ಜನಿಸಿದನೆಂದು ಹೇಳುತ್ತಾರೆ. ಅವನ ಜನ್ಮಸ್ಥಾನದ ಬಗ್ಗೆ ಎರಡು ಅಭಿಪ್ರಾಯಗಳಿವೆ. ಒಂದರ ಪ್ರಕಾರ ಬಂಗಾಳ ರಾಜ್ಯದ ಕೆಂದುಲಿ ಎಂಬ ಗ್ರಾಮ ಅವನ ಜನ್ಮಸ್ಥಾನ. ಮತ್ತೊಂದರ ಪ್ರಕಾರ ಒರಿಸ್ಸಾ ರಾಜ್ಯದ ಬಿಲ್ವಗ್ರಾಮ್. ಈ ಹಳ್ಳಿ ಪ್ರಸಿದ್ಧ ತೀರ್ಥಕ್ಷೇತ್ರವಾದ ಪುರೀಧಾಮದ ಬಳಿಯಲ್ಲಿದೆ.

ಜನನ ಮತ್ತು ಬಾಲ್ಯ

ಜಯದೇವನ ತಂದೆಯ ಹೆಸರು ನಾರಾಯಣ ಶಾಸ್ತ್ರಿ. ಅವರು ಶ್ರದ್ಧಾವಂತ ಬ್ರಾಹ್ಮಣರು. ತಾಯಿಯ ಹೆಸರು ಕಮಲಾಬಾಯಿ. ಅವಳು ಪತಿವ್ರತಾಶಿರೋಮಣಿ. ದಂಪತಿಗಳಿಗೆ ಬಹುಕಾಲವಾದರೂ ಮಕ್ಕಳು ಹುಟ್ಟಲಿಲ್ಲ. ಶಾಸ್ತ್ರಿಗಳು ನಿರ್ಲಿಪ್ತರು. ಅವರು ಅದಕ್ಕಾಗಿ ಯಾವುದೇ ಪ್ರಾರ್ಥನೆ ಮಾಡಲಿಲ್ಲ. ಆದರೆ ಕಮಲಾಬಾಯಿಗೆ ಮಕ್ಕಳಾಗಬೇಕೆಂಬ ಆಸೆ. ಹೀಗಾಗಿ ಅವಳು ತನ್ನ ಪತಿಗೆ ತಿಳಿಯದಂತೆಯೇ ಮಗುವಿಗಾಗಿ ಭಗವಂತನನ್ನು ರಹಸ್ಯವಾಗಿ ಪ್ರಾರ್ಥಿಸಿದಳು. ಒಂದು ದಿನ ಶಾಸ್ತ್ರಿಗಳಿಗೆ ಕನಸಾಯಿತು. ''ನಿನ್ನ ಹೆಂಡತಿಯ ಆಸೆಯನ್ನು ಪೂರೈಸುತ್ತೇನೆ'' ಎಂದು ಭಗವಂತನೇ ದರ್ಶನ ನೀಡಿ ಹೇಳಿದನು. ನಾರಾಯಣ ಶಾಸ್ತ್ರಿಗಳು ಎಚ್ಚರಗೊಂಡು, ಹೆಂಡತಿಯನ್ನು ಕೇಳಿದರು, ''ನೀನು ಮಕ್ಕಳಿಗಾಗಿ ಭಗವಂತನನ್ನು ಪ್ರಾರ್ಥಿಸಿದ್ದೆಯಾ?'' ಎಂದು. ಆಕೆ ಭಯದಿಂದಲೇ ಹೌದೆಂದು ಒಪ್ಪಿಕೊಂಡಳು. ಶಾಸ್ತ್ರಿಗಳಿಗೆ ಹೆಂಡತಿಯ ಮೇಲೆ ವಿಪರೀತ ಕೋಪ ಬಂತು. ''ಎಂಥ ಕೆಲಸ ಮಾಡಿಬಿಟ್ಟೆ! ಭಗವಂತನಲ್ಲಿ ಸ್ವಾರ್ಥಪರವಾದ ಪ್ರಾರ್ಥನೆಯನ್ನು ಮಾಡುವುದೆ? ನಾನು ನಿನ್ನೊಡನೆ ಒಂದು ಮಾತನ್ನೂ ಆಡುವುದಿಲ್ಲ'' ಎಂದುಬಿಟ್ಟರು. ಪತಿಯೇ ದೇವರೆಂದು ನಂಬಿದ್ದ ಕಮಲಾಬಾಯಿಗೆ ದಿಗ್ಭ್ರಮೆಯಾಯಿತು. ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮಾಪಣೆ ಕೇಳಿದರೂ ಶಾಸ್ತ್ರಿಗಳ ಮನಸ್ಸು ಕರಗಲಿಲ್ಲ. ಇಬ್ಬರೂ ಕೆಲವು ದಿನಗಳ ಮಟ್ಟಿಗೆ ಆಹಾರವನ್ನು ಮುಟ್ಟಲಿಲ್ಲ. ಕಡೆಗೆ ಒಬ್ಬ ಅಜ್ಞಾತ ಬ್ರಾಹ್ಮಣನು ಅವರ ಮನೆಗೆ ಬಂದನು. ಇಬ್ಬರಿಗೂ ಸಮಾಧಾನ ಮಾಡಿ, ಅವರ ವೈಮನಸ್ಯವನ್ನು ಬಗೆಹರಿಸಿದನು. ಹುಟ್ಟುವ ಮಗನು ಮಹಾಪಂಡಿತನೂ, ಶ್ರೇಷ್ಠ ಸಂತನೂ ಆಗುವನೆಂದು ಭವಿಷ್ಯ ನುಡಿದನು. ನಾರಾಯಣ ಶಾಸ್ತ್ರಿಗಳು ಭಗವಂತನೇ ಈ ಬ್ರಾಹ್ಮಣನ ರೂಪದಲ್ಲಿ ಬಂದಿರುವನೆಂದು ಎಣಿಸಿ ಸಂತೋಷಪಟ್ಟರು. ನವಮಾಸಗಳು ಕಳೆದ ನಂತರ ಕಮಲಾಬಾಯಿಗೆ ಗಂಡುಮಗುವಾಯಿತು. ಅವನೇ ಜಯದೇವ.

ಜಯದೇವನು ಬಾಲ್ಯದಿಂದಲೇ ಭಗವಂತನಲ್ಲಿ ಅಪಾರ ಭಕ್ತಿಯನ್ನು ಬೆಳೆಸಿಕೊಂಡಿದ್ದನು. ಅವನಿಗೆ ಐದು ವರ್ಷ ವಯಸ್ಸಾಗಿರುವಾಗಲೇ ಉಪನಯನವಾಯಿತು. ಕೆಲವೇ ವರ್ಷಗಳಲ್ಲಿ ಅವನು ಶಾಸ್ತ್ರಪಾರಂಗತನಾದನು. ಪರಂಪರಾಗತ ಶಿಕ್ಷಣವನ್ನು ಪಡೆದುಕೊಂಡನು. ಈ ಮಧ್ಯೆ ನಾರಾಯಣ ಶಾಸ್ತ್ರಿಗಳು ಮಗನ ಮದುವೆ ಮಾಡಬೇಕೆಂದು ಬಹು ಪ್ರಯತ್ನ ಮಾಡಿದರು. ಅದಕ್ಕೆ ಜಯದೇವನು ಒಪ್ಪಲೇ ಇಲ್ಲ. ಕಡೆಗೆ ನಿರಾಸೆಯಿಂದ ಅವರು ಹೆಂಡತಿಯನ್ನು ಕರೆದುಕೊಂಡು, ಕಾಡಿಗೆ ಹೋದರು. ವಾನಪ್ರಸ್ಥ ಜೀವನವನ್ನು ಆರಂಭಿಸಿದರು.

ದಿವ್ಯ ವಿವಾಹ

ಆದರೆ ಭಗವಂತನ ಇಚ್ಛೆಯೇ ಬೇರೆಯಾಗಿತ್ತು. ಜಗನ್ನಾಥ ಪುರೀಧಾಮದಲ್ಲಿ ದೇವಶರ್ಮನೆಂಬ ಮಹಾನ್ ಭಕ್ತನಿದ್ದನು. ಅವನಿಗೂ ಮಕ್ಕಳಿರಲಿಲ್ಲ. ಅದಕ್ಕಾಗಿ ಜಗನ್ನಾಥ ಸ್ವಾಮಿಯನ್ನು ಬೇಡಿಕೊಂಡನು. ಅವನಿಗೆ ಒಂದು ಹೆಣ್ಣುಮಗುವಾಯಿತು. ಆ ಮಗುವಿಗೆ ಪದ್ಮಾವತಿ ಎಂದು ಹೆಸರಿಟ್ಟರು. ಅವರಿಗೆ ಅನಂತರ ಗಂಡುಮಕ್ಕಳೂ ಹುಟ್ಟಿದರು. ಒಂದು ದಿನ ದೇವಶರ್ಮನು ಪತ್ನಿಯೊಡನೆ ಜಗನ್ನಾಥನ ಸಾನ್ನಿಧ್ಯಕ್ಕೆ ಬಂದನು. ಹೆಣ್ಣು ಮಗುವನ್ನು ಪರಮಾತ್ಮನಿಗೆ ಒಪ್ಪಿಸಿಬಿಟ್ಟನು. ಹಾಗೆ ಮಾಡುತ್ತೇನೆಂದು ಅವನು ಮೊದಲೇ ಹರಕೆ ಹೊತ್ತಿದ್ದನು.

ಅಂದು ರಾತ್ರಿ ದೇವಶರ್ಮನಿಗೆ ಕನಸಿನಲ್ಲಿ ಪ್ರಭು ಜಗನ್ನಾಥನ ದರ್ಶನವಾಯಿತು. ''ನಾನು ನಿನ್ನ ಮಗಳನ್ನು ಸ್ವೀಕರಿಸಲು ಒಪ್ಪಿಕೊಂಡಿದ್ದೇನೆ.. ಆದರೆ ಅವಳನ್ನು ನೀನು ಜಯದೇವನಿಗೆ ಮದುವೆ ಮಾಡಿಕೊಡು. ಅವನು ನನ್ನ ಭಕ್ತ'' ಎಂದು ಅವನು ಆದೇಶವಿತ್ತನು.

ಆ ಸಮಯದಲ್ಲಿ ಜಯದೇವನು ಗ್ರಾಮದ ಹೊರವಲಯದಲ್ಲಿ ಪರ್ಣಕುಟೀರವನ್ನು ಕಟ್ಟಿಕೊಂಡು ಸಾಧನೆ-ಭಜನೆ ಮಾಡುತ್ತಿದ್ದನು. ಸದಾ ಕಾಲವೂ ಪ್ರಭು ಜಗನ್ನಾಥಸ್ವಾಮಿಯ ಚಿಂತನೆ ಮಾಡುತ್ತಿದ್ದನು. ಬಡತನವಿದ್ದರೂ ಪರಮಾನಂದಭರಿತನಾಗಿದ್ದನು. ಅಲ್ಲಿಗೆ ದೇವಶರ್ಮನು ಮಗಳನ್ನು ಕರೆದುಕೊಂಡು ಬಂದನು. ಜಗನ್ನಾಥ ಸ್ವಾಮಿಯ ಆದೇಶದಂತೆ ನನ್ನ ಮಗಳನ್ನು ನಿನಗೆ ಅರ್ಪಿಸುತ್ತಿರುವುದಾಗಿ ನಿವೇದಿಸಿಕೊಂಡನು. ದಯವಿಟ್ಟು ಸ್ವೀಕರಿಸಬೇಕೆಂದು ಕೇಳಿಕೊಂಡನು. ಜಯದೇವನು ಇದಕ್ಕೆ ಒಪ್ಪಲಿಲ್ಲ. ಕಡುಬಡವನಾದ ತನಗೆ ಹೆಂಡತಿಯನ್ನು ಕಾಪಾಡುವುದು ಅಸಾಧ್ಯವೆಂದು ನಿರಾಕರಿಸಿಬಿಟ್ಟನು. ದೇವಶರ್ಮನು ತನ್ನ ಹಠವನ್ನು ಬಿಡಲಿಲ್ಲ. ಪದ್ಮಾವತಿಯ ಕಡೆಗೆ ತಿರುಗಿ, ''ಅಮ್ಮಾ, ಮಗಳೇ, ಇಂದಿನಿಂದ ಇವನೇ ನಿನ್ನ ಪತಿದೇವ. ಇವನ ಸೇವೆಯೇ ನಿನಗೆ ಸರ್ವಸ್ವ. ಪತಿಯ ಸೇವೆಯಿಂದ ಇಹ-ಪರ ಎರಡರಲ್ಲೂ ನಿನಗೆ ಶುಭವಾಗುತ್ತದೆ. ಇನ್ನು ನೀನುಂಟು, ಇವನುಂಟು'' ಎಂದು ಹೇಳಿ ಹೊರಟೇಹೋದನು.

ಆ ಪಾಪದ ಹುಡುಗಿ ಬಹುಕಾಲ ಜಯದೇವನ ಪಕ್ಕದಲ್ಲಿಯೇ ನಿಂತುಕೊಂಡಿದ್ದಳು. ಅನಂತರ ಜಯದೇವನು ಬಾಯಿಬಿಟ್ಟನು: ''ನಿನ್ನ ತಂದೆ ನಿನ್ನನ್ನು ಇಲ್ಲಿ ಬಿಟ್ಟು ಹೋಗಿಬಿಟ್ಟರು. ನೀನು ಹೇಗೆ ತಾನೇ ಈ ಘೋರ ಅರಣ್ಯದಲ್ಲಿ ವಾಸ ಮಾಡುವೆ?'' ಪದ್ಮಾವತಿ ಉತ್ತರಿಸಿದಳು, ''ಪ್ರಭೂ, ಇದೇನು ಹೀಗೆ ಹೇಳುತ್ತಿರುವಿರಿ? ನನ್ನ ತಂದೆಯು ನನ್ನನ್ನು ನಿಮಗೆ ಧಾರೆಯೆರೆದಿದ್ದಾರೆ. ನಾನು ಈಗ ನಿಮಗೆ ಸೇರಿದವಳು. ಹೀಗಿರುವಾಗಿ ನಾನು ಹೇಗೆ ತಾನೇ ಒಬ್ಬಂಟಿಯಾಗಿ ಇರಲು ಸಾಧ್ಯ? ನೀವು ಯಾವತ್ತೂ ನನ್ನೊಡನೆ ಇರುತ್ತೀರಲ್ಲವೆ?''' ಇದನ್ನು ಆಲಿಸಿದ ಜಯದೇವನು ಹೀಗೆ ಚಿಂತಿಸಿದನು: ''ಹೌದಲ್ಲವೇ, ಇವಳು ಹೇಳುವುದು ಸತ್ಯ. ಇವಳನ್ನು ತ್ಯಜಿಸುವುದು ಪಾಪವೇ ಸರಿ. ಈಗ ಇವಳ ತಂದೆಯ ಮನೆಗೆ ಕರೆದುಕೊಂಡು ಹೋಗಿ ವಿಧ್ಯುಕ್ತವಾಗಿ ಇವಳೊಡನೆ ವಿವಾಹವಾಗುತ್ತೇನೆ.'' ದೇವಶರ್ಮನ ಮನೆಯಲ್ಲಿ ವೈದಿಕ ವಿಧಿ ಪ್ರಕಾರ ಅವರಿಬ್ಬರ ವಿವಾಹ ನಡೆದುಹೋಯಿತು.

ಜಯದೇವ - ಪದ್ಮಾವತಿ ಇಬ್ಬರೂ ಆದರ್ಶ ಜೀವನವನ್ನು ನಡೆಸಿದರು. ಜಯದೇವನು ಬಹಳ ಉದಾರಿಯಾಗಿದ್ದನು. ಬಡವರು ಮತ್ತು ಬ್ರಾಹ್ಮಣರಿಗೆ ದಾನ ನೀಡುತ್ತಿದ್ದನು. ಒಬ್ಬನಾದರೂ ಅತಿಥಿ ಬಾರದೆ ಊಟಕ್ಕೆ ಕುಳಿತುಕೊಳ್ಳುತ್ತಿರಲಿಲ್ಲ. ಹೀಗಾಗಿ ಅವನ ತಂದೆ ಇವನಿಗಾಗಿ ಉಳಿಸಿದ್ದ ಅಷ್ಟಿಷ್ಟು ಹಣವೂ ವ್ಯಯವಾಗಿ ಹೋಯಿತು. ಅಕ್ಕಿಯನ್ನು ಬೇಡಿತಂದು, ಸಾಂಪ್ರದಾಯಿಕ ಬ್ರಾಹ್ಮಣ ಶೈಲಿಯಲ್ಲಿ ಪರಿಶುದ್ಧ ಜೀವನವನ್ನು ನಡೆಸುತ್ತಿದ್ದರು. ಇಷ್ಟಾದರೂ ದಂಪತಿಗಳು ಆನಂದದಿಂದ ಕೂಡಿದ್ದರು. ಅವರ ಹೃದಯಗಳು ಪರಿಶುದ್ಧ ಪ್ರೇಮ ಮತ್ತು ಭಕ್ತಿಗಳಿಂದ ತುಂಬಿ ತುಳುಕುತ್ತಿದ್ದವು. ಎಲ್ಲರೂ ಅವರಿಗೆ ಗೌರವ ತೋರುತ್ತಿದ್ದರು.

ಗೀತಗೋವಿಂದ

ಹೀಗೆ ತಪಸ್ಯೆಯ ಜೀವನವನ್ನು ನಡೆಸುತ್ತಿದ್ದರು ಈ ಶ್ರದ್ಧಾವಂತ ದಂಪತಿಗಳು. ಈ ಸಮಯದಲ್ಲಿಯೇ ಜಯದೇವನು ತನ್ನ ಜೀವನದ ಅತ್ಯಂತ ಶ್ರೇಷ್ಠವಾದ ಕಾವ್ಯ '**ಗೀತಗೋವಿಂದ**'ವನ್ನು ರಚಿಸಿದನು. ಒಮ್ಮೆ ತಾನು ಬರೆದ ಒಂದು ಸಾಲಿನ ಬಗ್ಗೆ ಅವನಿಗೇ ಅನುಮಾನವಾಯಿತು. ಅದನ್ನು ಅಳಿಸಿ, ಊಟದ ಸಮಯವಾಗಿದ್ದರಿಂದ, ಸ್ನಾನಮಾಡಿ ಬರಲೆಂದು ನದಿಗೆ ಹೋದನು. ಅಷ್ಟರಲ್ಲಿ ಶ್ರೀಕೃಷ್ಣನೇ ಜಯದೇವನ ವೇಷದಲ್ಲಿ ಬಂದನು. ಜಯದೇವನು ಅಳಿಸಿದ್ದ ಸಾಲನ್ನು ತಿದ್ದಿ, ಇನ್ನೂ ಸೊಗಸಾಗಿ ತನ್ನ ಹಸ್ತಾಕ್ಷರಗಳಲ್ಲಿಯೇ ಬರೆದನು. ಪದ್ಮಾವತಿಯು ನೀಡಿದ ಊಟವನ್ನು ಉಂಡು ಮರೆಯಾದನು. ಜಯದೇವನು ಈ ಸಾಲಿನ ಬಗ್ಗೆಯೇ ಚಿಂತಿಸುತ್ತ ಮನೆಗೆ ವಾಪಸ್ಸು ಬಂದನು. ಅವನನ್ನು ಕಂಡು ಪದ್ಮಾವತಿ ಆಶ್ಚರ್ಯಗೊಂಡಳು. ಜಯದೇವನೂ ಅಚ್ಚರಿಗೊಂಡು ತನ್ನ ತಾಳೆ ಪತ್ರಗಳತ್ತ ದೃಷ್ಟಿ ಹರಿಸಿದನು. ತಾನು ಅಳಿಸಿದ್ದ ಸಾಲು ತಿದ್ದಿ ಬರೆದಿತ್ತು. ಅದನ್ನು ಕಂಡು, ಪರಮಾತ್ಮನೇ ತನ್ನ ವೇಷದಲ್ಲಿ ಬಂದು ಈ ಸಾಲನ್ನು ಬರೆದಿದ್ದಾನೆಂದು ತಿಳಿದು ಆನಂದಗೊಂಡನು. ''ನಿನಗೆ ಭಗವಂತನ ದರ್ಶನವಾಯಿತು!'' ಎಂದು ತನ್ನ ಪತ್ನಿಯಾದ ಪದ್ಮಾವತಿಯನ್ನು ಕೊಂಡಾಡಿದನು.

ಗೀತಗೋವಿಂದ ಕಾವ್ಯವು ಅತ್ಯಂತ ಪ್ರಸಿದ್ಧವಾಯಿತು. ಅದರ ಅಷ್ಟಪದಿಗಳನ್ನು ದೇವಸ್ಥಾನಗಳಲ್ಲಿ ಹಾಡುವುದು ವಾಡಿಕೆಯಾಯಿತು. ಅದರಲ್ಲಿ ಬರುವ 'ದಶಾವತಾರ ಸ್ತೋತ್ರ'ವಂತೂ ಎಲ್ಲರಿಗೂ ಪ್ರಿಯವಾಯಿತು. ಅಂಥವರಲ್ಲಿ ಅಲ್ಲಿನ ರಾಜನೂ ಒಬ್ಬ. ಅವನು ಕೂಡ ಒಬ್ಬ ಕವಿಯೇ. ಹೀಗಾಗಿ ಜಯದೇವನ ಕವಿತಾಸಾಮರ್ಥ್ಯವನ್ನು ಕಂಡು ಅವನಿಗೆ ಹೊಟ್ಟೆಕಿಚ್ಚು. ಅವನು ಕೂಡ ಇನ್ನೊಂದು ಗೀತಗೋವಿಂದವನ್ನು ರಚಿಸಿದ್ದನು. ತನ್ನ ರಚನೆ ಜಯದೇವನ ರಚನೆಗಿಂತ ಉತ್ತಮವಾದುದು ಎಂದು ಭಾವಿಸಿದ್ದನು.

ಒಮ್ಮೆ ಜಗನ್ನಾಥ ದೇಗುಲಕ್ಕೆ ರಾಜನು ಆಗಮಿಸಿದನು. ಜಯದೇವನು ಅಲ್ಲಿ ಭಗವಂತನ ಲೀಲೆಗಳನ್ನು ಕುರಿತು ಹಾಡುತ್ತ ಕುಣಿಯುತ್ತ ಆನಂದದಿಂದ ಕಾಲಕಳೆಯುತ್ತಿದ್ದನು. ಸ್ವರಚಿತ 'ಗೀತಗೋವಿಂದ' ಕಾವ್ಯದ ಹಾಡುಗಳನ್ನೇ ತನ್ನ ಸುಮಧುರ ಕಂಠದಿಂದ ಹಾಡುತ್ತಿದ್ದನು. ಇದನ್ನು ಕಂಡು ರಾಜನಿಗೆ ಮುನಿಸು ಉಂಟಾಯಿತು. ''ನೀನೇಕೆ ನನ್ನ ಗೀತಗೋವಿಂದವನ್ನು ಹಾಡುತ್ತಿಲ್ಲ?'' ಎಂದು ಕೇಳಿದನು. ಅದಕ್ಕೆ ಜಯದೇವನು, ''ಭಗವಂತನಿಗೆ ನಿನ್ನ ಗೀತಗೋವಿಂದದ ಮೇಲೆ ನನ್ನ ಗೀತಗೋವಿಂದದ ಮೇಲೆ ಇರುವಷ್ಟು ಪ್ರೀತಿಯಿಲ್ಲ. ಬೇಕಾದರೆ ಪರೀಕ್ಷೆ ಮಾಡಿ ನೋಡೋಣ'' ಎಂದನು.

ರಾಜನ ಆಜ್ಞೆಯಂತೆ ರಾಜನ ಮತ್ತು ಜಯದೇವನ ಗ್ರಂಥ – ಇವೆರಡನ್ನೂ ಭಗವಂತನ ವಿಗ್ರಹದ ಮುಂದೆ ಇರಿಸಲಾಯಿತು. ಇಬ್ಬರೂ ಜಗನ್ನಾಥ ಪ್ರಭುವನ್ನು ಪ್ರಾರ್ಥಿಸಿದರು. ಆಮೇಲೆ ಗರ್ಭಮಂದಿರದ ಬಾಗಿಲು ಮುಚ್ಚಿ ಇಬ್ಬರೂ ಹೊರ ಬಂದರು. ಸ್ವಲ್ಪ ಸಮಯದ ನಂತರ ಬಾಗಿಲನ್ನು ತೆರೆದು ಒಳಕ್ಕೆ ಹೋದರು. ರಾಜನೇ ಮೊದಲು ಹೋದನು. ಜಯದೇವನ ಗ್ರಂಥವೇ ತನ್ನ ಗ್ರಂಥಕ್ಕಿಂತ ಮೇಲೆ ಇರುವುದನ್ನು ಕಂಡು ಬೆರಗಾದನು.

ಇದರಿಂದ ರಾಜನು ದುಃಖಿತನಾಗಿ, ಅನ್ನ, ನೀರು ಬಿಟ್ಟು ಗೋಳಾಡಿದನು. ಕಡೆಗೆ ಸ್ವಪ್ನದಲ್ಲಿ ಜಗನ್ನಾಥ ಸ್ವಾಮಿಯ ದರ್ಶನವಾಯಿತು. ''ಇದೇಕೆ ಹೀಗೆ ಕಷ್ಟಪಡುತ್ತಿರುವೆ? ನನಗೆ ಜಯದೇವನ 'ಗೀತಗೋವಿಂದ'ವೆಂದರೆ ಅಚ್ಚುಮೆಚ್ಚು. ನಿನ್ನ ರಚನೆಯೂ ಚೆನ್ನಾಗಿಯೇ ಇದೆ. ಅದೂ ನನಗೆ ಇಷ್ಟ. ಆದರೆ ಜಯದೇವನು ಸಂತ. ಅವನ ಭಕ್ತಿ ಪರಿಶುದ್ಧವಾದುದು. ಹಾಗೆಂದೇ ಅವನ ರಚನೆ ನನಗೆ ಬಹಳ ಇಷ್ಟವಾದುದು'' ಎಂದು ಪ್ರಭು ಹೇಳಿದನು. ಇದಾದ ಬಳಿಕ ರಾಜನು ಜಯದೇವನ ದೊಡ್ಡ ಅನುಯಾಯಿಯಾದನು. ಇಡೀ ಗೀತಗೋವಿಂದವನ್ನು ತಾನೇ ಮರುಪಾಠ ಮಾಡಿಕೊಂಡನು. ಜಯದೇವನ ಈ ಮಹಾನ್ ಕೃತಿಯನ್ನು ತನ್ನ ರಾಜ್ಯದಲ್ಲೆಲ್ಲ ಪ್ರಚಾರ ಮಾಡಿದನು.

ಗೀತಗೋವಿಂದದ ಮಹಿಮೆ ಅಪಾರ. ಒಮ್ಮೆ ಒಬ್ಬ ಮಹಿಳೆ ಗೀತಗೋವಿಂದವನ್ನು ಸುಮಧುರವಾಗಿ ಭಕ್ತಿಪೂರಿತವಾಗಿ ಹಾಡಿಕೊಳ್ಳುತ್ತ, ಮಾರಾಟ ಮಾಡಲು ಕಾಡಿನಲ್ಲಿ ಹಣ್ಣುಗಳನ್ನು


'ಗೀತಗೋವಿಂದ'ವನ್ನು ಆಧರಿಸಿದ ಸಾಂಪ್ರದಾಯಿಕ ಚಿತ್ರ

ಕೊಯ್ಯುತ್ತಿದ್ದಳು. ಪ್ರಭು ಜಗನ್ನಾಥನು ಅವಳ ಸುಮಧುರ ಹಾಡನ್ನು ಕೇಳಿ ಆಕರ್ಷಿತನಾದನು. ಅವಳೊಡನೆ ತಾನೂ ಕಾಡುಮೇಡು ಸುತ್ತಿದನು. ಮಧ್ಯೆ ಮಧ್ಯೆ ಮುಳ್ಳು ಪೊದೆಗಳಲ್ಲಿಯೂ ನುಗ್ಗಿದ್ದರಿಂದ ಅವನ ಪೀತಾಂಬರ ಅಲ್ಲಲ್ಲಿ ಹರಿದುಹೋಯಿತು. ಮರುದಿನ ದೇವಸ್ಥಾನವನ್ನು ತೆರೆದುನೋಡಿದಾಗ, ಭಗವಂತನ ವಸ್ತ್ರ ಜೀರ್ಣವಾಗಿತ್ತು. ಇದನ್ನು ಕಂಡು ಪೂಜಾರಿಗಳು ಮತ್ತು ರಾಜ — ಇಬ್ಬರೂ ಆಶ್ಚರ್ಯಪಟ್ಟರು. ಕಡೆಗೆ ಜಗನ್ನಾಥನೇ ರಾಜನ ಕನಸಿನಲ್ಲಿ ಬಂದು, ನಡೆದ ಸಂಗತಿಯನ್ನು ಹೇಳಿದನು. ರಾಜನು ಜಯದೇವ ಮತ್ತು ಆ ಬಡ ಮಹಿಳೆ ಇಬ್ಬರನ್ನೂ ಕರೆಸಿ, ಹೊಗಳಿ ಸನ್ಮಾನ ಮಾಡಿದನು; ಧನಕನಕಗಳನ್ನು ಕೊಟ್ಟನು. ಪ್ರತಿನಿತ್ಯವೂ ಆ ಭಕ್ತಮಹಿಳೆ ತನ್ನೆದುರು ಗೀತಗೋವಿಂದವನ್ನು ಹಾಡಬೇಕೆಂದು ವಿಧಿಸಿದನು.

ಜಯದೇವನಿಗೆ ಎದುರಾದ ವಿಪತ್ತುಗಳು

ಜಯದೇವನ ಮಾವ ದೇವಶರ್ಮನು ಒಮ್ಮೆ ಬಂದು, ಕೆಲವು ಕಾಲ ತಂಗಿದ್ದು, ಮಗಳನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಸ್ವಲ್ಪ ದಿವಸಗಳ ಕಾಲ ಅವಳು ತನ್ನ ತಾಯಿಯ ಜೊತೆಯಲ್ಲಿರಲಿ ಎನ್ನುವುದೇ ತಂದೆಯ ಆಸೆಯಾಗಿತ್ತು.

ಅತ್ತ ಪದ್ಮಾವತಿ ತಂದೆಯ ಮನೆಗೆ ಹೋದಳು. ಇತ್ತ ಜಯದೇವನು ಮನೆಯಲ್ಲಿ ಒಬ್ಬನೇ ಇದ್ದನು. ಭಗವಾನ್ ದಾಸ್ ಎಂಬ ಶ್ರೀಮಂತನು ನೆರೆಯ ಗ್ರಾಮದಲ್ಲಿ ವಾಸವಾಗಿದ್ದನು. ಇದೇ ಸಮಯದಲ್ಲಿ ಅವನು ಜಯದೇವನನ್ನು ತನ್ನ ಮನೆಗೆ ಆಹ್ವಾನಿಸಿದನು. ಕೆಲವು ದಿನ ತಂಗಿದ ನಂತರ, ಅವನನ್ನು ವಾಪಸ್ಸು ಕಳಿಸಿಕೊಟ್ಟನು. ಅನೇಕ ಬೆಲೆಬಾಳುವ ಕೊಡುಗೆಗಳಿಂದ ಕೂಡಿದ ಒಂದು ಗಾಡಿಯೂ ಅವನ ಜೊತೆಗೇ ಹೋಯಿತು. ಮಾರ್ಗಮಧ್ಯದಲ್ಲಿ ದಟ್ಟವಾದ ಕಾಡು. ಅಲ್ಲಿ ದರೋಡೆಕೋರರು ಜಯದೇವನನ್ನು ಮುತ್ತಿದರು. ಬೆಲೆಬಾಳುವ ವಸ್ತುಗಳನ್ನು ಲೂಟಿ ಮಾಡಿದ್ದಲ್ಲದೆ, ಜಯದೇವನ ಕೈಕಾಲುಗಳನ್ನು ಕತ್ತರಿಸಿ ಹಾಕಿದರು. ಅಷ್ಟೂ ಅಲ್ಲದೆ, ನೀರಿಲ್ಲದ ಪಾಳುಬಾವಿಯಲ್ಲಿ ಅವನನ್ನು ತಳ್ಳಿ ಹೋಗಿಬಿಟ್ಟರು.

ಜಯದೇವನು ಈ ಎಲ್ಲ ಕಷ್ಟಗಳನ್ನು ಸಂಯಮದಿಂದ ಸಹಿಸಿಕೊಂಡನು. ಈ ಕಳ್ಳರನ್ನು ಕ್ಷಮಿಸಬೇಕೆಂದು ಭಗವಂತನನ್ನು ಪ್ರಾರ್ಥಿಸಿಕೊಂಡನು. ತನ್ನನ್ನು ಭಗವಂತನ ರಕ್ಷಣೆಗೆ ಒಪ್ಪಿಸಿದನು.



ಭಗವಂತನು ಇದೆಲ್ಲವನ್ನೂ ತನ್ನ ಒಳಿತಿಗಾಗಿಯೇ ಮಾಡುತ್ತಿರುವ ನೆಂದು ಅವನು ಭಾವಿಸಿದನು. ಭಗವಂತನ ನಿಜವಾದ ಭಕ್ತರು ಈ ಬಗೆಯ ಸಮಬುದ್ಧಿಯನ್ನು ಬೆಳೆಸಿಕೊಳ್ಳುತ್ತಾರೆ. ಅವರು ಯಾವಾ ಗಲೂ ವಿಪತ್ತುಗಳನ್ನು ಮತ್ತು ಸಂಕಷ್ಟಗಳನ್ನು ಸ್ವಾಗತಿಸುತ್ತಾರೆ.

ಆ ಪ್ರಾಂತದ ರಾಜನು ಇದೇ ಸಮಯದಲ್ಲಿ ಬೇಟೆಗಾಗಿ ಕಾಡಿಗೆ ಬಂದಿದ್ದನು. ತನ್ನ ದಾಹವನ್ನು ತಣಿಸಿಕೊಳ್ಳಲು ಜಯ ದೇವನು ಇದ್ದ ಬಾವಿಯನ್ನೇ ಇಣುಕಿ ನೋಡಿದನು. ಅಲ್ಲಿ ಅವನಿಗೆ ನೀರೇನೂ ಸಿಗಲಿಲ್ಲ. ಅದಕ್ಕೆ ಬದಲಾಗಿ ರಕ್ತಸಿಕ್ತವಾಗಿದ್ದ ಮಾನವ ದೇಹ ಕಾಣಿಸಿತು. ಅವನು ಒಡನೆ ಜಯದೇವನನ್ನು ಬಾವಿಯಿಂದ ಮೇಲೆತ್ತಿಸಿದನು. ತನ್ನ ರಾಜಧಾನಿಗೆ ಕರೆದು ಕೊಂಡು ಬಂದನು. ಮಾರ್ಗಮಧ್ಯದಲ್ಲಿ ರಾಜನಿಗೆ ಜಯದೇವನ ಪರಿಚಯವಾಯಿತು. ಒಡನೆ ರಾಜನು ಜಯದೇವನ ಕಾಲಿಗೆ ಬಿದ್ದು, ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಕೇಳಿಕೊಂಡನು. ಭಾರೀ ಮೆರವಣಿಗೆಯಲ್ಲಿ ಅವನನ್ನು ತನ್ನ ರಾಜಧಾನಿಗೆ ಕರೆದು ಕೊಂಡು ಹೋದನು.

ಜಯದೇವನ ಸಾತ್ತ್ವಿಕ ನಡೆನುಡಿಗಳು, ಅಪಾರವಾದ ಜ್ಞಾನ ರಾಶಿ, ಆಧ್ಯಾತ್ಮಿಕ ಸಿದ್ಧಿ, ಭಗವಂತನಲ್ಲಿ ಅವನಿಗಿದ್ದ ಶರಣಾಗತಿ – ಇವೆಲ್ಲವನ್ನೂ ಕಂಡು ರಾಜನು ಅತ್ಯಂತ ಪ್ರಭಾವಿತನಾದನು. ತನಗೆ ಸಂನ್ಯಾಸ ದೀಕ್ಷೆ ಕೊಡಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಜಯದೇವನು ಹೀಗೆ ಹೇಳಿದನು: ''ಓ ರಾಜನೇ, ಸಂನ್ಯಾಸವೆಂದರೆ ಬರಿಯ ಬಾಹ್ಯ ತ್ಯಾಗವಲ್ಲ. ಮಾನಸಿಕ ಸಂನ್ಯಾಸವೇ ನೈಜ ಸಂನ್ಯಾಸ. ಆಸೆ ಮತ್ತು ಅಹಂಕಾರವನ್ನು ಬಿಟ್ಟುಬಿಡುವುದೇ ನಿಜ ವಾದ ಸಂನ್ಯಾಸ. ಒಬ್ಬನು ತನ್ನ ಹೆಂಡತಿ, ಮಕ್ಕಳು ಮತ್ತು ಸಂಪ ತ್ತನ್ನು ತ್ಯಜಿಸಿದ ಮಾತ್ರಕ್ಕೆ ನಿಜವಾದ ಸಂನ್ಯಾಸಿಯಾಗಲಾರ. ಮನಸ್ಸಿನಲ್ಲಿಯೇ ಆಸಕ್ತಿಯನ್ನು ಇಟ್ಟುಕೊಂಡಿರಬಹುದು. ಆದ್ದ ರಿಂದ ಬಾಹ್ಯ ಸಂನ್ಯಾಸದಿಂದ ಹೆಚ್ಚೇನೂ ಪ್ರಯೋಜನವಾಗದು. ಸಾಧ್ಯವಿದ್ದರೆ, ನನ್ನ ಹಾಗೆ ಗೃಹಸ್ಥ ಸಂನ್ಯಾಸಿಯಾಗಲು ಪ್ರಯತ್ನ ಪಡು. ಹೊರಗಡೆ ರಾಜ್ಯಭಾರವನ್ನು ನಿರ್ವಹಿಸುತ್ತಲೇ, ಆಂತರಿಕ ವಾಗಿ ಸಂನ್ಯಾಸೀ ಜೀವನ ನಡೆಸು.''

ಜಯದೇವನ ಮಾತಿನಲ್ಲಿ ಅಡಗಿದ್ದ ಸತ್ಯ ರಾಜನಿಗೆ ಅರಿವಾ ಯಿತು. ಆಗಲೇ ರಾಜನಿಗೆ ಗೊತ್ತಾದುದು, ಜಯದೇವನಿಗೆ ಪತ್ನಿ ಯಿದ್ದಾಳೆ ಎಂದು. ಒಡನೆ ಪದ್ಮಾವತಿಯನ್ನು ಕರೆತರಲು ಅವನು ಹೆಣ್ಣಾಳುಗಳನ್ನು ಕಳಿಸಿದನು.

ಇತ್ತ ಪದ್ಮಾವತಿಯು ತನ್ನ ತಂದೆಯ ಮನೆಯಿಂದ ಬಿಲ್ವ ಗ್ರಾಮ್‌ಗೆ ಹಿಂತಿರುಗಿದ್ದಳು. ಮನೆಯಲ್ಲಿ ತನ್ನ ಪತಿಯನ್ನು ಕಾಣದೆ ಕಂಗಾಲಾದಳು. ತನ್ನನ್ನು ತ್ಯಜಿಸಿ ಸಂನ್ಯಾಸಿಯಾಗಿ ಬಿಟ್ಟಿ ರುವನೆಂದು ಭಾವಿಸಿ ದುಃಖಿಸಿದಳು. ಜಯದೇವನಿಗಾಗಿ ಹತ್ತಿ ರದ ಹಳ್ಳಿಗಳನ್ನೆಲ್ಲ ಹುಡುಕಿಸಿದಳು. ಅಷ್ಟರಲ್ಲಿ ರಾಜನ ಕಡೆಯ ಸ್ತ್ರೀಯರಿಂದ ವರ್ತಮಾನ ತಿಳಿದು ಸಂತೋಷಗೊಂಡಳು. ತನ್ನ ಪತಿಯನ್ನು ಕಾಣಲು ಒಡನೆಯೇ ರಾಜಧಾನಿಗೆ ಹೋದಳು. ರಾಜನ ಅರಮನೆಯಲ್ಲಿ ಜಯದೇವನನ್ನು ಕಂಡಳು. ಅವಳ ಸಂತಸ ದುಃಖವಾಗಿ ಪರಿಣಮಿಸಿತು. ತನ್ನ ಪತಿಯ ಕಾಲು ಕೈಗಳು ಭಗ್ನವಾಗಿರುವುದನ್ನು ಕಂಡು, ಅವಳ ಹೃದಯವೇ ಒಡೆದಂತಾ ಯಿತು. ಬಹಳ ಸಂತಾಪಪಟ್ಟಳು. ಕರುಣಾಳುವಾದ ಜಗನ್ನಾಥ ಪ್ರಭುವು ನನ್ನ ಪತಿಯ ಕಾಲು ಕೈಗಳನ್ನು ಮತ್ತೆ ನೀಡಲಾರನೆ? ಎಂದು ಹೃತ್ಪೂರ್ವಕವಾಗಿ ಭಗವಂತನನ್ನು ಪ್ರಾರ್ಥಿಸಿದಳು. ಪತಿ ವ್ರತೆಯ ಪಾವನ ಸ್ಪರ್ಶದಿಂದ ಒಡನೆ ಜಯದೇವನ ದೇಹದಲ್ಲಿ ಕೈಕಾಲುಗಳು ಮತ್ತೆ ಮೂಡಿದವು. ಅವರಿಬ್ಬರೂ ಅನ್ಯೋನ್ಯವಾಗಿ ಜೀವಿಸಿದರು.

ಪದ್ಮಾವತಿಯ ಪತಿವ್ರತಾ ಧರ್ಮ

ಒಮ್ಮೆ ರಾಜನ ಸಹೋದರನು ವೃದ್ಧಾಪ್ಯದಿಂದಾಗಿ ಮರಣ ಹೊಂದಿನು. ಅವನ ಹೆಂಡತಿ ಅವನೊಡನೆ ಸಹಗಮನ ಮಾಡಲು ನಿಶ್ಚಯಿಸಿದಳು. ಇದನ್ನು ನೋಡಲು ಪದ್ಮಾವತಿಯೂ ಬಂದಳು. ''ಇದೇನು ಪತಿವ್ರತಾ ಧರ್ಮ! ಗಂಡನ ಮರಣದ ಸುದ್ದಿ ಕೇಳಿದ ತಕ್ಷಣ ಹೆಂಡತಿಯ ಪ್ರಾಣ ಹೋಗಬೇಕು. ಆಗಮಾತ್ರ ಅವಳು ಗಂಡನ ಜೊತೆಗೆ ನಿಷ್ಠೆಯಿಂದ ನಡೆದುಕೊಂಡಿದ್ದಳು ಎಂದರ್ಥ'' ಎಂದಳು. ಈ ಮಾತನ್ನು ರಾಣಿಯೂ ಕೇಳಿಸಿಕೊಂಡಳು. ''ನಿನಗೂ ಇಂಥ ಪರಿಸ್ಥಿತಿ ಒದಗಿಬಂದಾಗ ನೀನು ಹೇಳಿದ ಹಾಗೆಯೇ ಆಗುವುದೇನು? ಪರೀಕ್ಷಿಸಿ ನೋಡುತ್ತೇನೆ'' ಎಂದು ಸವಾಲು ಎಸೆದಳು.

ಒಮ್ಮೆ ರಾಜ ಮತ್ತು ಜಯದೇವ ಇಬ್ಬರೂ ಜೊತೆಗೂಡಿ ಜಗ ನ್ನಾಥ ಸ್ವಾಮಿಯ ಮಂದಿರಕ್ಕೆ ಹೋಗಿದ್ದರು. ಅಂದು ಅಲ್ಲಿಯೇ ರಾತ್ರಿಯನ್ನು ಕಳೆಯುವುದು ಎಂದು ನಿರ್ಧಾರ ಮಾಡಿಕೊಂಡಿ ದ್ದರು. ರಾಣಿಗೆ ಪದ್ಮಾವತಿಯನ್ನು ಪರೀಕ್ಷಿಸಬೇಕೆಂಬ ಹುಚ್ಚು ಆಸೆ. ಅಂದು ಬೆಳಗಿನ ಜಾವ ಪದ್ಮಾವತಿಗೆ ಹೇಳಿಕಳಿಸಿದಳು. ''ನಿನ್ನ ಗಂಡ ದೇಗುಲದಲ್ಲಿ ಪ್ರಾಣತ್ಯಾಗ ಮಾಡಿದ'' ಎಂದು ಹೇಳಿದಳು. ಪದ್ಮಾವತಿಗೆ ಇದೊಂದು ಭರಿಸಲಾಗದ ಆಘಾತವಾಗಿಬಿಟ್ಟಿತು. ಒಡನೆ ಅವಳು ಪ್ರಜ್ಞೆ ತಪ್ಪಿ ನೆಲಕ್ಕೆ ಬಿದ್ದಳು; ಅಸು ನೀಗಿದಳು.

ಇಷ್ಟು ಹೊತ್ತಿಗೆ ರಾಜ ಮತ್ತು ಜಯದೇವ ದೇವಸ್ಥಾನದಿಂದ ತಿರುಗಿಬಂದರು. ಪ್ರಾಣಬಿಟ್ಟಿದ್ದ ಪತ್ನಿಯನ್ನು ಕಂಡು ಜಯ ದೇವನು ದಿಗ್ಭ್ರಾಂತನಾದನು. ಆದರೂ ಸಾವರಿಸಿಕೊಂಡನು. ರಾಜನು ರಾಣಿಯನ್ನು ಪ್ರಶ್ನಿಸಿದಾಗ, ಅವಳು ನಡೆದದ್ದನ್ನೆಲ್ಲ ತಿಳಿಸಿ, ಕ್ಷಮೆ ಕೇಳಿದಳು. ರಾಜನಿಗೆ ರಾಣಿಯ ಮೇಲೆ ತುಂಬ

ಕೋಪ ಬಂತು. ''ನಿನ್ನನ್ನು ಬಿಟ್ಟುಬಿಡುತ್ತೇನೆ'' ಎಂದು ಕೂಗಾಡಿದನು. ಆದರೆ ಜಯದೇವನು ರಾಜನಿಗೆ ಸಾಂತ್ವನ ಮಾಡಿದನು. ''ರಾಣಿಯದೇನೂ ತಪ್ಪಿಲ್ಲ. ಅವಳು ಮುಗ್ಧೆ. ಜನರು ತಮಗೆ ಅರಿವಿಲ್ಲದೆ ಹೀಗೆ ಸುಳ್ಳಾಡಿಬಿಡುತ್ತಾರೆ'' ಎಂದನು. ಅನಂತರ ಶ್ರೀಕೃಷ್ಣನ ಸ್ಮರಣೆ ಮಾಡಿದನು. 'ತನ್ನ ಪ್ರಿಯ ಪತ್ನಿಯ ಅಕಾಲಿಕ ಮರಣವನ್ನು ತಪ್ಪಿಸು' ಎಂದು ಬೇಡಿಕೊಂಡನು. ದೇವರ ಅನುಗ್ರಹದಿಂದ ಪದ್ಮಾವತಿಗೆ ಮತ್ತೆ ಜೀವ ಬಂತು. ರಾಣಿಯು ಪದ್ಮಾವತಿಯ ಕಾಲಿಗೆ ಬಿದ್ದು ಕ್ಷಮೆ ಕೋರಿದಳು.

ಅಂತಿಮ ದಿನಗಳು

ಜಯದೇವನು ಪ್ರತಿದಿನವೂ ಗಂಗಾಸ್ನಾನ ಮಾಡುತ್ತಿದ್ದನು. ಹಾಗೆಂದು ವ್ರತ ಕೈಗೊಂಡಿದ್ದನು. ಕ್ರಮೇಣ ಅವನಿಗೆ ವಯಸ್ಸಾಯಿತು. ಗಂಗೆಯ ತನಕ ನಡೆದುಕೊಂಡು ಹೋಗುವುದು ಕಷ್ಟವಾಯಿತು. ಒಂದು ದಿನ ಗಂಗಾಸ್ನಾನ ಮುಗಿಸಿ ಬರುವಾಗ, ಪ್ರಜ್ಞೆ ತಪ್ಪಿ ಬಿದ್ದುಬಿಟ್ಟನು. ರಾಜನು ಪಲ್ಲಕ್ಕಿಯ ವ್ಯವಸ್ಥೆ ಮಾಡಿದನು. ಆದರೆ ಜಯದೇವನು ಅದನ್ನು ನಿರಾಕರಿಸಿಬಿಟ್ಟನು. ಕೊನೆಗೆ ಗಂಗೆಯೇ ಜಯದೇವನ ಮನೆಯ ಬಾವಿಯಲ್ಲಿ ಪ್ರತ್ಯಕ್ಷಳಾದಳಂತೆ. ಆ ಸಂದರ್ಭದಲ್ಲಿ ಬಾವಿ ತುಂಬ ಕಮಲದ ಹೂವುಗಳು ಬಿರಿದವಂತೆ. ಇದು ಜಯದೇವನ ತಪಸ್ಸು ಮತ್ತು ಭಕ್ತಿಯ ಫಲವಲ್ಲದೆ ಬೇರೇನು?

ಕಾಲಾಂತರದಲ್ಲಿ ಜಯದೇವನು ತನ್ನ ಇಷ್ಟದೇವನಾದ ಶ್ರೀಕೃಷ್ಣನ ಪಾದಗಳನ್ನು ಸೇರಿದನು. ಜಯದೇವ ಸರಳಜೀವಿ, ವಿನಯವಂತ, ಅವನದು ಅಕೃತ್ರಿಮ ಸ್ವಭಾವ. ಅಪರಿಗ್ರಹ ಅವನ ಸ್ವಭಾವದಲ್ಲಿಯೇ ಮನೆಮಾಡಿತ್ತು. ಯಾವತ್ತೂ ಶ್ರೀಕೃಷ್ಣ ಧ್ಯಾನದಲ್ಲಿ ಆನಂದ ಮತ್ತು ತನ್ಮಯತೆಗಳನ್ನು ಅವನು ಕಂಡುಕೊಳ್ಳುತ್ತಿದ್ದನು. ಅವನಿಗೆ ಸಂನ್ಯಾಸ ಧರ್ಮದ ತಿರುಳಿನ ಅರಿವಿತ್ತು. ಮಾನಸಿಕವಾಗಿ ಅವನು ಸಂನ್ಯಾಸೀ ಜೀವನವನ್ನೇ ನಡೆಸಿದನು. ತೋರಿಕೆಗೆ ಮಾತ್ರ ಗೃಹಸ್ಥ ಜೀವನವನ್ನು ನಡೆಸಿದನು.

ಗೌಡೀಯ ಸಂಪ್ರದಾಯದ ಪ್ರಕಾರ ಜಯದೇವನ ಕಥೆ ಇದಕ್ಕಿಂತ ಸಂಪೂರ್ಣ ಭಿನ್ನವಾಗಿದೆ. ತಂದೆ ತಾಯಿಗಳ ಹೆಸರು, ಹುಟ್ಟಿದ ಊರು, ವೃತ್ತಾಂತಗಳು ಎಲ್ಲವೂ ಬೇರೆಯ ರೀತಿ ಇವೆ. ಆ ಕಥೆಯಲ್ಲಿ ಅವನು ಬೃಂದಾವನಕ್ಕೆ ಹೋದುದರ ವರ್ಣನೆ ಬರುತ್ತದೆ. ಅಲ್ಲಿ ರಾಧಾ–ಮಾಧವ ವಿಗ್ರಹವನ್ನು ಅವನು ಪೂಜಿಸುತ್ತಿದ್ದನಂತೆ. ಅದು ಇಂದೂ ಜೈಪುರದ ಮಂದಿರದಲ್ಲಿ ಇದೆ ಎಂದು ಹೇಳುತ್ತಾರೆ. ಜಯದೇವನು ಬಂಗಾಳದ ನವದ್ವೀಪದಲ್ಲಿ ನೆಲೆಸಿದ್ದನು; ಬಂಗಾಳದ ರಾಜ ಲಕ್ಷ್ಮಣಸೇನನು ಜಯದೇವನ ಶಿಷ್ಯನಾಗಿದ್ದನು ಎಂದೂ ತಿಳಿಸಲಾಗಿದೆ. ಈ ರಾಜನು ಚಂಪಕಹಟ್ಟ ಎಂಬ ಚಂಪಕ ಹೂವಿನ ಮರಗಳಿರುವ ಉದ್ಯಾನವನವನ್ನು ಜಯದೇವನಿಗೆ ವಾಸಕ್ಕಾಗಿ ನೀಡಿದನು ಎಂಬ ಐತಿಹ್ಯವೂ ಇದೆ. ಕೆಲವು ಘಟನೆಗಳು ಸಮಾನವಾಗಿಯೂ ಇದೆ. ಉದಾಹರಣೆಗೆ ಪದ್ಮಾವತಿಯ ಜೊತೆಗಿನ ವಿವಾಹ. ಜಯದೇವನ ಈ ಭಕ್ತಿಮಾರ್ಗವು ಮುಂದೆ ಚೈತನ್ಯ ಮಹಾಪ್ರಭುವಿನ ನೇತೃತ್ವದಲ್ಲಿ ಮಹಾ ಆಂದೋಲನವಾಗಿ ಬೆಳೆಯಿತು. ಚೈತನ್ಯ ಮಹಾಪ್ರಭುವೂ 'ಗೀತಗೋವಿಂದ'ವನ್ನು ಬಹಳ ಮೆಚ್ಚಿಕೊಂಡಿದ್ದನು. ಮತ್ತೆ ಮತ್ತೆ ಅದರಲ್ಲಿನ ಅಷ್ಟಪದಿ ಹಾಡುಗಳನ್ನು ಹಾಡಿಕೊಳ್ಳುತ್ತಿದ್ದನು. ಈ ಮಹಾನ್ ಗ್ರಂಥದ ಮತ್ತೊಂದು ಪದ್ಯದ ಮೂಲಕವೇ ಭಕ್ತ ಸಂತ ಜಯದೇವನ ಪುಣ್ಯ ಕಥಾನಕಕ್ಕೆ ಮಂಗಳವನ್ನು ಹಾಡೋಣ:

ಪ್ರಲಯ ಪಯೋಧಿ ಜಲೇ ಧೃತವಾನಸಿ ವೇದಮ್
ವಿಹಿತ ವಹಿತ್ರ ಚರಿತ್ರಮಖೇದಮ್ ।
ಕೇಶವ! ಧೃತ ಮೀನಶರೀರ ! ಜಯ ಜಗದೀಶ ಹರೇ ॥

ಕ್ಷತ್ರಿಯ ರುಧಿರಮಯೇ ಜಗದಪಗತಪಾಪಂ
ಸ್ನಪಯಸಿ ಪಯಸಿ ಶಮಿತಭವತಾಪಮ್ ।
ಕೇಶವ! ಧೃತ ಭೃಗುಪತಿರೂಪ ! ಜಯ ಜಗದೀಶ ಹರೇ ॥

ವಿತರಸಿ ದಿಕ್ಷು ರಣೇ ದಿಕ್ಪತಿ ಕಮನೀಯಂ
ದಶಮುಖಮೌಲಿಬಲಿಂ ರಮಣೀಯಮ್।
ಕೇಶವ! ಧೃತ ರಾಮಶರೀರ ! ಜಯ ಜಗದೀಶ ಹರೇ ॥

ನಿಂದಸಿ ಯಜ್ಞವಿಧೇರಹಹ ಶ್ರುತಿಜಾತಂ
ಸದಯ ಹೃದಯ ದರ್ಶಿತ ಪಶುಘಾತಮ್ ।
ಕೇಶವ! ಧೃತ ಬುದ್ಧಶರೀರ ! ಜಯ ಜಗದೀಶ ಹರೇ ॥

ಶ್ರೀಜಯದೇವ ಕವೇರಿದಮುದಿತಮುದಾರಂ
ಶೃಣು ಶುಭದಂ ಸುಖದಂ ಭವಸಾರಮ್ ।
ಕೇಶವ! ಧೃತ ದಶವಿಧರೂಪ ! ಜಯ ಜಗದೀಶ ಹರೇ ॥

ಕನ್ನಡ ಅನುವಾದ:

ಪ್ರಳಯ ಸಮುದ್ರದಲ್ಲಿ ನಿಮಗ್ನವಾದ ವೇದಗಳನ್ನು ನೌಕೆಯಲ್ಲಿ ತುಂಬುವಂತೆ ಮತ್ಸ್ಯರೂಪವನ್ನು ಧರಿಸಿ ಅನಾಯಾಸವಾಗಿ ರಕ್ಷಿಸಿದೆ. ಅಂಥ ಜಗತ್ಪತಿಯಾದ ಹೇ ಕೇಶವನೆ, ನಿನಗೆ ನಮಸ್ಕಾರ.

ಲೋಕಕಂಟಕರಾದ ಕ್ಷತ್ರಿಯರ ಪಾಪಲೇಪದಿಂದ ಕಳಂಕಿತವಾದ ಭೂಮಿಯನ್ನು ಅವರ ರಕ್ತಜಲದಿಂದ ತೊಳೆದಂತೆ, ಭವತಾಪವನ್ನು ಉಪಶಮನಗೊಳಿಸಿದ ಪರಶುರಾಮನ ರೂಪಧಾರಿಯಾದ ಜಗದೀಶನೆ, ನಿನಗೆ ನಮಸ್ಕಾರ.


ಕೇಶವನೆ, ರಾಮಶರೀರವನ್ನು ಧರಿಸಿ, ರಮಣೀಯವಾದ ರಣಯಜ್ಞದಲ್ಲಿ ದಿಕ್ಪಾಲಕರಿಗೆ ಪ್ರಿಯವಾದ ರಾವಣನ ತಲೆಗಳನ್ನು ಬಲಿಗೊಡುತ್ತಿರುವೆ. ಜಗತ್ಪತಿಯೆ, ನಿನಗೆ ನಮಸ್ಕಾರ.


ಬುದ್ಧಶರೀರಿಯಾಗಿ ಯಜ್ಞಯಾಗಗಳಲ್ಲಿ ಪಶುಬಲಿಯನ್ನು ವಿಧಿಸುವ ವೇದಗಳನ್ನು ಖಂಡಿಸಿ, ಸರ್ವಭೂತಾನುಕಂಪವನ್ನು ಪ್ರಕಟಿಸಿದ ಕರುಣಾಮೂರ್ತಿ ಹೇ ಜಗದೀಶನೆ, ನಿನಗೆ ನಮಸ್ಕಾರ.


ಸುಖಕರವೂ, ಶುಭಕರವೂ, ಉದಾರವೂ ಗಂಭೀರವೂ ಆದ ದಶಾವತಾರ ವರ್ಣನರೂಪಿಯಾದ ಜಯದೇವಕವಿಯ ಮಾತುಗಳನ್ನು ಆಲಿಸಿ. *(ಗೀತಗೋವಿಂದ, ಸರ್ಗ ೧., ಅಷ್ಟಪದಿ ೧)*


ಗಂಗಾನದಿಯ ಮಹಾತ್ಮೆ

ಕಥೆ : ಕೆ. ಅಳಗರಾಜ **ಮೂಲ : 'ರ್‍ಯಾಂಬಲ್ಸ್ ಇನ್ ವೇದಾಂತ್'** **ಚಿತ್ರ: ಕೋವಿ**




4
ಆ ಆರ್ತನಾದವನ್ನು ಕೇಳಿ, ಏನಾಯಿತೆಂದು ವಿಚಾರಿಸಲು ಹಲವು ಮಂದಿ ಅವರ ಸುತ್ತ ಗುಂಪುಗಟ್ಟಿದರು.
ನಿನಗೆ ಏನು ಸಹಾಯ ಬೇಕು, ನಮಗೆ ಹೇಳು.
ಹೇಗೆ ಹೇಳಲಿ, ತಾಯಿ! ಇಲ್ಲಿ ಶವವಾಗಿ ಬಿದ್ದಿರುವವನು ನನ್ನ ಗಂಡ. ಅವನು ತನ್ನ ಕೊನೆಯ ದಿನಗಳನ್ನು ಗಂಗಾತೀರದಲ್ಲಿ ಕಳೆಯಲು ಇಚ್ಛಿಸಿದ್ದನು. ಹಾಗಾಗಿ, ಬಹಳ ದೂರದಿಂದ ನಾವು ಬಂದಿದ್ದೇವೆ. ಇಲ್ಲಿ ಈಗ ಹೀಗಾಯಿತು.
ಎಲ್ಲವೂ ವಿಧಿಲಿಖಿತ. ನೀನು ಬಹಳ ಅಸಹಾಯಕಳಾಗಿ ಕಾಣುತ್ತೀಯೆ. ನಿನಗೆ ಏನು ಸಹಾಯ ಬೇಕಾದರೂ ನಾವು ಒದಗಿಸುತ್ತೇವೆ. ನಮ್ಮನ್ನು ಕೇಳು.
5
ಈಗ ಅಂತ್ಯಸಂಸ್ಕಾರಗಳನ್ನು ನೆರವೇರಿಸಬೇಕಾಗಿದೆ. ಯಾರು ನನಗೆ ಸಹಾಯ ಮಾಡಲು ಮುಂದೆ ಬಂದಾರು, ತಾಯೇ!
ಇಲ್ಲಿ ಸಹಾಯ ಮಾಡುವ ಜನರಿಗೇನೂ ಕೊರತೆ ಇಲ್ಲ. ನಾವಿಲ್ಲಿ ಇಷ್ಟೊಂದು ಮಂದಿ ಇದ್ದೇವೆ, ಚಿಂತಿಸಬೇಡ.
6
ಆ ವಿಧವೆಯನ್ನು ಹಲವು ರೀತಿಯಿಂದ ಸುಲಿಗೆ ಮಾಡಬಹುದೆಂಬ ಆಸೆಯಿಂದ ಹಲವು ಮಂದಿ ಅವಳ ಸಹಾಯಕ್ಕೆ ಮುಂದೆ ಬಂದರು. ಕೆಲವರಿಗೆ ಅವಳ ಆಭರಣಗಳ ಮೇಲೂ ದೃಷ್ಟಿ ಬಿದ್ದಿತ್ತು.
ಮಗಳೇ, ನಿನಗೇನು ಬೇಕು, ನನಗೆ ಹೇಳು. ನಾನದನ್ನು ತಕ್ಷಣವೇ ಒದಗಿಸಿಕೊಡುತ್ತೇನೆ.
ನಾನಿಲ್ಲಿದ್ದೇನೆ, ನನಗೆ ಹೇಳು.
ವ್ಯಥಾ ಮಾತುಗಳೇಕೆ? ನಾನು ನಿನ್ನ ಪತಿಯನ್ನು ನನ್ನ ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಅಂತ್ಯ ಸಂಸ್ಕಾರಗಳನ್ನು ಮಾಡಿಬಿಡುತ್ತೇನೆ.
ನಿಮಗೆಲ್ಲರಿಗೂ ನನ್ನ ಕೃತಜ್ಞತೆಗಳು. ಆದರೆ ಒಂದು ಷರತ್ತಿದೆ. ನಿಮ್ಮಲ್ಲಿ ಯಾರು ದೇಹ ಮತ್ತು ಮನಸ್ಸುಗಳಿಂದ ಪವಿತ್ರರಾಗಿರುವಿರೋ, ಅವರು ಮಾತ್ರ ಈ ಅಂತ್ಯಸಂಸ್ಕಾರ ಮಾಡಲು ಅರ್ಹರು.


7
ಈ ಮಾತುಗಳನ್ನು ಕೇಳಿದೊಡನೆ, ಆ ನಾರಿಯ ಸೌಂದರ್ಯದಿಂದ ಆಕರ್ಷಿತರಾಗಿ ಮುಂದೆ ಬಂದ ಹಲವರು ನಿಶ್ಚೇಷ್ಟಿತರಾದರು. ಅವಳ ಒಡವೆಗಳ ಮೇಲೆ ಕಣ್ಣಿಟ್ಟಿದ್ದ ಕೆಲವರು ಅಲ್ಲಿಂದ ಕಾಲು ಕಿತ್ತರು. ಉಳಿದ ಕೆಲವರು ತಮ್ಮ ದೈಹಿಕ ಮಾನಸಿಕ ಶೌಚದ ಬಗ್ಗೆ ಅನುಮಾನವಿದ್ದವರು ಹಿಂದೆ ಮುಂದೆ ನೋಡತೊಡಗಿದರು.
ಈ ದೊಡ್ಡ ಗುಂಪಿನಲ್ಲಿ ಪವಿತ್ರ ಮನಸ್ಸಿನವರು ಒಬ್ಬರೂ ಇಲ್ಲವೆ? ನನ್ನ ಪತಿಯ ಅಂತ್ಯ ಸಂಸ್ಕಾರಗಳನ್ನು ಮಾಡಲು ನನಗಾರೂ ಸಿಗಲಾರರೆ?
ಒಂದೇ ಒಂದು ಪಾಪಕೃತ್ಯವನ್ನೂ ಮಾಡದ ವ್ಯಕ್ತಿ ಇರಲು ಸಾಧ್ಯವೆ? ಎಂತಹ ಮೂರ್ಖ ಷರತ್ತು? ಹೀಗೆ ಎಣಿಸಿ ಜನರ ಗುಂಪು ಕರಗತೊಡಗಿತು. ಉಳಿದ ಮಂದಿ ಈ ಅಭಾಗ್ಯೆಗೆ ಯಾವುದೇ ಸಹಾಯ ಮಾಡಲು ಸಾಧ್ಯವಾಗುತ್ತಿಲ್ಲವಲ್ಲ ಎಂದು ಮರುಗಿದರು. ಅಷ್ಟರಲ್ಲಿ ಒಬ್ಬ ತರುಣನು ಅಲ್ಲಿ ಪ್ರತ್ಯಕ್ಷನಾದನು.
8
ತಂಗಿ, ನಾನು ನಿನ್ನ ಸಮಸ್ಯೆಯನ್ನು ಪರಿಹರಿಸುತ್ತೇನೆ.
ಸೋದರ, ನಿನಗೆ ನನ್ನ ಷರತ್ತು ತಿಳಿದಿದೆಯಲ್ಲ! ಕೇವಲ ಹೃದಯ ಶುದ್ಧಿ ಇರುವವನು ಮಾತ್ರ ನನ್ನ ಪತಿಯ ಅಂತ್ಯಸಂಸ್ಕಾರವನ್ನು ಮಾಡಬಹುದು.
ಹೌದು ತಂಗಿ, ನನಗೆ ತಿಳಿದಿದೆ.ನೀನು ಸ್ವಲ್ಪ ಹೊತ್ತು ಕಾಯಬೇಕಾಗಬಹುದು.
9
ಅವನು ಗಂಗಾನದಿಯಲ್ಲಿ ಶೀಘ್ರವಾಗಿ ಒಂದು ಮುಳುಗು ಹಾಕಿ ಮೇಲೆದ್ದು ಬಂದನು.
ನಾನೀಗ ನಿನ್ನ ಗಂಡನ ಅಂತ್ಯಸಂಸ್ಕಾರವನ್ನು ಮಾಡಲು ಸಿದ್ಧನಾಗಿ ಬಂದಿದ್ದೇನೆ.
ಎಲೋ ಹುಡುಗ, ನಿನ್ನನ್ನು ನಂಬಲು ನಾವೇನು ಮೂರ್ಖರೆ? ನೀನು ಹೃದಯಶುದ್ಧಿಯವನೆಂದು ಹೇಗೆ ನಂಬುವುದು? ನೀನು ಯಾರನ್ನು ಮೋಸಗೊಳಿಸಲು ಯತ್ನಿಸುತ್ತಿದ್ದೀಯಾ?



12

ಕೆಲವರ ಶ್ರದ್ಧೆ ‘ಅಂಧಶ್ರದ್ಧೆ’ ಎಂದು ಟೀಕಿಸಿದ ಶಿಷ್ಯನೊಬ್ಬನಿಗೆ ಶ್ರೀರಾಮಕೃಷ್ಣರು ಹೀಗೆ ಉತ್ತರಿಸಿದರು: ‘‘ಒಳ್ಳೆಯದು, ಈ ‘ಅಂಧಶ್ರದ್ಧೆ’ ಎಂದರೆ ಏನೆಂದು ನೀನು ನನಗೆ ವಿವರಿಸಿ ಹೇಳಬಲ್ಲೆಯಾ? ಶ್ರದ್ಧೆಯು ಸಂಪೂರ್ಣವಾಗಿ ಕುರುಡು, ಅಲ್ಲವೆ? ಹಾಗಾದರೆ ಅದರ ಕಣ್ಣುಗಳು ಯಾವುವು? ಒಂದೋ ಶ್ರದ್ಧೆ ಅಥವಾ ಜ್ಞಾನ ಎಂದು ಹೇಳು. ಇಲ್ಲವಾದರೆ ಕೆಲವರಲ್ಲಿ ಶ್ರದ್ಧೆ ಕುರುಡಾಗಿದ್ದು ಕೆಲವರಲ್ಲಿ ‘ಕಾಣುವಂತೆ’ ಇದೆ ಎಂಬ ಈ ಹುಸಿನುಡಿ ಏಕೆ?’’



ಜೂನ್ ತಿಂಗಳಲ್ಲಿ ನಡೆದ ಮಹತ್ವದ ಘಟನಾವಳಿಗಳು



೧. ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರ ಮಹಾಸಮಾಧಿ: ರಾಮಕೃಷ್ಣ ಮಹಾಸಂಘದ ೧೫ನೇ ಪರಮಾಧ್ಯಕ್ಷರಾದ ಪೂಜ್ಯ ಸ್ವಾಮೀಜಿಯವರು **ಜೂನ್ ೧೮ರಂದು** ಮಹಾಸಮಾಧಿಯನ್ನು ಹೊಂದಿದರು. ಅವರ ಕಳೇಬರವನ್ನು ಸೇವಾ ಪ್ರತಿಷ್ಠಾನ ಆಸ್ಪತ್ರೆಯಿಂದ ಬೇಲೂರು ಮಠಕ್ಕೆ ತಂದು, ಅಲ್ಲಿನ ಸಾಸಂಸ್ಕೃತಿಕ ಭವನದಲ್ಲಿ ಇಡಲಾಯಿತು. ದಿನಾಂಕ ೧೯ ರಂದು ಸಹಸ್ರಾರು ಮಂದಿ ಭಕ್ತರು ಮಹಾರಾಜರ ಅಂತಿಮ ದರ್ಶನವನ್ನು ಪಡೆದರು. ರಾತ್ರಿ ೯.೩೦ ಕ್ಕೆ ಅಂತ್ಯ ಸಂಸ್ಕಾರ ನಡೆಯಿತು. ಜೂನ್ ೩೦ರಂದು ಬೇಲೂರು ಮಠ ಹಾಗೂ ಎಲ್ಲ ಶಾಖಾಕೇಂದ್ರಗಳಲ್ಲಿ ಪೂಜ್ಯರ ಸ್ಮರಣಾರ್ಥ ವಿಶೇಷಪೂಜೆ, ಭಂಡಾರ (ವಿಶೇಷ ಭೋಜನ) ಹಾಗೂ ಶ್ರದ್ಧಾಂಜಲಿ ಕಾರ್ಯಕ್ರಮಗಳು ನಡೆದವು. ಈ ಸಂದರ್ಭದಲ್ಲಿ ಪೂಜ್ಯ ಸ್ವಾಮೀಜಿಯವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು (ಆಂಗ್ಲಭಾಷೆಯಲ್ಲಿ) ಹೊರ ತರಲಾಯಿತು.



೨. ಮೌಲ್ಯ ಶಿಕ್ಷಣ ಕಾರ್ಯಕ್ರಮಗಳು: ದೆಹಲಿ ಆಶ್ರಮವು ಜೂನ್ ೫ರಿಂದ ೨೯ರ ವರೆಗೆ ೧೬ ಮೌಲ್ಯಶಿಕ್ಷಣ *ವಿಚಾರ ಸಂಕಿರಣ* ಗಳನ್ನು ಏರ್ಪಡಿಸಿತು. ದೆಹಲಿಯೂ ಸೇರಿದಂತೆ ೧೦ ಪ್ರದೇಶಗಳಲ್ಲಿ ನಡೆದ ಈ ಕಾರ್ಯಕ್ರಮಗಳಲ್ಲಿ ೯೫೮ ಮಂದಿ ಪ್ರಾಂಶುಪಾಲರು ಹಾಗೂ ಆಧ್ಯಾಪಕರುಗಳು ಭಾಗವಹಿಸಿದರು. **ಕಾಂಕುರಗಾಛಿ ಆಶ್ರಮವು** ಜೂನ್ ೨೩ರಂದು ಹೂಗ್ಲಿ ಜಿಲ್ಲೆಯ ರಾಮನಗರದಲ್ಲಿ ಮೌಲ್ಯಶಿಕ್ಷಣ *ವಿಚಾರ ಸಂಕಿರಣ* ವನ್ನು ಏರ್ಪಡಿಸಿತು. ಇದರಲ್ಲಿ ೧೭೫ ಮಂದಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೊಚ್ಚಿ ಆಶ್ರಮವು ಜೂನ್ ೮ರಿಂದ ೧೧ರ ವರೆಗೆ *'ವ್ಯಕ್ತಿತ್ವ ವಿಕಸನ ಶಿಬಿರ'* ವನ್ನು ನಡೆಸಿತು. ಇದರಲ್ಲಿ ೩೦ ಮಂದಿ ಯುವಕರು ಭಾಗವಹಿಸಿದ್ದರು.

ಪುರುಲಿಯಾ ವಿದ್ಯಾಪೀಠವು ಮೇ ೨೯ರಿಂದ ಜೂನ್ ೧ರ ತನಕ ಮೌಲ್ಯ ಶಿಕ್ಷಣವನ್ನು ಕುರಿತ ಆವಾಸಿ ಶಿಬಿರವನ್ನು ಏರ್ಪಡಿಸಿತು. ಇದರಲ್ಲಿ ೮೬ ಮಂದಿ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು.



೩. ಹೊಸ ಕಟ್ಟಡದ ಉದ್ಘಾಟನೆ: ವೃಂದಾವನ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಆಸ್ಪತ್ರೆಯ ಹೊಸ ಕಟ್ಟಡದ ಉದ್ಘಾಟನೆಯು ಜೂನ್ ೭ ರಂದು ನೆರವೇರಿತು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿ ಮಹಾರಾಜ್ ಕಟ್ಟಡವನ್ನು ಉದ್ಘಾಟಿಸಿದರು. ಇದರೊಂದಿಗೆ ೧೦ ಹಾಸಿಗೆಗಳಿರುವ ತುರ್ತು ಚಿಕಿತ್ಸಾ ಘಟಕವನ್ನೂ ಉದ್ಘಾಟಿಸಲಾಯಿತು. ಈ ಕಾರ್ಯಕ್ರಮಗಳಲ್ಲಿ ಅನೇಕ ಮಂದಿ ಗಣ್ಯರು, ಅತಿಥಿಗಳು, ಸಾಧುಗಳು, ಭಕ್ತರು, ವೈದ್ಯರು, ನರ್ಸ್‌ಗಳು, ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

VIVEKA PRABHA (KANNADA MONTHLY)
August 2017, Vol.18, No.7, No.of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2015-17. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2015-17



Printed at mayur graphics,Bangalore